ಲಂಕೇಶ್

ಡಿಸೆಂಬರ್ 24, 2008 ರೂ. 12/-



ಾಕ್ಟರೇಟಿಗೆ
ೇಟ್ ಎಷ್ಟು?

ಸೀಝರ್ ಹೇಮಂತನ ರಣತಂತ್ರ



ಬೋನಿಗೆ ಬಿದ್ದ ಸುನೀಲ



ಕುಂಚಿಟಿಗರಿಗೇ ಕಂಟಕವಾದ

ಶಾಂತವೀರಸ್ವಾಮಿ



ಉಪ ಚುನಾವಣೆ

ರಭಾವಿ: ಬಾಲಚಂದ್ರನ ಬಾನಗಡಿಗಳು

ವದುರ್ಗ: ಶಿವನಗೌಡನ ಚೆಡ್ಡಿ ಕಳಚಲು ರೆಡಿ

ಡ್ಡಬಳ್ಳಾಪುರ: ಪಕ್ಷಾಂತರಿಗಳ ಕಾರುಬಾರು

ರುವೆಕೆರೆ: ಜಗ್ಗೇಶನ ಮಂಗಾಟ ಬಿಜೆಪಿಗೆ ಸಂಕಟ

ದ್ದೂರು : ತಮ್ಮಣ್ಣ... ನೂರು ಕೋಟಿ ಎಲ್ಲಿಂದ ಬಂತಣ್ಣ

ಕುರ್ಚಿಗಾಗಿ ಸೋನಾಲ್ ಕಸರತ್ತು!



ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬರಾಕ್ ಒಬಾಮಾ ಅವರು ಭಾರತೀಯ ಮೂಲದ ಅರ್ಥಶಾಸ್ತ್ರಜ್ಞೆ ಸೋನಾಲ್ ಷಾ ಅವರನ್ನು ತಮ್ಮ ಸಲಹೆಗಾರರನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹದ್ದೊಂದು ಮಹತ್ವಪೂರ್ಣ ಹುದ್ದೆ ಭಾರತೀಯ ಮೂಲದ ಮಹಿಳೆಯೊಬ್ಬಳಿಗೆ ಸಿಗುತ್ತಿದ್ದಂತೆಯೇ ಭಾರತೀಯ ಮಾಧ್ಯಮಗಳು ಬರಾಕ್ ಒಬಾಮಾ ಅವರನ್ನೂ, ಸೋನಾಲ್ ಅವಳನ್ನೂ ಹಾಡಿ ಹಾಡಿ ಹೊಗಳಿದ್ದರು.

ಆದರೆ, ಭಾರತದಲ್ಲಿ ಕೋಮುಗಲಭೆಗಳನ್ನು ಎಬ್ಬಿಸುತ್ತಾ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಮಾರಣ ಹೋಮಗಳನ್ನು ನಡೆಸುತ್ತಿರುವ ವಿಶ್ವಹಿಂದೂ ಪರಿಷತ್ತಿನೊಂದಿಗೆ ಸೋನಾಲ್ ಷಾ ಸಂಪರ್ಕ ಹೊಂದಿದ್ದಾರೆಂದೂ, ಒಬಾಮಾ ಸೋನಾಲ್‌ರನ್ನು ತಮ್ಮ ಆರ್ಥಿಕ ಸಲಹೆಗಾರರನ್ನಾಗಿ ನೇಮಿಸಿಕೊಂಡಿರುವುದು ಸೂಕ್ತವಲ್ಲವೆಂದೂ ಕೆಲವರು ಆಕ್ಷೇಪಣೆ ಎತ್ತಿದ್ದಾರೆ.

ಯಾವಾಗ ಇಂತಹದ್ದೊಂದು ಅಪಸ್ವರ ಎದ್ದಿತೋ ಸೋನಾಲ್‌ಗೆ ತನ್ನ ಕುರ್ಚಿಯ ಬಗ್ಗೆ ಚಿಂತೆ ಶುರುವಾಗಿಬಿಟ್ಟಿದೆ; ಕೈಗೆ ಬಂದ ತುತ್ತು ಎಲ್ಲಿ ಬಾಯಿಗೆ ಬರದಂತಾಗುತ್ತದೋ ಎಂಬ ಆತಂಕ ಅವರನ್ನು ಕಾಡಲಾರಂಭಿಸಿಬಿಟ್ಟಿದೆ. ಅದಕ್ಕಾಗಿಯೇ ಸೋನಾಲ್ ಗುಜರಾತ್ ನರಮೇಧದಂತಹ ಅಮಾನವೀಯ ನರಹತ್ಯೆಗಳಲ್ಲಿ ವಿಎಚ್‌ಪಿ ತೊಡಗಿದೆ ಎಂಬುದು ತನಗೆ ಮೊದಲೇ ಗೊತ್ತಿದ್ದರೆ ಆ ಸಂಘಟನೆಯೊಂದಿಗೆ ಸಂಪರ್ಕವನ್ನೇ ಇಟ್ಟುಕೊಳ್ಳುತ್ತಿರಲಿಲ್ಲ ಎನ್ನುತ್ತಾ ತಮ್ಮ 'ಮುಗ್ಧತೆ'ಯನ್ನು ಪ್ರದರ್ಶಿಸಲು ಹೆಣಗಾಡುತ್ತಿದ್ದಾರೆ.

ವಿಶ್ವಹಿಂದೂ ಪರಿಷತ್ತು ಎಂಥ ಸಂಘಟನೆ ಎಂಬುದು ಆಕೆಗೆ ನಿಜಕ್ಕೂ ಗೊತ್ತಿರಲಿಲ್ಲವೆ? ಭಾರತದಲ್ಲಿ ಆ ಸಂಘಟನೆ ಏನೆಲ್ಲಾ ದುಷ್ಕೃತ್ಯಗಳನ್ನು ಮಾಡುತ್ತಿದೆ ಎಂಬ ಅರಿವು ಆಕೆಗಿರಲಿಲ್ಲವೇ? ನೆನಪಿರಲಿ, ಸೋನಾಲ್ ವಿಶ್ವಹಿಂದೂ ಪರಿಷತ್ತಿನ ಸಾಮಾನ್ಯ sympathizer ಆಗಿಯೋ ಅಥವಾ ಒಬ್ಬ ಸಾಮಾನ್ಯ ಕಾರ್ಯಕರ್ತೆಯಾಗಿಯೋ ಕೆಲಸ ಮಾಡಿದವರಲ್ಲ, ಅಮೆರಿಕದಲ್ಲಿ ಆ ಸಂಘದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಅದರ ನಾಯಕಿಯೆನಿಸಿಕೊಂಡಾಕೆ. 2001ರಲ್ಲಿ ಗುಜರಾತ್ ಭೂಕಂಪ ಸಂಭವಿಸಿ ಸಂತ್ರಸ್ತರ ಪುನರ್ವಸತಿ-ಪರಿಹಾರಗಳಿಗೆ ಸಂಬಂಧಿಸಿದಂತೆ ಅಮೆರಿಕದಲ್ಲಿ ರೂಪುಗೊಂಡ ವಿಶ್ವಹಿಂದೂ ಪರಿಷತ್ತಿನ ರಾಷ್ಟ್ರೀಯ ಸಮಿತಿಯ National Coordinator ಆಗಿ ಸೋನಾಲ್ ಷಾ ಕಾರ್ಯನಿರ್ವಹಿಸಿದ್ದರು. ಅಂದರೆ ಏಳು ವರ್ಷಗಳ ಹಿಂದೆಯೇ ಆಕೆ ತನ್ನ 33ನೇ ವಯಸ್ಸಿನಲ್ಲಿ ವಿಎಚ್‌ಪಿಯಲ್ಲಿ ಇಂತಹ ಅತ್ಯುನ್ನತ ಹುದ್ದೆಯನ್ನೇರಿದ್ದಳು. ಅದಕ್ಕಿಂತ ಅನೇಕ ವರ್ಷಗಳ ಮೊದಲೇ ಅಮೆರಿಕದ ವಿಎಚ್‌ಪಿ ಸಂಘಟನೆಯಲ್ಲಿ ಆಕೆ ನಾಯಕತ್ವದ ಹುದ್ದೆಯಲ್ಲಿದ್ದು ಸಂಘಕ್ಕಾಗಿ ಕೆಲಸ ಮಾಡಿದ್ದಳು.

2001ರಲ್ಲಿ ಗುಜರಾತ್ ಭೂಕಂಪದ ಸಂತ್ರಸ್ತರಿಗೆ ವಿಶ್ವಹಿಂದೂ ಪರಿಷತ್ತು ಮಾಡಿದ ಉಪಕಾರವಾದರೂ ಏನು ಗೊತ್ತೆ? ಸಂಘಪರಿವಾರವೇ ಸೃಷ್ಟಿಸಿದ India Development and Relief Fund (IDRF) ಎಂಬ ಸಂಘಟನೆಗೆ ಸೋನಾಲ್ ನೇತೃತ್ವದ Indicorps ಸಂಘಟನೆ ಸಾಕಷ್ಟು ಹಣ ಸಹಾಯ ಮಾಡಿದೆಯೆಂದು ಖುದ್ದು IDRF ಹೇಳಿಕೊಂಡಿತು. ಆ ಹೊತ್ತು ಭೂಕಂಪದಿಂದ ಕೇವಲ ಹಿಂದೂಗಳು ಮಾತ್ರ ಹಾನಿಗೊಳಗಾಗಿರಲಿಲ್ಲ, ಎಲ್ಲಾ ಸಮುದಾಯಗಳ ಜನರೂ ಅಪಾರ ಪ್ರಮಾಣದ ಪ್ರಾಣಹಾನಿ, ಆಸ್ತಿ-ಪಾಸ್ತಿ ನಾಶ ಅನುಭವಿಸಿದ್ದರು. ಆದರೆ, ವಿಎಚ್‌ಪಿ ಕೇವಲ ಹಿಂದೂಗಳಿಗೆ ಮಾತ್ರ ತನ್ನ ಪರಿಹಾರಗಳನ್ನು ನೀಡಿತ್ತು, ಮುಸ್ಲಿಮರು ಅಂತಹ ಹೀನ ಪರಿಸ್ಥಿತಿಯಲ್ಲಿ ಬಳಲುತ್ತಿದ್ದಾಗಲೂ ಅವರ ಮೇಲೆ ಸೇಡು ತೀರಿಸಿಕೊಂಡಿತ್ತು, ವಿಎಚ್‌ಪಿಯ ಈ ಅಮಾನವೀಯ ತಾರತಮ್ಯವನ್ನು ಅನೇಕ ಮಾನವ ಹಕ್ಕು ಸಂಘಟನೆಗಳು ಬಯಲಿಗೆಳೆದು ತೀವ್ರವಾಗಿ ಖಂಡಿಸಿದ್ದವು. ಇದರ ಬಗ್ಗೆ National Coordinator ಆಗಿದ್ದ ಸೋನಾಲ್ ಷಾಗೆ ಗೊತ್ತಿರಲಿಲ್ಲವೆ?

2002ರಲ್ಲಿ ಗುಜರಾತ್‌ನಲ್ಲಿ ಮುಖ್ಯಮಂತ್ರಿ ನರೇಂದ್ರ ಮೋದಿಯೇ ಖುದ್ದಾಗಿ ಮೂರು ಸಾವಿರಕ್ಕೂ ಹೆಚ್ಚು ಮುಸ್ಲಿಮರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಿಸಿದ ಮೇಲೆ ಸೋನಾಲ್ ಷಾಳ Indicorps ಸಂಘಟನೆಯ ಕಾರ್ಯಕರ್ತರನ್ನು ಮತ್ತು ಅದನ್ನು ಪ್ರತಿನಿಧಿಸುತ್ತಿದ್ದ ಆಕೆಯ ಸಹೋದರ ಆನಂದ್ ಷಾ ಅವರನ್ನು ನರೇಂದ್ರ ಮೋದಿಯೇ ಖುದ್ದಾಗಿ ಸನ್ಮಾನಿಸಿದ್ದ, ನರೇಂದ್ರ ಮೋದಿಯಂತಹ ನರಹಂತಕ ತನ್ನ ಸಂಘಟನೆಯವರನ್ನು ಸನ್ಮಾನಿಸಿದಾಗ ಅದನ್ನು ತಿರಸ್ಕರಿಸುವುದಕ್ಕೆ ಸೋನಾಲ್ ಯಾಕೆ ಮುಂದೆ ಬಂದಿರಲಿಲ್ಲ?

2004ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದೊಡ್ಡ ಸಭೆ ಏರ್ಪಾಟಾಗಿತ್ತು, ಇಡೀ ಭಾರತೀಯ ಚರಿತ್ರೆಯನ್ನೇ ತಿರುಚಿ ಅದಕ್ಕೆ ಕೋಮುವಾದಿ ಬಣ್ಣ ಬಳಿಯುವುದಕ್ಕೆ ಸಂಬಂಧಿಸಿದಂತೆ ಭಾರಿ ಚರ್ಚೆಗಳಾದವು. ಅದರಲ್ಲಿ ಮುಖ್ಯ ಅತಿಥಿಯಾಗಿ ಇದೇ ಸೋನಾಲ್ ಷಾ ಭಾಗವಹಿಸಿದ್ದಳು. ಆಗಲೂ ಸಂಘಪರಿವಾರದ ಬಗ್ಗೆ ಏನೂ ಗೊತ್ತಿರದ ಮುಗ್ಧೆಯಂತೆ ಭಾಗವಹಿಸಿದ್ದಳೆ?

ಸೋನಾಲ್ ಷಾಳ ತಂದೆ ಬಹಳ ವರ್ಷಗಳಿಂದ ಆರ್‌ಎಸ್‌ಎಸ್‌ನ ಸಕ್ರಿಯ ಕಾರ್ಯಕರ್ತ. ನರಹಂತಕ ಮೋದಿಯ ಪ್ರಬಲ ಬೆಂಬಲಿಗ. ಅದರ ಬಗ್ಗೆಯೂ ಆಕೆಗೆ ಗೊತ್ತಿಲ್ಲವೇ? ವಾಸ್ತವ ಏನೆಂದರೆ ಭಾರತದಲ್ಲಿ ಆಕೆಯ ಇಡೀ ಕುಟುಂಬವೇ ಸಂಘಪರಿವಾರದ ಅಡ್ಡೆಯಂತಿದೆ. ಸೋನಾಲ್ ಷಾ ಅಮೆರಿಕದಲ್ಲಿ ಸಂಘಪರಿವಾರಕ್ಕೆ ಆಧಾರದಂತಿದ್ದಾಳೆ. ಈಗ ಇದೇ ಎಲ್ಲಿ ತನ್ನ ಕುರ್ಚಿಗೆ ಆಪತ್ತು ತರುತ್ತದೋ ಎಂಬ ಆತಂಕದಲ್ಲಿ 'ವಿಎಚ್‌ಪಿ ಇಂಥ ಸಂಘಟನೆ ಅಂತ ಗೊತ್ತಿದ್ದರೆ ನಾನು ಎಂದೂ ಅದರೊಂದಿಗೆ ಸಂಪರ್ಕವಿಟ್ಟುಕೊಳ್ಳುತ್ತಿರಲಿಲ್ಲ' ಎಂದು ಮುಗ್ಧತೆ ಪ್ರದರ್ಶಿಸಲು ಪ್ರಯತ್ನಿಸುತ್ತಿರುವುದು ಹಾಸ್ಯಾಸ್ಪದವಾಗಿದೆ.

ಅಂದಹಾಗೆ, ಸಂಘಪರಿವಾರದಿಂದ ಈಕೆ ಒಂದಿಷ್ಟು distance ಕಾಪಾಡಿಕೊಳ್ಳಲು ಪ್ರಯತ್ನಿಸಿದಷ್ಟೂ ಸಂಘಪರಿವಾರ ಅವಳನ್ನು ಅಪ್ಪಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದೆ. ಖುದ್ದು ಆರೆಸ್ಸೆಸ್ ಸಂಘವೇ ಆಕೆಗೆ ಗುಜರಾತ್‌ನಲ್ಲಿ ಅದ್ದೂರಿ ಸಾರ್ವಜನಿಕ ಸ್ವಾಗತ ಮಾಡಲು ತೀರ್ಮಾನಿಸಿದೆ. ಸೋನಾಲ್ ಷಾ ಇದಕ್ಕೇನು ಹಾರಿಕೆ ಉತ್ತರ ತಯಾರಿಸಿಕೊಂಡಿದ್ದಾಳೋ?

ಉಮಾಭಾರತಿ ಕೇದಾರನಾಥದಲ್ಲೂ ಇಲ್ಲ!

"ಮಧ್ಯಪ್ರದೇಶದಲ್ಲಿ ಗೆದ್ದು ಅಧಿಕಾರ ಹಿಡಿಯುವುದು ನಮ್ಮ ಮುಖ್ಯ ಉದ್ದೇಶವಲ್ಲ, ಬಿಜೆಪಿಯನ್ನು ಸೋಲಿಸುವುದೇ ನಮ್ಮ ಪ್ರಧಾನ ಆದ್ಯತೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ನಾನು ರಾಜಕೀಯ ಸನ್ಯಾಸ ಸ್ವೀಕರಿಸಿ ಹಿಮಾಲಯದಲ್ಲಿರುವ ಕೇದಾರನಾಥಕ್ಕೆ ಹೋಗುತ್ತೇನೆ." ಈ ಮಾತುಗಳನ್ನಾಡಿದ್ದವರು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ, ಬಿಜೆಪಿಯಿಂದ ಹೊರದಬ್ಬಲ್ಪಟ್ಟ ಅರ್ಧ ಸನ್ಯಾಸಿನಿ ಹಾಗೂ ಭಾರತೀಯ ಜನಶಕ್ತಿ ಪಾರ್ಟಿ ಎಂಬ ಹೊಸ ಪಕ್ಷದ ನಾಯಕಿ ಉಮಾ ಭಾರತಿ.


ಮೊನ್ನೆ ಮಧ್ಯಪ್ರದೇಶದ ವಿಧಾನ ಸಭಾ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಒಟ್ಟು 230 ವಿಧಾನಸಭಾ ಸ್ಥಾನಗಳ ಪೈಕಿ 143 ಸ್ಥಾನಗಳನ್ನು ಬಾಚಿಕೊಂಡು ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಇನ್ನು ಕಾಂಗ್ರೆಸ್ ಮತ್ತು ಬಿಎಸ್‌ಪಿಗಳು ಕ್ರಮವಾಗಿ 71 ಮತ್ತು 7 ಸ್ಥಾನಗಳನ್ನು ಗೆದ್ದು ಎರಡು ಮತ್ತು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿವೆ. ಆದರೆ ಉಮಾಭಾರತಿ ನೇತೃತ್ವದ ಭಾರತೀಯ ಜನಶಕ್ತಿ ಪಕ್ಷ 201 ಸ್ಥಾನಗಳಲ್ಲಿ ಸ್ಪರ್ಧಿಸಿ ಕೇವಲ 5 ಸ್ಥಾನಗಳಲ್ಲಿ ಗೆದ್ದಿದೆ. ಈ ಹೀನಾಯ ಸೋಲಿಗೆ ಕಳಶವಿಟ್ಟಂತೆ ಖುದ್ದು ಉಮಾಭಾರತಿ ಏಳು ಸಾವಿರ ಮತಗಳಿಂದ ಸೋತು ನೆಲಕಚ್ಚಿದ್ದಾರೆ.

ಮೊದಲೇ ಕಾವಿಧಾರಿ ಸನ್ಯಾಸಿನಿಯಾಗಿದ್ದ ಉಮಾಭಾರತಿ ಕೊಟ್ಟ ಮಾತಿನಂತೆ ಈಗ ರಾಜಕೀಯ ಸನ್ಯಾಸವನ್ನೂ ಸ್ವೀಕರಿದ್ದಾರೆಯೇ, ಹಿಮಾಲಯದ ಕೇದಾರನಾಥಕ್ಕೆ ಹೋಗಿದ್ದಾರೆಯೇ – ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಹುಡುಕಲು ಹೋದರೆ ಆಕೆ ನಾಪತ್ತೆಯಾಗಿದ್ದಾರೆ. ಇತ್ತ ಮಧ್ಯಪ್ರದೇಶದಲ್ಲೂ ಆಕೆ ಅಡ್ರೆಸ್ಸಿಗಿಲ್ಲ, ಅತ್ತ ಕೇದಾರನಾಥದಲ್ಲೂ ಕಾಣಿಸುತ್ತಿಲ್ಲ.


ಉಮಾಭಾರತಿ ರಾಜಕೀಯ ಸನ್ಯಾಸ ಸ್ವೀಕರಿಸಿದರೆ ಯಾರಿಗಲ್ಲದಿದ್ದರೂ ಅದು ಮಧ್ಯಪ್ರದೇಶದ ಜನರಿಗಂತೂ ಒಳ್ಳೆಯದೆ ಬಿಡಿ. ಈಕೆ ಕಾವಿಧಾರಿಯಾಗಿದ್ದುಕೊಂಡೇ ಬಾಯ್ತೆರೆದರೆ ಮುಸ್ಲಿಮರ ವಿರುದ್ಧ ಕ್ರಿಶ್ಚಿಯನ್ನರ ವಿರುದ್ಧ ಬೆಂಕಿ ಉಗುಳುವುದನ್ನೇ ಕಾಯಕ ಮಾಡಿಕೊಂಡಿದ್ದರು. ಬಹುಸಂಖ್ಯಾತ ಹಿಂದೂಗಳ ಮನಸ್ಸಿನಲ್ಲಿ ಈ ಕೋಮು ದ್ವೇಷದ ಜ್ವಾಲೆಯನ್ನು ಹೊತ್ತಿಸಿಯೇ 2004ರ ಚುನಾವಣೆಯಲ್ಲಿ ಅಚ್ಚರಿ ಮೂಡಿಸುವಂತೆ ಮೂರನೇ ಎರಡರಷ್ಟು ಬಹುಮತದಿಂದ ಬಿಜೆಪಿಯನ್ನು ಗೆಲ್ಲಿಸಿ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

ಕೇವಲ ಮಧ್ಯಪ್ರದೇಶದಲ್ಲಿ ಮಾತ್ರವಲ್ಲ, ಇಡೀ ದೇಶದಾದ್ಯಂತ ಕೋಮು ದಳ್ಳುರಿ ಹಚ್ಚುವುದಕ್ಕಾಗಿ ಏನೆಲ್ಲಾ ಪ್ರಯತ್ನ ಮಾಡಿದ್ದರು. ಈ ಮಹತ್ಕಾರ್ಯದ ಭಾಗವಾಗಿಯೇ ಕರ್ನಾಟಕದ ಹುಬ್ಬಳ್ಳಿಗೂ ಬಂದು ಈದ್ಗಾ ಮೈದಾನದಲ್ಲಿ ಉದ್ರೇಕಕಾರಿ ಭಾಷಣ ಮಾಡಿ ಬೆಂಕಿ ಹಚ್ಚಿ ಹೋಗಿದ್ದರು. ಆನಂತರ ನಡೆದ ಕೋಮುಗಲಭೆಗಳಲ್ಲಿ ಅನವಶ್ಯಕವಾಗಿ ನಾಲ್ವರು ಅಮಾಯಕರು ಮಡಿದಿದ್ದರು.


ಕೊನೆಗೆ ಬಿಜೆಪಿಯೊಳಗಿನ ಒಳಜಗಳವೇ ತಾರಕಕ್ಕೇರಿ ಹುಬ್ಬಳ್ಳಿ ಗಲಭೆಗೆ ಸಂಬಂಧಿಸಿದಂತೆ ಆಕೆಯ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಾಗಿದ್ದನ್ನೇ ನೆಪವಾಗಿಸಿಕೊಂಡು ಮುಖ್ಯಮಂತ್ರಿ ಹುದ್ದೆಯಿಂದ ಹೊರದಬ್ಬಲಾಗಿತ್ತು. ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಉಮಾಭಾರತಿ ವಿರುದ್ಧದ ದೂರನ್ನು ರಾಜ್ಯ ಸರ್ಕಾರ ವಾಪಸ್ಸು ಪಡೆಯಬಾರದೆಂದು 'ಲಂಕೇಶ್' ವಾರ ಪತ್ರಿಕೆಯ ಸಂಪಾದಕಿ ಗೌರಿ ಲಂಕೇಶ್ ಸೇರಿದಂತೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕೆಲವರು ಹುಬ್ಬಳ್ಳಿ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. ಆ ದೂರನ್ನು ಅಂದು ನ್ಯಾಯಾಲಯ ತಿರಸ್ಕರಿಸಿತ್ತಾದರೂ ಆನಂತರ ಬಿಜೆಪಿಯ ಹಲವರು ಕೋಮು ಸೌಹಾರ್ದ ವೇದಿಕೆಯವರನ್ನು ಸಂಪರ್ಕಿಸಿ ಉಮಾ ಭಾರತಿ ವಿರುದ್ಧದ ದೂರನ್ನು ರಾಜ್ಯ ಹೈಕೋರ್ಟಿನಲ್ಲೂ ಪ್ರಶ್ನಿಸಬಾರದೇಕೆ ಎಂದು ಕುಮ್ಮಕ್ಕು ನೀಡಲು ನೋಡಿದ್ದರು. ಆದರೆ ಅವರ ಆ ತಂತ್ರದ ಹಿಂದೆ ಉಮಾಭಾರತಿಯನ್ನು ಹೆಣೆಯುವ ತರ್ಕ ಅಡಗಿದೆ ಎಂದು ಅರ್ಥಮಾಡಿಕೊಂಡ ವೇದಿಕೆ ಸುಮ್ಮನಾಗಿತ್ತು.




ಆನಂತರ ಉಮಾಭಾರತಿಯೇ ಬಿಜೆಪಿ ನಾಯಕ ಲಾಲ್ ಕೃಷ್ಣ ಅಡ್ವಾನಿಯೊಂದಿಗೆ ಸಾರ್ವಜನಿಕವಾಗಿ ಕಿತ್ತಾಡಿಕೊಂಡು ಆ ಪಕ್ಷದಿಂದಲೇ ವಜಾಗೊಂಡಿದ್ದರು. ಆದರೂ ಆಕೆಯ ಬಾಯಿಗೇನೂ ಬೀಗ ಬಿದ್ದಿರಲಿಲ್ಲ. ತನ್ನದೇ ಆದ ಭಾರತೀಯ ಜನಶಕ್ತಿ ಪಕ್ಷವನ್ನು ಕಟ್ಟಿಕೊಂಡು ಬಿಜೆಪಿಗೆ ಸೆಡ್ಡು ಹೊಡೆಯಲು ಸಜ್ಜಾಗಿದ್ದರು. ಆದರೆ ಈಗ ಹೇಳುವುದಕ್ಕೆ ಹೆಸರಿಲ್ಲದಂತೆ ನೆಲಕಚ್ಚಿ ಅನಾಥರಾಗಿದ್ದಾರೆ. ಮಧ್ಯಪ್ರದೇಶದ ಜನ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತಂದು ಕಳೆದ ಬಾರಿ ಮಾಡಿದ ತಪ್ಪನ್ನು ಮತ್ತೆ ಮಾಡಿದ್ದು ನಿಜವಾದರೂ ಉಮಾಭಾರತಿಯಂಥ ವಿಷಜಂತುಗೆ ಹೆಡೆಮುರಿಕಟ್ಟಿ ಒಂದು ಒಳ್ಳೆಯ ಕೆಲಸವನ್ನೂ ಮಾಡಿದ್ದಾರೆ.









ಯೋಧ ಸಂದೀಪನ ಬದುಕಿನ ಕ್ಷಣಗಳು

ಮುಂಬೈನಲ್ಲಿ ಉಗ್ರರ ಗುಂಡಿಗೆ ಬಲಿಯಾಗುವ ಮುನ್ನಿನ ಮೇಜರ್ ಸಂದೀಪ ಫೋಟೋಗಳಿವು. ತನ್ನ ಗೆಳೆಯರೊಂದಿಗೆ ಹಂಪಿಗೆ ಹೋಗಿದ್ದ ಸಂದೀಪ್ ಎಷ್ಟು ಚೆಂದಗೆ ನಗುತ್ತಿದ್ದಾನೆ. ಎಷ್ಟು ಸರಳವಾಗಿ, ನಿರ್ಮಲ ಮನಸ್ಸಿನ ಯುವಕನಂತೆ ಕಾಣುತ್ತಿದ್ದಾನೆ ನೋಡಿ.
ಕೋಮುವಾದ ಹಾಗೂ ಭಯೋತ್ಪಾದನೆಗೆ ಸಂದೀಪನಂತಹ ಯೋಧರು ಬಲಿಯಾದದ್ದು ವಿಷಾದ ಹುಟ್ಟಿಸುತ್ತಿದೆ..

ಲಂಕೇಶ್

..ಂಭತ್ತು ಹನ್ನೊಂದಲ್ಲ, ನವೆಂಬರ್ ಸೆಪ್ಟೆಂಬರ್ ಅಲ್ಲ



ಕಂಡಹಾಗೆ

■ ಗೌರಿ ಲಂಕೇಶ್

ಹಲವೊಮ್ಮೆ ಹೀಗೆ ಆಗುತ್ತದೆ. ನಮ್ಮ ಎಲ್ಲಾ ..ಜನೆಗಳು, ಕೆಲಸಗಳು, ಕಾರ್ಯಗಳು ನಮ್ಮ ನಿಯಂತ್ರಣ ..ರದ ಕಾರಣಗಳಿಗೆ ಸ್ಥಗಿತಗೊಳ್ಳುತ್ತವೆ. ಆಗ ಹಲವಾರು ..ಟೆಗಳು, ದಿನಗಳು ಕಳೆದುಹೋಗಿ ಒಂದೇ ಒಂದು ..ಸವೂ ಆರಂಭಗೊಳ್ಳದಂತೆ ಅಥವಾ ಸಂಪೂರ್ಣಗೊಳ್ಳ..ತೆ ತಡೆಯುತ್ತವೆ. ನನಗೆ ಈ ವಾರ ಆಗಿದ್ದೂ ಅದೇ.

.. ಸೋಮವಾರ ಒಂದಿಷ್ಟು ಕೆಲಸ ಮುಗಿಸಿ, ಮಂಗಳ..ರ ತೋಟದಲ್ಲಿ ಜನಿಸಿದ್ದ ಹೊಸ ಕರುವನ್ನು ತೋರಿಸಲು ..ಎರ್ ಮತ್ತು ಇಶಾಳನ್ನು ಕರೆದುಕೊಂಡು ಹೋಗಿದ್ದೆ. ..ೇ ಸಂಜೆ ಬೆಂಗಳೂರಿಗೆ ವಾಪಸ್ಸು ಬಂದು ಗುಲ್ಬರ್ಗಾಕ್ಕೆ ..ಲು ಬಸವಾ ಎಕ್ಸ್‌ಪ್ರೆಸ್ ರೈಲು ಹತ್ತಿದೆ. ಅಲ್ಲಿಂದ ..ವೂ ಕೈತಪ್ಪಿ ಹೋಯಿತು. ಒಂದು ದಿನದ ಬದಲಾಗಿ ..ು ದಿನ ಅಲ್ಲೇ ಕಳೆಯುವಂತಾಯಿತು. ಕೊನೆಗೂ ..ವಾರ ಬೆಳಗ್ಗೆ ಬೆಂಗಳೂರಿಗೆ ವಾಪಸ್ಸು ಬಂದು ಪತ್ರಿಕೆ ..ವನ್ನು ಪ್ರಾರಂಭಿಸಿ ಈ ಸಂಚಿಕೆಗೆ ರೂಪು ಕೊಡುವ ..ರ್ಯದಲ್ಲಿ ತೊಡಗಿದ್ದಾಗಲೇ ನನ್ನ ತಮ್ಮ ಅಜಿತು ಫೋನ್ ..ಿ ತನ್ನನ್ನು ಸಿಸಿಬಿ ಪೊಲೀಸರು ಬಂಧಿಸಿರುವುದಾಗಿ ..ದ. ಕೂಡಲೇ ಸಿಸಿಬಿ ಸ್ಟೇಷನ್ನಿಗೆ ಧಾವಿಸಿ ಆತನಿಗೆ ..ು ನೀಡಲು ಮುಂದಾದೆ. ಅವತ್ತು ಮನೆಗೆ ಹಿಂದಿರುಗಿ.. ರಾತ್ರಿ ಮೂರು ಗಂಟೆಯಾಗಿತ್ತು. ಶನಿವಾರ ಬೆಳಗ್ಗೆ ..ದಲೇ ಆತನಿಗೆ ಜಾಮೀನು ಕೊಡಿಸುವ ಕೆಲಸ ..ಂಭವಾಗಿ ಅದೆಲ್ಲ ಅಂತ್ಯಗೊಂಡಿದ್ದು ಸಂಜೆ ಐದಕ್ಕೆ. ..ಸಿಗೆ ವಾಪಸ್ಸು ಬಂದಾಗ ದೈಹಿಕ ಮತ್ತು ಮಾನಸಿಕ ..ವು ಆವರಿಸಿಕೊಂಡಿತ್ತು. ಆದರೂ ಈ ಸಂಚಿಕೆ ..ಾಗದಂತೆ ಇದ್ದ ಕೆಲಸಗಳನ್ನು ಮುಗಿಸಿದ್ದಾಯಿತು.

..ದನ್ನೆಲ್ಲ ಹೇಳುತ್ತಿರುವುದಕ್ಕೆ ಕಾರಣ ಇದೆ. ..ಾರದ ಕಂಡಹಾಗೆಯಲ್ಲಿ ಏನು ಬರೆಯು.. ಎಂಬುದರ ಬಗ್ಗೆ ಚಿಂತಿಸಲೂ ನನಗೆ ..ು ಸಿಗದೇ ಇದ್ದದ್ದು. ಇದೊಂಥರ ನಾನು ..ಂತ ಈ ವಾರದ ಮಟ್ಟಿಗೆ ಪಡೆಯು..ದ ಜಾಮೀನು ಎಂದೇ ದಯವಿಟ್ಟು ..ಬಿ!

..ಆದರೂ ಸುಮ್ಮನಿರಲಾಗುತ್ತದೆಯೇ? ಆ ..ಕ್ಕೆ ಈ ವಾರ ಔಟ್‌ಲುಕ್ ಪತ್ರಿಕೆಯಲ್ಲಿ ..ಲೇಖಕಿ ಅರುಂಧತಿ ರಾಯ್ ಅವರು ..ರುವ ಲೇಖನವನ್ನು ಸಂಕ್ಷಿಪ್ತವಾಗಿ ..ವಾದಿಸಿ ಇಲ್ಲಿ ನಿಮಗೆ ನೀಡಿದ್ದೇನೆ.

* * * * * * * * *

..ಮ್ಮ ದುರಂತಗಳ ಮೇಲಿನ ನಮ್ಮ ..ಳನ್ನೂ ನಾವು ಕಳೆದುಕೊಂಡಿದ್ದೇವೆ. .. ದಿನದಿಂದ ಇನ್ನೊಂದು ಕೆಟ್ಟ ದಿನಕ್ಕೆ ..ೈ ಮೇಲಿನ ಹತ್ಯಾಕಾಂಡ ಮುಂದುವರೆ..ದ್ದಾಗ 24 ಗಂಟೆಗಳ ಕಾಲ ಸುದ್ದಿ ಬಿತ್ತರಿಸುವ .. ಚಾನೆಲ್‌ಗಳು 'ಭಾರತದ 9/11' ಅನ್ನು ನಾವೆಲ್ಲ ..ುತ್ತಿದ್ದೇವೆ ಎಂದೇ ತಿಳಿಸುತ್ತಿದ್ದವು. ಹಾಗೆಯೇ, ..ದೋ ಹಾಲಿವುಡ್ಡಿನ ಹಳೆ ಸಿನಿಮಾದ ಬಾಲಿವುಡ್ ..ಚಿತ್ರದಲ್ಲಿದ್ದಂತೆ ನಾವೆಲ್ಲ ನಮ್ಮ ಪಾತ್ರಗಳನ್ನೂ ..ುಸಬೇಕಿತ್ತು -ಅದೆಲ್ಲ ಹಿಂದೆ ನಡೆದಿರುವುದೇ ..ು ನಮಗೆ ಚೆನ್ನಾಗಿ ಗೊತ್ತಿದ್ದರೂ!

.. ಪ್ರದೇಶದಲ್ಲಿ ಬಿಕ್ಕಟ್ಟು ಹೆಚ್ಚಾಗುತ್ತಿರುವಾಗ ..ಕದ ಸೆನೇಟರ್ ಜಾನ್ ಮೆಕೈನ್ ಪಾಕಿಸ್ತಾನವು ..ತುರ್ತಾಗಿ 'ದುಷ್ಟರನ್ನು' ಬಂಧಿಸಬೇಕೆಂದೂ; ..ದರೆ ತನಗೆ ವೈಯಕ್ತಿಕವಾಗಿ ಲಭ್ಯವಾಗಿರುವ ..ಿ ಪ್ರಕಾರ ಭಾರತವು ಪಾಕಿಸ್ತಾನದಲ್ಲಿರುವ ..ತ್ಪಾದಕರ ಕ್ಯಾಂಪು'ಗಳ ಮೇಲೆ ವಾಯು ದಾಳಿ ..ಯೆಂದೂ; ಮುಂಬೈ ದಾಳಿ ಭಾರತದ 9/11 ..ದರಿಂದ ಅಂತಹ ದಾಳಿಗಳ ಬಗ್ಗೆ ವಾಷಿಂಗ್ಟನ್ .. ಮಾಡಲಾಗುವುದಿಲ್ಲವೆಂದೂ ಪಾಕಿಸ್ತಾನವನ್ನು ..ದ್ದಾನೆ.

..ರೆ ನವೆಂಬರ್ ಸೆಪ್ಟೆಂಬರ್ ಅಲ್ಲ, 2008 2001 ..ಾಕಿಸ್ತಾನ್, ಅಫಘಾನಿಸ್ತಾನವಲ್ಲ ಮತ್ತು ಭಾರತ .. ಅಲ್ಲ, ಆದ್ದರಿಂದ ನಮ್ಮ ದುರಂತವನ್ನು ನಾವು ..ಗಿಸಿಕೊಂಡು ನಮ್ಮ ವಿವೇಚನಾಶಕ್ತಿಯನ್ನು ಹಾಗು ..ಡಿರುವ ನಮ್ಮ ಹೃದಯಗಳನ್ನು ಬಳಸಿಕೊಂಡು .. ಆದ ಭಗ್ನಾವಶೇಷಗಳನ್ನು ವಿಶ್ಲೇಷಿಸಿ ನಮ್ಮದೇ ..ರ್ಣಯಗಳತ್ತ ಸಾಗಬೇಕಿದೆ.

..ರತದ ನಗರಗಳ ಮೇಲೆ ಭಯೋತ್ಪಾದಕರು ..ದ ಸರಣಿ ದಾಳಿಗಳಲ್ಲಿ ಮುಂಬೈ ಇತ್ತೀಚಿನದ್ದು ..ಾಬಾದ್, ಬೆಂಗಳೂರು, ದೆಹಲಿ, ಗುವಾಹಟಿ, .. ಮತ್ತು ಮಾಲೆಗಾಂವ್ ನಗರಗಳಲ್ಲಿ ಸರಣಿ ..ಸ್ಫೋಟಗಳು ಸಂಭವಿಸಿ ನೂರಾರು ಜನರು ..ಾಗಿದ್ದಾರೆ, ಗಾಯಗೊಂಡಿದ್ದಾರೆ. ಈ ಪ್ರಕರಣಗಳಿಗೆ ..ಸಿದಂತೆ ಪೊಲೀಸರು ಗುಮಾನಿ ಮೇಲೆ ..ಸಿರುವ ಭಾರತೀಯ ಪ್ರಜೆಗಳಾದ ಹಿಂದೂಗಳು ಮತ್ತು ಮುಸಲ್ಮಾನರು. ಇವರು ನಿಜವಾಗಲೂ ಅಪರಾಧಿಗಳಾಗಿದ್ದರೆ ಈ ದೇಶದಲ್ಲಿ ಯಾವುದೋ ಒಂದು ಕೆಟ್ಟದ್ದು ನಡೆಯುತ್ತಿದ್ದೆ ಎಂದೇ ಅರ್ಥ.

ಭಯೋತ್ಪಾದನೆ ಕುರಿತಂತೆ ಪ್ರಸ್ತುತ ನಡೆಯುತ್ತಿರುವ ಚರ್ಚೆಯಲ್ಲಿ ಒಂದು ರೀತಿಯ ಉಗ್ರ ಮತ್ತು ಕ್ಷಮಿಸದ ನೆಲೆಯೊಂದಿದೆ. ಈ ಚರ್ಚೆಯಲ್ಲಿ ಭಾಗವಹಿಸಿರುವ ಒಂದು ಗುಂಪಿನ (ಅದನ್ನು ಗುಂಪು 1 ಎಂದು ಕರೆಯೋಣ) ಪ್ರಕಾರ ಭಯೋತ್ಪಾದನೆ ಅದರಲ್ಲೂ ಇಸ್ಲಾಮಿಕ್ ಭಯೋತ್ಪಾದನೆ ದ್ವೇಷ ಹುಟ್ಟಿಸುವ, ಹುಚ್ಚುತನದಿಂದ ಕೂಡಿರುವ ಪೀಡೆ. ತನ್ನದೇ ಆದ ಕಕ್ಷೆಯಲ್ಲಿ ಚಲಿಸುವ ಈ ಪೀಡೆಗೂ, ಜಗತ್ತಿಗೂ ಯಾವುದೇ ಸಂಬಂಧವಿಲ್ಲ; ಅದಕ್ಕೂ ಇತಿಹಾಸ, ಆರ್ಥಿಕ ವ್ಯವಸ್ಥೆ ಮತ್ತು ಭೂಗೋಳ ಶಾಸ್ತ್ರಕ್ಕೂ ಸಂಬಂಧವಿಲ್ಲ. ಆದ್ದರಿಂದ ಗುಂಪು 1 ವಾದಿಸುವ ಪ್ರಕಾರ ಭಯೋತ್ಪಾದನೆಯನ್ನು ರಾಜಕೀಯ ಸಂದರ್ಭದೊಂದಿಗೆ ಗುರುತಿಸುವುದಾಗಲಿ, ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದಾಗಲಿ ಅದನ್ನು ಸಮರ್ಥಿಸುವ ಕೃತ್ಯಕ್ಕೆ ಸಮಾನ. ಆದರೆ ಈ ಚರ್ಚೆಯಲ್ಲಿನ ಇನ್ನೊಂದು ಗುಂಪು (ಅದನ್ನು ಗುಂಪು 2 ಎಂದು ಕರೆಯೋಣ) ಹೇಳುವ ಪ್ರಕಾರ ಭಯೋತ್ಪಾದನೆಯನ್ನು ಯಾವ ದೃಷ್ಟಿಯಿಂದಲೂ ಕ್ಷಮಿಸಲಾಗುವುದಿಲ್ಲ, ಸಮರ್ಥಿಸಲಾಗುವುದಿಲ್ಲ, ಆದರೂ ಭಯೋತ್ಪಾದನೆಗೆ ಅದರದ್ದೇ ಆದ ನಿರ್ದಿಷ್ಟ ಕಾಲ, ಸ್ಥಳ ಮತ್ತು ರಾಜಕೀಯ ಸಂದರ್ಭ ಇದ್ದೇ ಇರುತ್ತದೆ ಮತ್ತು ಈ ಅಂಶಗಳನ್ನು ನಿರ್ಲಕ್ಷಿಸುವುದು ಸಮಸ್ಯೆಯನ್ನು ಹೆಚ್ಚಿಸುತ್ತದಲ್ಲದೇ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಮಾಯಕರನ್ನು ಆಪತ್ತಿಗೆ ಈಡುಮಾಡಿದಂತಾಗುತ್ತದೆ.



ಹಾಗೆ ಮಾಡುವುದು ಕೂಡ ದುಷ್ಟ ಕೃತ್ಯವಾಗುತ್ತದೆ.

ಲಷ್ಕರ್-ಇ-ತೊಯಿಬಾ (ಪರಿಶುದ್ಧರ ಸೈನ್ಯ) ಅನ್ನು 1990 ರಲ್ಲಿ ಸ್ಥಾಪಿಸಿದ, ಇಸ್ಲಾಮಿನ ಬಿಗಿನೀತಿ ಸಂಸ್ಕೃತಿಯ ಸಲಾಫಿ ಪರಂಪರೆಗೆ ಸೇರಿರುವ ಹಫೀಜ್ ಸಯ್ಯದ್‌ನ ನಿಲುವುಗಳು ಗುಂಪು 1 ರ ವಾದಕ್ಕೆ ಪುಷ್ಟಿ ನೀಡುತ್ತವೆ. ಆತ್ಮಹತ್ಯಾ ದಾಳಿಗಳನ್ನು ಪ್ರಚೋದಿಸುವ, ಯಹೂದಿಯರನ್ನು, ಶಿಯಾ ಮುಸಲ್ಮಾನರನ್ನು ಮತ್ತು ಪ್ರಜಾಪ್ರಭುತ್ವವನ್ನು ದ್ವೇಷಿಸುವ, ತಾನು ನಂಬಿರುವ ಇಸ್ಲಾಮ್ ಜಗತ್ತನ್ನು ಆಳುವ ತನಕ ಜಿಹಾದ್ ನಡೆಸಬೇಕೆಂದು ನಂಬಿರುವವ ಹಫೀಜ್ ಸಯ್ಯದ್.

ಈತನ ಹಲವು ಹೇಳಿಕೆಗಳು ಹೀಗಿವೆ:

"ಭಾರತ ಅಖಂಡವಾಗಿ ಉಳಿದಿರುವತನಕ ಶಾಂತಿ ಸಾಧ್ಯವಿಲ್ಲ, ಅದನ್ನು ಎಷ್ಟು ಬಾರಿ ತುಂಡರಿಸಬೇಕೆಂದರೆ ಅವರು ಅನುಕಂಪ ಬೇಡಬೇಕು."

"ಭಾರತ ನಮಗೆ ಹಾದಿಯನ್ನು ತೋರಿಸಿದೆ. ಕಾಶ್ಮೀರದಲ್ಲಿ ಅದು ಮುಸಲ್ಮಾರನ್ನು ಕೊಲ್ಲುತ್ತಿರುವಂತೆ ನಾವು ಪ್ರತೀಕಾರ ನೀತಿ ಅನುಸರಿಸಿ ಹಿಂದೂಗಳನ್ನು ಕೊಲ್ಲಬೇಕಿದೆ."

ಆದರೆ ಭಾರತದ ಅಹಮದಾಬಾದಿನವನಾದ, ತಾನು ಭಯೋತ್ಪಾದಕನಲ್ಲ ಬದಲಾಗಿ ಪ್ರಜಾಪ್ರಭುತ್ವವಾದಿ ಎಂದೇ ಹೇಳಿಕೊಳ್ಳುವ ಬಾಬು ಭಜರಂಗಿ ಎಂಬಾತನನ್ನು ಗುಂಪು 1 ಯಾವ ರೀತಿಯಲ್ಲಿ ಪರಿಗಣಿಸುತ್ತದೆ? 2002 ರಲ್ಲಿ ಗುಜರಾತಿನಲ್ಲಿ ಸಂಭವಿಸಿದ ಮಾರಣಹೋಮದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈತ ಮುಸಲ್ಮಾನರನ್ನು ಕೊಚ್ಚಿ ಕೊಂದಿದ್ದಾಗಿಯೂ, ಸಾಧ್ಯವಾದರೆ ಇನ್ನಷ್ಟು ಮುಸಲ್ಮಾನರನ್ನು ಸಾಯಿಸುವುದಾಗಿಯೂ ಹೇಳಿದ್ದನ್ನು ಟಿವಿ ಕ್ಯಾಮೆರಾದಲ್ಲಿ ಗುಪ್ತವಾಗಿ ಸೆರೆಹಿಡಿಯಲಾಗಿತ್ತು.

ಹಾಗೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೈಬಲ್ ಆಗಿರುವ ಎಂ.ಎಸ್. ಗೋಲ್ವಾಲ್ಕರ್‌ನ **'We, or our nationhood defined'** ಪುಸ್ತಕವನ್ನು ಗುಂಪು 1 ಹೇಗೆ ಪರಿಗಣಿಸುತ್ತದೆ? ಏಕೆಂದರೆ 1944 ರಲ್ಲಿ ಆರ್‌ಎಸ್‌ಎಸ್‌ನ ಮುಖ್ಯಸ್ಥನಾದ ಗೋಲ್ವಾಲ್ಕರ್ ಈ ಪುಸ್ತಕದಲ್ಲಿ ಅನ್ಯ ಕೋಮಿನವರ ಮೇಲೆ ಕೆಂಡ ಕಾರುತ್ತಾನೆ. ಅಂದಹಾಗೆ ಹಿಂದೂ ಬಲಪಂಥೀಯರ ಕೆಂಗಣ್ಣಿಗೆ ಮುಸಲ್ಮಾನರು ಮಾತ್ರ ಗುರಿಯಾಗಿಲ್ಲ, ದಲಿತರು ನಿರಂತರವಾಗಿ ಬಲಿಯಾಗಿದ್ದಾರಲ್ಲದೆ ಇತ್ತೀಚೆಗೆ ಕ್ರಿಶ್ಚಿಯನ್ನರೂ ಗುರಿಯಾಗಿದ್ದಾರೆ.

ಇಷ್ಟು ವರ್ಷಗಳ ಕಾಲ ಹಫೀಜ್ ಸಯ್ಯದ್ ಲಾಹೋರಿನಲ್ಲಿ ಗೌರವಾನ್ವಿತನಾಗಿಯೇ ಜೀವಿಸುತ್ತಿದ್ದ. ಆದರೆ ಮೊನ್ನೆ ಡಿಸೆಂಬರ್ 11 ರಂದು ವಿಶ್ವಸಂಸ್ಥೆ ಆತನ ಜಮಾತ್-ಉದ್-ದವಾ ಮೇಲೆ ನಿಷೇಧ ಹೇರಿದ ನಂತರ ವಿಧಿ ಇಲ್ಲದೆ ಪಾಕಿಸ್ತಾನ ಸರ್ಕಾರವು ಅವನನ್ನು ಗೃಹಬಂಧನದಲ್ಲಿಟ್ಟಿದೆ. ಆದರೆ ಬಾಬು ಭಜರಂಗಿ ಜಾಮೀನು ಪಡೆದು ಇವತ್ತಿಗೂ ಗುಜರಾತಿನಲ್ಲಿ ಗೌರವಾನ್ವಿತನಾಗಿಯೇ ಜೀವಿಸುತ್ತಿದ್ದಾನೆ. ಆತನ ಗುರು ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿ ಮುಂದುವರೆದಿದ್ದಾನೆ. ಮಾತ್ರವಲ್ಲ, ಭಾರತದ ದೊಡ್ಡ ಕಾರ್ಪೊರೇಟ್ ಕಂಪನಿಗಳಾದ ರಿಲಯನ್ಸ್ ಮತ್ತು ಟಾಟಾ ಮೋದಿ ಬಗ್ಗೆ ಅಪಾರ ಗೌರವವನ್ನು ಹೊಂದಿವೆ. ಸುಹೇಲ್ ಸೇಠ್ ಎಂಬ ಕಾರ್ಪೊರೇಟ್ ವಕ್ತಾರ ಇತ್ತೀಚೆಗೆ "ಮೋದಿಯೇ ದೇವರು" ಎಂದು ಹೇಳಿದ್ದಾನೆ. ಹಿಂದೂ ದೊಂಬಿಗಳಿಗೆ ಪರೋಕ್ಷ ನೆರವು ನೀಡಿದ್ದ ಪೊಲೀಸ್ ಅಧಿಕಾರಿಗಳಿಗೆ ಬಡ್ತಿ ಮತ್ತು ಪ್ರಶಸ್ತಿಗಳನ್ನು ನೀಡಲಾಗಿದೆ. 45,000 ಶಾಖೆಗಳನ್ನು, ಏಳು ಮಿಲಿಯನ್ ಕಾರ್ಯಕರ್ತರನ್ನು ಹೊಂದಿರುವ ಆರ್‌ಎಸ್‌ಎಸ್ ದೇಶಾದ್ಯಂತ ತನ್ನ ದ್ವೇಷದ ಸಿದ್ಧಾಂತವನ್ನು ಹರಡುತ್ತಲೇ ಇದೆ. ಅಂತಹ ಕಾರ್ಯಕರ್ತರಲ್ಲಿ ಮೋದಿ ಮಾತ್ರವಲ್ಲದೆ, ಮಾಜಿ ಪ್ರಧಾನಿ ಎ.ಬಿ. ವಾಜಪೇಯಿ, ಹಾಲಿ ವಿರೋಧ ಪಕ್ಷದ ನಾಯಕ ಎಲ್.ಕೆ. ಅಡ್ವಾಣಿ ಮತ್ತು ಸಹಸ್ರಾರು ಹಿರಿಯ ರಾಜಕಾರಣಿಗಳು, ಅಧಿಕಾರಿಗಳು, ಪೊಲೀಸರು ಮತ್ತು ಗುಪ್ತಚರ ಇಲಾಖೆಯವರೂ ಇದ್ದಾರೆ.

ಜಾತ್ಯತೀತ ಪ್ರಜಾಪ್ರಭುತ್ವವಾದ ನಮ್ಮ ದೇಶದ ಚಿತ್ರವನ್ನು ಇನ್ನಷ್ಟು ಜಟಿಲಗೊಳಿಸಲು ತಮ್ಮದೇ ಆದಂತಹ ಧರ್ಮಾಂಧತೆಯನ್ನು ಬಿತ್ತರಿಸುವ ಕಾರ್ಯದಲ್ಲಿ ಸಾಕಷ್ಟು ಮುಸಲ್ಮಾನ ಸಂಘಟನೆಗಳೂ ಭಾರತದಲ್ಲಿ ಸಕ್ರಿಯವಾಗಿವೆ ಎಂಬುದನ್ನು ಇಲ್ಲಿ ದಾಖಲಿಸಬೇಕಿದೆ.....

ಲಷ್ಕರ್-ಇ-ತೋಯಿಬಾದ ಹಫೀಜ್ ಸಯ್ಯದ್ ಭಾರತದ ಶಿಮ್ಲಾದವನು ಎಂಬುದು, ಆರ್‌ಎಸ್‌ಎಸ್‌ನ ಎಲ್.ಕೆ. ಅಡ್ವಾಣಿ ಪಾಕಿಸ್ತಾನದ ಸಿಂಧ್ ಪ್ರದೇಶದವರು ಎಂಬುದು ನಮ್ಮಲ್ಲಿ ಅಚ್ಚರಿ ಹುಟ್ಟಿಸಬೇಕಿಲ್ಲ.

2001 ರಲ್ಲಿ ಪಾರ್ಲಿಮೆಂಟ್ ಮೇಲಿನ ದಾಳಿ, 2002 ರಲ್ಲಿ ಸಬರ್‌ಮತಿ ರೈಲು ದುರಂತ, 2006 ರಲ್ಲಿ ಸಂಜೋತಾ ರೈಲಿನಲ್ಲಿ ಬಾಂಬ್ ಸ್ಫೋಟ... ಈ ಎಲ್ಲ ಪ್ರಕರಣಗಳು ಸಂಭವಿಸಿದಾಗ ಭಾರತದ ಸರ್ಕಾರ ಅವುಗಳ ಹಿಂದೆ ಪಾಕಿಸ್ತಾನದ ISI ಬೆಂಬಲ ಹೊಂದಿರುವ ಲಷ್ಕರ್ ಕೈವಾಡವಿತ್ತೆಂದೇ ಹೇಳಿತ್ತು. ಭಾರತದ ಪೊಲೀಸ್ ಮತ್ತು ಗುಪ್ತಚರ ಇಲಾಖೆಯವರ ಪ್ರಕಾರ 'ಇಂಡಿಯನ್ ಮುಜಾಹಿದ್ದೀನ್' ಮೂಲಕ ಲಷ್ಕರ್ ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಆದರೆ ಮುಂಬೈ ದಾಳಿಗಳಿಗೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯಲ್ಲಿ ವಿಶೇಷ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಶೇಕ್ ಮುಷ್ತಾಕ್ ಅಹ್ಮದ್ ಮತ್ತು ಕೊಲ್ಕತ್ತಾದ ನಿವಾಸಿ ತೌಸಿಫ್ ರೆಹಮಾನ್ ಎಂಬ ಇಬ್ಬರು ಭಾರತೀಯರನ್ನು ಪೊಲೀಸರು ಬಂಧಿಸಿದ್ದಾರೆ. ಆದ್ದರಿಂದ ಪಾಕಿಸ್ತಾನ್ ವಿರುದ್ಧ ಭಾರತ ಮಾಡಿದ್ದ ಆರೋಪ ಈಗ ವಿಚಿತ್ರವಾಗಿ ಕಾಣಿಸುತ್ತಿದೆ.

ಮುಂಬೈ ದಾಳಿಯನ್ನು ನಮ್ಮ 67 ಸುದ್ದಿ ಚಾನೆಲ್‌ಗಳು ನೇರ ಪ್ರಸಾರ ಮಾಡಿದವು. ಮೂರು ರಾತ್ರಿ ಮತ್ತು ಮೂರು ದಿನ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಒಂದು ಚಿಕ್ಕ ಯುವಕರ ತಂಡ ನಮ್ಮ ಪೊಲೀಸರನ್ನೂ, ಖ್ಯಾತ ಎನ್‌ಎಸ್‌ಜಿಯನ್ನು, ಮೆರೀನ್ ಕಮಾಂಡೋಗಳನ್ನು ಅಸಹಾಯಕರನ್ನಾಗಿಸಿದ್ದನ್ನು ನಾವು ನಂಬಲಸಾಧ್ಯವೆಂಬಂತೆ ನೋಡಿದೆವು. ಕೊಲ್ಲಲು ಮತ್ತು ಸ್ವತಃ ಕೊಲೆಗೀಡಾಗಲು ಸಿದ್ಧರಾಗಿದ್ದ ಈ ಯುವ ಭಯೋತ್ಪಾದಕರು ಎಲ್ಲರನ್ನು ವಶೀಕರಣ ಮಾಡಿದರು. ದಾಳಿಯ ಇಡೀ ಸಮಯದಲ್ಲಿ ಅವರು ಯಾವ ರೀತಿಯ ಬೇಡಿಕೆಗಳನ್ನೂ ಇಡಲಿಲ್ಲ, ಮಾತುಕತೆಗಳಿಗೂ ಮುಂದಾಗಲಿಲ್ಲ. ಅವರ ಗುರಿ ತಾವು ಸಾಯುವ ಮುನ್ನ ಸಾಧ್ಯವಾದಷ್ಟು ಜನರನ್ನು ಕೊಲ್ಲುವುದೇ ಆಗಿತ್ತು. ಅವರ ಈ ವರ್ತನೆ ನಮ್ಮನ್ನೆಲ್ಲ ದಿಗ್ಭ್ರಾಂತಿಗೊಳಿಸಿತು. "ಭಯೋತ್ಪಾದನೆಯನ್ನು ಸಮರ್ಥಿಸಲಾಗುವುದಿಲ್ಲ" ಎಂದು ನಾವು ಹೇಳುವುದಕ್ಕೆ ಕಾರಣ ನಮಗೆ ಮಾನವನ ಜೀವ ಮುಖ್ಯವಾಗಿರುವುದರಿಂದ. ಆದರೆ ಇತರರ ಜೀವವಿರಲಿ, ತಮ್ಮ ಜೀವದ ಬಗ್ಗೆಯೂ ಕಾಳಜಿ ಹೊಂದಿರದ ಇಂಥವರ ಬಗ್ಗೆ ಏನೆಂದುಕೊಳ್ಳಬೇಕು ಎಂಬುದೇ ನಮ್ಮನ್ನು ತಬ್ಬಿಬ್ಬಾಗಿಸಿದ್ದು. ಯಾಕೆಂದರೆ ಅವರು ಸಾಯುವ ಮುನ್ನವೇ ನಮ್ಮ ಕೈಗೆ ಎಟುಕದ ಇನ್ನೊಂದು ಲೋಕವನ್ನು ಅವರು ತಲುಪಿಯಾಗಿದೆ...


ಅವರೆಲ್ಲ ನಿಜವಾಗಲೂ ಲಷ್ಕರ್-ಇ-ತೋಯಿಬಾದ ಸದಸ್ಯರೇ ಆಗಿದ್ದರೆ, ಅವರಿಗೆ ಬಲಿಯಾದವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರೇ ಇದ್ದರು ಎಂಬುದು ಅವರಿಗೆ ಮುಖ್ಯವಾಗಲಿಲ್ಲವೇಕೆ? ಅಥವಾ ಅವರ ಈ ಕೃತ್ಯದಿಂದಾಗಿ ನಾಳೆ ಭಾರತದ ಮುಸಲ್ಮಾನರೇ ಹಿಂದೂಗಳ ಪ್ರತಿಕ್ರಿಯೆಗೆ ಗುರಿಯಾಗುತ್ತಾರೆಂಬುದು ಅವರಿಗೆ ಅರ್ಥವಾಗಲಿಲ್ಲವೇಕೆ? ಭಯೋತ್ಪಾದನೆ ಎಂಬುದು ಮಾನವೀಯತೆ ಇಲ್ಲದ ಸಿದ್ಧಾಂತ. ಎಲ್ಲಾ ಸಿದ್ಧಾಂತಗಳಂತೆ ಅದಕ್ಕೆ ಗುರಿ ಮುಖ್ಯ ಹೊರತು ತನಗೆ ಬಲಿಯಾದ ಮನುಷ್ಯರಲ್ಲ. 'ಹುತಾತ್ಮರ' ರಕ್ತ ಭಯೋತ್ಪಾದನೆಗೆ ನೀರೆರೆಯುತ್ತದೆ. ಹಿಂದೂ ಭಯೋತ್ಪಾದಕರಿಗೆ ಹಿಂದೂಗಳ ಶವಗಳು ಬೇಕು, ಎಡಪಂಥೀಯ ಭಯೋತ್ಪಾದಕರಿಗೆ ಶ್ರಮಜೀವಿಗಳ ಹೆಣ ಬೇಕು, ಇಸ್ಲಾಮಿಕ್ ಭಯೋತ್ಪಾದಕರಿಗೆ ಮುಸಲ್ಮಾನರ ಶವ ಬೇಕು. ಯಾಕೆಂದರೆ ಸತ್ತವರು ಪ್ರದರ್ಶನದ ವಸ್ತುಗಳಾಗುತ್ತಾರೆ, ಹಿಂಸಾಬಲಿಗೆ ಸಾಕ್ಷಿಯಾಗುತ್ತಾರೆ, ಗುರಿಯನ್ನು ತಲುಪುವ ಮಾರ್ಗವಾಗುತ್ತಾರೆ.

ಮುಂಬೈ ದಾಳಿ ಕುರಿತಂತೆ ಗಂಟೆಗಟ್ಟಲೆ ಕಾಲ ನಡೆದ ಚರ್ಚೆಗಳಾಗಲಿ, ಪ್ರಕಟಗೊಂಡ ಲೇಖನಗಳಾಗಲಿ ನಮ್ಮ ಕೊಠಡಿಯಲ್ಲಿರುವ ಕಾಶ್ಮೀರ, ಗುಜರಾತ್ ಮತ್ತು ಬಾಬ್ರಿ ಮಸೀದಿ ಧ್ವಂಸದಂತಹ ದೊಡ್ಡ ಸಮಸ್ಯೆಗಳನ್ನು ಕುರಿತು ಮಾತ್ರ ಪ್ರಸ್ತಾಪಿಸಲೇ ಇಲ್ಲ. ಬದಲಾಗಿ ನಿವೃತ್ತ ರಾಜತಂತ್ರಜ್ಞರು ಮತ್ತು ಅಧಿಕಾರಿಗಳು ಪಾಕಿಸ್ತಾನದ ಮೇಲೆ ಯುದ್ಧ ಸಾರಬೇಕೆ ಬೇಡವೇ ಎಂಬುದರ ಬಗ್ಗೆ ಮಾತನಾಡಿದರು. ಈ ಮಧ್ಯೆ ತಮಗೆ ಭದ್ರತೆ ಒದಗಿಸದಿದ್ದರೆ ತಾವು ತೆರಿಗೆಗಳನ್ನು ಕಟ್ಟುವುದಿಲ್ಲ ಎಂದು ಕೆಲ ಸಾಹುಕಾರರು ಬೆದರಿಸಿದರು (ಹಾಗಾದರೆ ಬಡವರಿಗೆ ಭದ್ರತೆ ಇಲ್ಲದಿದ್ದರೆ ಪರವಾ ಇಲ್ಲವೇ?). ಇನ್ನೂ ಕೆಲವರು ಸರ್ಕಾರಗಳು ರಾಜೀನಾಮೆ ಕೊಟ್ಟು ಪ್ರತಿರಾಜ್ಯವನ್ನು ಬೇರೆಬೇರೆ ಕಾರ್ಪೊರೇಟ್ ಕಂಪನಿಗಳಿಗೆ ನೀಡಬೇಕೆಂದರು.

ಮುಂಬೈನ ಒಂದು ಭಯಾನಕ ಅಧ್ಯಾಯ ಅಂತ್ಯಗೊಳ್ಳುತ್ತಲೇ ಮತ್ತೊಂದು ಅಧ್ಯಾಯ ಪ್ರಾರಂಭವಾಗಿತ್ತು. ಟಿವಿ ಚಾನೆಲ್‌ನವರ ಪ್ರಚೋದನೆಯೊಂದಿಗೆ ಕೆಲ ಗಣ್ಯರು ಎಲ್ಲಾ ರಾಜಕಾರಣಿಗಳನ್ನು ಖಂಡಿಸಿದರು, ಪೊಲೀಸರನ್ನು ಮತ್ತು ಸೈನ್ಯವನ್ನು ಕೊಂಡಾಡಿದರು, ಪೊಲೀಸ್ ರಾಜ್ಯ ಅಸ್ತಿತ್ವಕ್ಕೆ ಬರಬೇಕೆಂದು ಹೇಳಿದರು. ಪ್ರಜಾಪ್ರಭುತ್ವದ ನ್ಯೂನ್ಯತೆಗಳಿಂದಲೇ ಧಣಿಗಳಾದ ಇವರೆಲ್ಲ ಇವತ್ತು ಪೊಲೀಸ್ ರಾಜ್ಯಕ್ಕೆ ಆಗ್ರಹಿಸುತ್ತಿರುವುದು ಅಚ್ಚರಿ ಏನಲ್ಲ. ಯಾಕೆಂದರೆ ಈಗ ಬಲಾತ್ಕಾರವಾಗಿ ದೋಚಿಕೊಳ್ಳುವ ಯುಗ ಪ್ರಾರಂಭವಾಗಿದ್ದು ಆ ಪ್ರವೃತ್ತಿಗೆ ಪ್ರಜಾಪ್ರಭುತ್ವ ಕೊಂಚ ಇರುಸುಮುರುಸು ಮಾಡುತ್ತದೆ.

ಟಿವಿ ಚಾನೆಲ್‌ಗಳಂತೂ ಪೊಲೀಸರು ಒಳ್ಳೆಯವರು/ರಾಜಕಾರಣಿಗಳು ಕೆಟ್ಟವರು, ಮುಖ್ಯ ನಿರ್ವಾಹಕ ಅಧಿಕಾರಿ ಒಳ್ಳೆಯವರು/ಮುಖ್ಯಮಂತ್ರಿಗಳು ಕೆಟ್ಟವರು, ಸೈನ್ಯ ಒಳ್ಳೆಯದು/ಸರ್ಕಾರ ಕೆಟ್ಟದ್ದು, ಭಾರತ ಒಳ್ಳೆಯದು/ಪಾಕಿಸ್ತಾನ ಕೆಟ್ಟದ್ದು ಎಂಬಂತಹ ಅಪಾಯಕಾರಿ ನಿಲುವುಗಳನ್ನು ಬಿತ್ತರಿಸುವ ಮೂಲಕ ವೀಕ್ಷಕರನ್ನು ನಿಯಂತ್ರಿಸಲಾಗದ ಉನ್ಮಾದದತ್ತ ದೂಡಿದ್ದವು. ದುರಂತವೆಂದರೆ ಭಯೋತ್ಪಾದನೆ ಎಂಬುದು ಹಲವಾರು ಕನ್ನಡಿಗಳಿರುವ ಕೊಠಡಿ ಎಂದೂ, ಅದರಲ್ಲಿ ಬಲಿಗಳು ಮತ್ತು ಕೇಡಿಗಳು

▶▶▶8





ಕರಾವಳಿ ಅಲೆ ಮೇಲೆ

ಹಿಂದೂ ಫ್ಯಾಸಿಸ್ಟ್ ಉಗ್ರರ ದಾಳಿ

ಕಳೆದ ಕೆಲವು ದಿನಗಳಿಂದ ಮಂಗಳೂರಿನಲ್ಲಿ ಭಜರಂಗಿ ಫ್ಯಾಸಿಸ್ಟ್‌ಗಳ ಅಟ್ಟಹಾಸ ಮಿತಿಮೀರಿದೆ. ಇತ್ತೀಚಿನ ಚರ್ಚ್‌ಗಳ ಮೇಲಿನ ದಾಳಿ ಮತ್ತು ಇತರ ಘಟನೆಗಳು ಇದಕ್ಕೆ ಸಾಕ್ಷಿಯಾಗಿವೆ. ಈಗ ಗುರುಪುರ ವಜ್ರದೇಹಿ ಮಠದ ಸ್ವಾಮೀಜಿಯ ಬಗ್ಗೆ ಬಂದ ಪತ್ರಿಕಾ ವರದಿಗೆ ಪ್ರತೀಕಾರವಾಗಿ ಕರಾವಳಿ ಅಲೆ ಪತ್ರಿಕಾ ವಿತರಕರ ಮೇಲೆ ದಾಳಿ ಆರಂಭಿಸಿದ್ದಾರೆ. ಕಳೆದ ಒಂದು ವಾರದಿಂದ ದಾಳಿ ನಡೆಯುತ್ತಿದ್ದರೂ ಜಿಲ್ಲಾಡಳಿತ ಸಂಪೂರ್ಣ ಮೌನ ವಹಿಸಿದ್ದು ಭಜರಂಗಿಗಳ ಎಲ್ಲಾ ದುಷ್ಕೃತ್ಯಕ್ಕೆ ಬೆಂಬಲ ನೀಡುವಂತಿದೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಕೊಲ್ಕತ್ತದ ದರ್ಶನ್ ಎಂಬ ಮೂರುವರೆ ವರ್ಷದ ಅನಾಥ ಮಗುವನ್ನು ಗುರುಪುರದ ಕೃಷ್ಣಮ್ಮ ಎನ್ನುವವರು ಗುರುಪುರ ಮಠದ ವಜ್ರದೇಹಿ ರಾಜಶೇಖರಾನಂದ ಸ್ವಾಮೀಜಿಗೆ ಕೊಟ್ಟರು. ಒಂದು ವಾರದ ಕಾಲ ಆ ಮಗು ಮಠದ ವಶದಲ್ಲಿಯೇ ಇತ್ತು, ಇದು ಕಾನೂನುಬಾಹಿರ. ಈ ಬಗ್ಗೆ ಮಕ್ಕಳ ಕಲ್ಯಾಣಕ್ಕಾಗಿ ಕಾರ್ಯಾಚರಿಸುತ್ತಿರುವ ಮಕ್ಕಳ ಕಲ್ಯಾಣ ಸಂಸ್ಥೆ CWC (children welfare committee) ಗಮನಕ್ಕೆ ಬಂತು. ಈ ಸಮಿತಿಯು 1 ರಿಂದ 18 ವರ್ಷದವರೆಗಿನ ಮಕ್ಕಳ ಆರೈಕೆ ಮತ್ತು ಪೋಷಣೆಯ ಕಾನೂನುಬದ್ಧ ಹಕ್ಕು ಇರುವ ಸರ್ಕಾರಿ ನಿಯೋಜಿತ ಸಂಸ್ಥೆ. ಇವರು ಮಗುವಿನ ಬಗ್ಗೆ ವಿಚಾರಿಸಲು child line ಎಂಬುವವರಿಗೆ ಸೂಚಿಸಿದ್ದರು. ಅದರಂತೆ child line ಈ ಬಗ್ಗೆ ಬಜಪೆ ಪೊಲೀಸ್ ಠಾಣೆಗೆ ಪತ್ರ ಬರೆಯಿತು. ಈ ಬಗ್ಗೆ ಠಾಣಾ ಪೊಲೀಸರು ಕ್ಯಾರೇ ಎನ್ನಲಿಲ್ಲ. ಎರಡನೇ ಬಾರಿ ಬರೆದಾಗಲೂ ಸುಮ್ಮನಿದ್ದಾಗ ಸ್ವತಃ child line ಬಜಪೆ ಠಾಣಾ ಸಿಬ್ಬಂದಿಗಳೊಂದಿಗೆ ಗುರುಪುರ ಮಠಕ್ಕೆ ಹೋದಾಗ ಅಲ್ಲಿ ಮಗು ಇರಲಿಲ್ಲ. ಆ ಬಗ್ಗೆ ಸ್ವಾಮೀಜಿಯವರಲ್ಲಿ ಕೇಳಿದಾಗ ಕೇರಳಕ್ಕೆ ಕಳುಹಿಸಿದ್ದಾರೆಂದು ಉತ್ತರ ಬಂತು. ಇದು ಮಗುವಿನ ಕಳ್ಳ ಸಾಗಾಟವಾಗಿತ್ತು, ಈ ಬಗ್ಗೆ child line ನವರು CWCಗೆ ವರದಿ ಕೊಟ್ಟರು. ಈ ಬಗ್ಗೆ ಕಾನೂನುಕ್ರಮ ಕೈಗೊಳ್ಳಲು CWC ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮಹೇಶ್ವರ ರಾವ್ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಗೆ ಹೇಳಿತು. ಆದರೂ ಈ ಬಗ್ಗೆ ಯಾರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ಈ ವರದಿಯನ್ನು ಫೆಬ್ರವರಿ 2 ರಂದು ಕರಾವಳಿ ಅಲೆ ಪತ್ರಿಕೆಯು ಮುಖಪುಟದಲ್ಲಿ "ಸ್ವಾಮೀಜಿಯಿಂದ ಮಗುವಿನ ಕಳ್ಳ ಸಾಗಾಟ" ಎಂಬ ತಲೆಬರಹದೊಂದಿಗೆ ಪ್ರಕಟಿಸಿತು. ವರದಿಯ ಫಲಶ್ರುತಿಯೆಂಬಂತೆ ಡಿ.ಸಿ.ಯವರು ಒತ್ತಡಕ್ಕೆ ಬಿದ್ದು ಸ್ವಾಮೀಜಿಯೊಂದಿಗೆ ಮಾತುಕತೆ ನಡೆಸಿದ ಮೇಲೆ ಕೇರಳದಿಂದ ಮಗುವನ್ನು ಕರೆಸಲಾಯಿತು. ಈ ಮಗುವನ್ನು ನಿರಾಶ್ರಿತರಿಗಾಗಿ ಸರ್ಕಾರದಿಂದ ಸವಲತ್ತು ಪಡೆದು ಸಂಘ ಪರಿವಾರ ನಡೆಸುತ್ತಿರುವ ಮಂಗಳೂರಿನ ಕುತ್ತಾರಿನಲ್ಲಿರುವ ಮಂಗಳಾ ಸೇವಾಶ್ರಮ ಎಂಬ ನಿರಾಶ್ರಿತರ ಕುಟೀರದಲ್ಲಿ ಸೇರಿಸಲಾಯಿತು (ಇಲ್ಲಿ ಮೇಘಾಲಯ ಮತ್ತು ಇತರ ಕಡೆಯ ಹಲವು ಮಕ್ಕಳು ಇದ್ದಾರೆ). ಆದರೆ ಇದೂ ಸಹ ಕಾನೂನುಬಾಹಿರವಾಗಿತ್ತು, ಮಗು ಅನಾಥವೇ ವಿನಃ ನಿರಾಶ್ರಿತವಾಗಿರಲಿಲ್ಲ, ನಂತರ CWC ಮುಂದೆ ಮಗುವಿನ ವಿಚಾರಣೆ ಆಗಬೇಕೆಂದು ತೀರ್ಮಾನವಾಗಿ ಮತ್ತು ಇನ್ನಿತರ ಬೆಳವಣಿಗೆಯ ಬಗ್ಗೆ ಫೆಬ್ರವರಿ ತಿಂಗಳ 5, 6ಮತ್ತು 7ರಂದು ಕರಾವಳಿ ಅಲೆ ಪತ್ರಿಕೆಯಲ್ಲಿ ವಿಸ್ತೃತ ವರದಿ ಪ್ರಕಟವಾಗಿತ್ತು, ಘಟನೆಯ ಗಂಭೀರತೆಯನ್ನು ಅರಿತ ಮಕ್ಕಳ ಅಭಿವೃದ್ಧಿ ಇಲಾಖೆ ಮಗುವಿನ ಅಕ್ರಮ ಸಾಗಾಟದ ಬಗ್ಗೆ ವರದಿ ಕೇಳಿ ಪತ್ರ ಬರೆಯಿತು. ಸರ್ಕಾರಿ ಇಲಾಖೆ ತಮ್ಮ ಪತ್ರದಲ್ಲಿ ಅದನ್ನು ಅಕ್ರಮ ಸಾಗಾಟ ಎಂದು ಬರೆದಿತ್ತು, ಅದನ್ನೇ ಕರಾವಳಿ ಅಲೆ ಪ್ರಕಟಿಸಿತ್ತು, ಫೆಬ್ರವರಿ 8 ರಂದು ಗುರುಪುರ ಭಜರಂಗ ದಳದವರು ಸ್ವಾಮೀಜಿಯನ್ನು ಈ ಪ್ರಕರಣದಿಂದ ರಕ್ಷಿಸಲು ಪತ್ರಿಕಾಗೋಷ್ಠಿ ನಡೆಸಿದರು. ಅದರ ಸತ್ಯಾಸತ್ಯದ ಬಗೆಗೂ ಕರಾವಳಿ ಅಲೆ ವರದಿ ಪ್ರಕಟಿಸಿತ್ತು.

30-11-2008ಕ್ಕೆ ಇದೇ ಸ್ವಾಮೀಜಿ ದಲಿತರು ಬೌದ್ಧ ಧರ್ಮಕ್ಕೆ ಮತಾಂತರವಾಗುವುದನ್ನು ವಿರೋಧಿಸಿ ಮಂಗಳೂರಿನ ವೆಲೆನ್ಸಿಯಾ ಸಮೀಪದ ಸೂಟರ್‌ಪೇಟೆ ಎಂಬಲ್ಲಿಗೆ ಭೇಟಿ ಕೊಟ್ಟಿದ್ದರು. ಈ ಬಗ್ಗೆ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ಯವರು ಪ್ರೆಸ್ ನೋಟ್ ಬಿಡುಗಡೆ ಮಾಡಿ "ಗುರುಪುರ ಮಠದ ಸ್ವಾಮೀಜಿಯವರಿಂದ ನಮಗೆ ಉಪದೇಶ ಬೇಕಾಗಿಲ್ಲ, ಅವರು ದಲಿತರ ಕೇರಿಗೆ ಬಂದು ಯಾವ ಮನೆಗೂ ಭೇಟಿ ಕೊಡಲಿಲ್ಲ ಮತ್ತು ನೀರೂ ಮುಟ್ಟಲಿಲ್ಲ, ಇಂತಹ ಅಸ್ಪೃಶ್ಯತೆಯನ್ನು ಆಚರಿಸುವ ಸ್ವಾಮೀಜಿಯ ಉಪದೇಶದ ಅವಶ್ಯಕತೆ ನಮಗಿಲ್ಲ" ಎಂದಿದ್ದರು. ಇದನ್ನು ಕರಾವಳಿ ಅಲೆ ಪತ್ರಿಕೆ ಮಕ್ಕಳ ಕಳ್ಳ ಸಾಗಾಟ ಮಾಡಿದ ಸ್ವಾಮೀಜಿಯ ಉಪದೇಶ ದಲಿತರಿಗೆ ಬೇಕಾಗಿಲ್ಲ ಎಂದು ಪ್ರಕಟಿಸಿತ್ತು.

ಇದು ಭಜರಂಗಿಗಳನ್ನು ಇನ್ನಷ್ಟು ಕೆರಳಿಸಿತು. ಅವರು ಕರಾವಳಿ ಅಲೆಯ ಎಲ್ಲಾ ಪತ್ರಿಕಾ ವಿತರಕರಿಗೆ ಮಾರಾಟ ನಿಲ್ಲಿಸುವಂತೆ ಬೆದರಿಕೆ ಕೊಡಲಾರಂಭಿಸಿದಲ್ಲದೇ ಪತ್ರಿಕೆ ಓದದಂತೆ ಎಸ್.ಎಮ್.ಎಸ್. ಜಾಗೃತಿ ಪ್ರಾರಂಭಿಸಿದರು. ಇದಾದ ನಂತರ ಡಿ. 12ರಂದು ಗುರುಪುರದ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಲಿಲ್ಲಿ ಪಿರೇರಾ ಅವರ ಅಂಗಡಿಗೆ ಕೇಸರಿ ಪಡೆ ದಾಳಿ ಮಾಡಿತು. ಅಂದೇ ಸಾಮಾಜಿಕ ಕಾರ್ಯಕರ್ತ ಮೆಲ್ವಿನ್ ಪಿಂಟೋ ರವರ ಫಳ್ನೀರ್‌ನಲ್ಲಿರುವ ಅಂಗಡಿಗೆ ದಾಳಿ ಮಾಡಿ ಪತ್ರಿಕೆಯನ್ನು ಲೂಟಿ ಮಾಡಿತು. ಈ ಬಗ್ಗೆ ಬಂದರು ಠಾಣೆಯಲ್ಲಿ ಪ್ರಕರಣ ದಾಖಲಾಗಿ ಒಬ್ಬ ಪೊಲೀಸ್ ಪೇದೆಯನ್ನು ನೇಮಿಸಲಾಯಿತು. ಆದರೂ ಮಾರನೇ ದಿವಸ ಭಜರಂಗ ದಳದವರು ಮತ್ತೆ ಅದೇ ಅಂಗಡಿಗೆ ದಾಳಿ ಮಾಡಿದರು. ದಾಳಿಗೆ ಸ್ವಲ್ಪ ಸಮಯದ ಮೊದಲು ಅಲ್ಲಿದ್ದ ಪೊಲೀಸ್ ನಾಪತ್ತೆಯಾಗಿದ್ದ! ದಾಳಿಯ ಸಂದರ್ಭ ಅಂಗಡಿಯಲ್ಲಿದ್ದ ಹುಡುಗಿಯ ಮೇಲೂ ಹಲ್ಲೆ ನಡೆದಿತ್ತು.

ಭಜರಂಗ ದಳದ ಯುವಕರು 4-5 ರ ತಂಡಗಳಾಗಿ ಎಲ್ಲಾ ವಿತರಕರಿಗೆ ಈಗಲೂ ಬೆದರಿಕೆ ಹಾಕುತ್ತಿದ್ದಾರೆ. ಡಿಸೆಂಬರ್ 11 ರಂದು ಮಂಗಳೂರಿನ ಬಲ್ಮಠ ರಸ್ತೆಯಲ್ಲಿರುವ ತಸ್ಲೀಂ ಎಂಬ 22 ಹರೆಯದ ಹುಡುಗನ ಅಂಗಡಿಗೆ ನುಗ್ಗಿ ದಾಂಧಲೆ ಮಾಡಿದ್ದಾರೆ. 3000 ರೂಪಾಯಿ ಮೌಲ್ಯದಷ್ಟು ನಷ್ಟವಾಗಿದೆ. ಆದರೆ ಅದರ ಹತ್ತಿರವೇ ಇದ್ದ ಕರಾವಳಿ ಅಲೆ ಇನ್ನೊಬ್ಬ ವಿತರಕರಾದ ಹಿಂದೂ ವ್ಯಕ್ತಿಯ ಅಂಗಡಿಗೆ ಏನೂ ಮಾಡದೇ ತಮ್ಮ ಕೋಮುವಾದಿ ಆದರ್ಶಕ್ಕೆ ಗೌರವ ಕೊಟ್ಟಿದ್ದಾರೆ. ಆದರೆ ಇಷ್ಟೆಲ್ಲಾ ದಾಳಿ ನಡೆಯುತ್ತಿದ್ದರೂ ಜಿಲ್ಲಾಡಳಿತ ಸಂಪೂರ್ಣ ಸಮ್ಮತಿ ಎಂಬಂತೆ ಮೌನ ವಹಿಸಿತ್ತು. ಪ್ರಗತಿಪರ ಸಂಘಟನೆಗಳು ಈ ಬಗ್ಗೆ ಧ್ವನಿ ಎತ್ತಿದಾಗ ನರಸತ್ತಂತಿದ್ದ ಪೊಲೀಸರು ಕುಲಶೇಖರದ ಸುಭಾಷ್, ಪದೀಲ್‌ನ ಸತೀಶ್, ಉಜ್ಜೋಡಿ ರಂಜನ್, ನೀರುಮಾರ್ಗದ ಪ್ರವೀಣ್, ಶಕ್ತಿನಗರದ ಹರೀಶ್ ಎಂಬುವವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. (ಇವರೆಲ್ಲರೂ ಗುರುಪುರ ಸ್ವಾಮೀಜಿಯ ಅಭಿಮಾನಿಗಳು)

ಈ ಎಲ್ಲಾ ದಾಳಿಯು ನಡೆಯುತ್ತಿರುವ ಸಂದರ್ಭದಲ್ಲಿ ಗುರುಪುರ ಸ್ವಾಮೀಜಿ ತನ್ನ ಬೆಂಬಲಿಗರೇ ಈ ದಾಳಿ ಮಾಡಿದವರೆಂದು ಇನ್ನೊಂದು ಪತ್ರಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. ಆದರೂ ಈ ಬಗ್ಗೆ ಕೋಮುವಾದಿ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ, ಡಿಸೆಂಬರ್ 12 ರಂದು ಮಂಗಳೂರಿನ ಬಜ್ಪೆಯಲ್ಲಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಿಗೆ ಪ್ರಸರಣಕ್ಕಾಗಿ ಸರಕಾರಿ ಬಸ್ಸಿಗೆ ಹಾಕಲು ಕರಾವಳಿ ಅಲೆ ಪತ್ರಿಕಾ ಬಂಡಲನ್ನು ತಂದಾಗ ಬೈಕ್‌ನಲ್ಲಿ ಬಂದ ಕೇಸರಿ ಶಲ್ಯ ಹಾಕಿದ್ದ 15 ಕ್ಕೂ ಅಧಿಕ ಭಜರಂಗಿ ಪಡೆ ಪತ್ರಿಕೆಗೆ ಬೆಂಕಿ ಹಚ್ಚಿದೆ. 13 ರಂದು ಬೆಳಿಗ್ಗೆ ಸ್ಟೇಟ್ ಬ್ಯಾಂಕ್ ಬಳಿ ಮುಸ್ಲಿಂ ಒಬ್ಬರ ಅಂಗಡಿಗೆ ದಾಳಿ ಮಾಡಿದ್ದಾರೆ. ದಾಳಿ ಇನ್ನೂ ಮುಂದುವರೆದಿದ್ದರೂ ಪೊಲೀಸರು ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿಲ್ಲ.



ನಿಷ್ಕ್ರಿಯವಾಗಿರುವ ಜಿಲ್ಲಾಡಳಿತ

ಸಂಪೂರ್ಣ ಕೋಮುವಾದೀಕರಣಗೊಂಡಿರುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಸಂಘ ಪರಿವಾರದ ಆಜ್ಞಾನುಸಾರ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ದಿನಗಳಿಂದ ಕರಾವಳಿ ಅಲೆ ಪತ್ರಿಕೆಯ ವಿರುದ್ಧ ಸಂಘ ಪರಿವಾರದ ಕಾರ್ಯಾಚರಣೆ ನಡೆಯುತ್ತಿದ್ದರೂ ಪೊಲೀಸರು ಮೇಲಧಿಕಾರಿಗಳ ಆದೇಶ ಲೆಕ್ಕಿಸದೇ ಚಡ್ಡಿಗಳೊಂದಿಗೆ ಶಾಮೀಲಾಗಿದ್ದಾರೆ. ಡಿ.ಜಿ.ಪಿ.ರವರು ಭದ್ರತೆಯ ಬಗ್ಗೆ ಎಸ್.ಪಿ.ಯವರು ಎಲ್ಲಾ ವ್ಯವಸ್ಥೆ ಮಾಡುತ್ತಾರೆಂದು ಪತ್ರಿಕಾ ವ್ಯವಸ್ಥಾಪಕರೊಂದಿಗೆ ಹೇಳಿದರೂ ಈ ಪುಣ್ಯಾತ್ಮ ಏನೂ ಮಾಡುತ್ತಿಲ್ಲ, ಭಜರಂಗ ದಳಕ್ಕೆ ಮುಕ್ತ ವಾತಾವರಣ ಸೃಷ್ಟಿಸಿರುವ ಪೊಲೀಸರಿಗೆ ಕಾನೂನನ್ನು ರಕ್ಷಿಸಲು ಸಾಧ್ಯವೇ? ಈ ಹಿಂದೆ ಚರ್ಚ್ ಮೇಲಿನ ಪೂರ್ವ ನಿಯೋಜಿತ ದಾಳಿಯ ಸಂದರ್ಭದಲ್ಲೂ ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿತ್ತು.

ಯಾರು ಈ ಗುರುಪುರ ಸ್ವಾಮೀಜಿ?

ಗುರುಪುರ ಮಠದ ರಾಜಶೇಖರಾನಂದ ಸ್ವಾಮೀಜಿ ಶೂದ್ರ ವರ್ಗದ ಬಂಟ್ಸ್ ಸಮುದಾಯಕ್ಕೆ ಸೇರಿದವರು. ಇವರು ಉಡುಪಿಯ ಅಷ್ಟಮಠಗಳಲ್ಲಿ ಒಂದಾಗಿರುವ ಪಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಸ್ವಾಮೀಜಿಯಿಂದ ದೀಕ್ಷೆ ಪಡೆದಿದ್ದೇನೆಂದು ಸ್ವಯಂಘೋಷಿಸಿಕೊಂಡಿದ್ದಾರೆ. ಆದರೆ ಶೂದ್ರರು ನಿತ್ಯನಾರಕಿ ಎನ್ನುವ ಮಧ್ವ ಸಿದ್ಧಾಂತದ ಸ್ವಾಮೀಜಿ ಶೂದ್ರ ಸಮುದಾಯಕ್ಕೆ ಸೇರಿದ ವ್ಯಕ್ತಿಗೆ ದೀಕ್ಷೆ ಕೊಡುತ್ತಾರೆಯೇ? ಈತ ಬಂಟ್ವಾಳದಲ್ಲಿ ಈ ಹಿಂದೆ ಮಂತ್ರವಾದಿಯಾಗಿದ್ದು ಉತ್ಸವಗಳಲ್ಲಿ ಕುರಿ, ಕೋಳಿಗಳನ್ನು ಕಡಿಯುತ್ತಿದ್ದ ಎನ್ನಲಾಗುತ್ತಿದೆ. ಆನಂತರ ಗುರುಪುರದಲ್ಲಿ ಬಂದು ನೆಲೆಸಿ ಭಜರಂಗಿಗಳನ್ನು ಪೋಷಿಸುತ್ತಿದ್ದಾರೆ. ಈಗಲೂ ಗುರುಪುರ ಮಠದಲ್ಲಿ ಎಲ್ಲಾ ಮಠಕ್ಕೆ ಅಪವಾದ ಎಂಬಂತೆ ಸ್ವಾಮೀಜಿಗೆ 'ದರ್ಶನ' ಬರುತ್ತದೆ. ಬಂಟ ಸಮುದಾಯದ ಜನತೆ ಈ ಹಿಂದೂ ಕೋಮುವಾದಿ ಸ್ವಾಮಿಯನ್ನು ಇನ್ನೂ ಯಾಕೆ ಸಹಿಸಿಕೊಂಡಿದ್ದಾರೋ!? ■

ಕರಾವಳಿ ಅಲೆ

ಭಜರಂಗಿಗಳಿಗೆ ಸುನಾಮಿ

ಸಂಘಪರಿವಾರದ ಬಗ್ಗೆ ಬರೆದರೆ ಏನೇನು ರಿಸ್ಕ್ ಇದೆ ಎಂಬುದಕ್ಕೆ ಮಂಗಳೂರಿ[ನ] ಕರಾವಳಿ ಅಲೆ ಪತ್ರಿಕೆಗಿಂತ ಇನ್ನೊಂದು ಉದಾಹರಣೆ ಬೇಕಾಗಿಲ್ಲ, ಸತ್ಯಾಂಶವ[ನ್ನು] ತಿರುಚಿ ಸಂಘಪರಿವಾರದ ಪರವಾಗಿ ಬರೆದರೆ ರಾಜ್ಯೋತ್ಸವ ಪ್ರಶಸ್ತಿ, ಡಾಕ್ಟರೇಟ್ ಪ್ರಾಪ್ತವಾಗುವ ಕಾಲವಿದು. ಜೊತೆಗೆ ನಂ. 1 ಎಂಬ ಪಟ್ಟವೂ ಸಿಗುತ್ತೆ.

ಕರಾವಳಿ ಅಲೆ ಪತ್ರಿಕೆಯ ವಿರುದ್ಧ ಸಂಘ ಪರಿವಾರ ತಿರುಗಿ ಬೀಳ[ಲು] ಮುಖ್ಯ ಕಾರಣಗಳು ಹಲವಾರಿವೆ.

* ಕರಾವಳಿ ಸೇರಿದಂತೆ ರಾಜ್ಯಾದ್ಯಂತ ಚರ್ಚುಗಳ ಮೇಲೆ ಭಜರಂಗದಳ ನಡೆಸಿ[ದ] ದಾಳಿಯ ಕುರಿತು ನಿಷ್ಪಕ್ಷಪಾತ ವರದಿ ಪ್ರಕಟಿಸಿದ್ದು.
* ಕಳೆದ ಅಕ್ಟೋಬರ್‌ನಲ್ಲಿ ಮಂಗಳೂರು ಜೈಲಿನಲ್ಲಿ ಇಬ್ಬರು ಮುಸ್ಲಿಮ್ ಕೈದಿಗ[ಳ] ಮೇಲೆ ಭಜರಂಗಿಗಳು ನಡೆಸಿದ ಹಲ್ಲೆಯ ಕುರಿತು ಸವಿಸ್ತಾರ ವರದಿ ಪ್ರಕಟಿಸಿದ[್ದು].
* ಮಂಗಳೂರು ಜೈಲಿನೊಳಗೆ ಜೈಲಧಿಕಾರಿ ಹಾಗೂ ಭಜರಂಗಿ ಕೈದಿಗಳ[ು] ನಡೆಸುತ್ತಿದ್ದ ಅಕ್ರಮ ಚಟುವಟಿಕೆಗಳ ಕುರಿತು ರಹಸ್ಯ ಮಾಹಿತಿ ಪಡೆದ[ು] ಪ್ರಕಟಿಸಿದ್ದು.
* ಮಂಗಳೂರು ಆಸುಪಾಸು ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿರುವ ಸೆಝ್ [...] ಕಾಮಗಾರಿಗಳ ವಿರುದ್ಧ ಧ್ವನಿಯೆತ್ತಿದ್ದು, ಜನರನ್ನು ಜಾಗೃತಿಗೊಳಿಸಿ ವರ[ದಿ] ಪ್ರಕಟಿಸುತ್ತಿದ್ದುದು.
* ಮಂಗಳೂರು ನಗರದಲ್ಲಿ ಖಾಸಗಿ ಬಸ್ಸುಗಳಿಗೆ ಕಡಿವಾಣ ಹಾಕಿ ಸರ್ಕಾ[ರಿ] ಬಸ್ಸುಗಳನ್ನು ವ್ಯವಸ್ಥೆಗೊಳಿಸುವ ಸರ್ಕಾರದ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿ ವರ[ದಿ] ಪ್ರಕಟಿಸಿದ್ದು, ಖಾಸಗಿ ಬಸ್ಸುಗಳ ಅವಾಂತರದ ವಿರುದ್ಧ ವರದಿ ಪ್ರಕಟಿಸುತ್ತಿದ್ದುದು.
* ಮಕ್ಕಳ ಕಳ್ಳ ಸಾಗಣೆಯನ್ನು ನಡೆಸುತ್ತಿದ್ದಾರೆ ಎಂಬ ಆರೋಪವಿರುವ ವಜ್ರದೇಹಿ ಸ್ವಾಮೀಜೀಯ ಕುರಿತು ವಿಸ್ತೃತ ವಿಶೇಷ ವರದಿಯನ್ನು ಪ್ರಕಟಿಸಿದ್ದು. ವಜ್ರದೇಹಿ ಸ್ವಾಮೀಜಿಯು ಭಜರಂಗಿಗಳೊಂದಿಗೆ ಉತ್ತಮ ನಂಟು ಇರಿಸಿಕೊಂಡಿರುವುದರಿಂ[ದ] ಪತ್ರಿಕೆಯ ಮೇಲೆ ಸೇಡು ತೀರಿಸಿಕೊಳ್ಳಲು ಹಾದಿ ಸುಗಮವಾಯಿತು.
* ಇದಲ್ಲದೆ ಭಜರಂಗದಳ ಕಾರ್ಯಕರ್ತನಿಂದ ನಡೆಸಲ್ಪಡುತ್ತಿರುವ 'ಜಯ ಕಿರಣ' ಎಂಬ ಇನ್ನೊಂದು ಸಂಜೆ ಪತ್ರಿಕೆಯ ಪ್ರತಿಸ್ಪರ್ಧಿಯಂತಿದ್ದ ಕರಾವಳಿ ಅಲೆಯನ್ನು ದಮನಿಸುವುದು ಸಂಘ ಪರಿವಾರಕ್ಕೆ ಅನಿವಾರ್ಯವಾಗಿತ್ತು.
* ಇತ್ತೀಚೆಗಷ್ಟೇ ಬಹಿರಂಗಗೊಂಡ ಕೇಸರಿ ಭಯೋತ್ಪಾದನೆಯ ಕುರಿತು ನಿರ್ಭಯವಾಗಿ ವರದಿ ಪ್ರಕಟಿಸಿದ್ದು ಕರಾವಳಿ ಅಲೆ ಸಂಜೆ ಪತ್ರಿಕೆ ಮಾತ್ರ.

ಈ ಎಲ್ಲ ದ್ವೇಷವನ್ನು ಒಮ್ಮೆಲೆ ತೀರಿಸುತ್ತಿರುವ ಭಜರಂಗಿಗಳು ನಗರದ ಸಿಕ್ಕಸಿಕ್ಕ ಸ್ಟಾಲುಗಳಿಗೆ ಬೆದರಿಕೆಯೊಡ್ಡುತ್ತಿದ್ದಾರೆ. ಅದೇ ರೀತಿ ಬಜ್ಪೆ, ಕಂಕನಾಡಿ, ಬಲ್ಮಠ, ರಾವ್ ಅಂಡ್ ರಾವ್ ಸರ್ಕಲ್ ಮುಂತಾದ ಕಡೆ ಸ್ಟಾಲುಗಳಿಗೆ ತೆರ[ಳಿ] ಕರಾವಳಿ ಅಲೆ ಪತ್ರಿಕೆಯನ್ನು ಮಾರಾಟ ಮಾಡದಂತೆ ಬೆದರಿಸುತ್ತಿದ್ದಾರೆ.

ಒಂದೇ ಕಲ್ಲಿಗೆ ಮೂರು ಹಣ್ಣು ಎನ್ನುವಂತೆ ಇಲ್ಲಿ ಚಡ್ಡಿಗಳು ಗುರಿಯಾಗಿರಿಸಿರುವುದು ಕೇವಲ ಪತ್ರಿಕೆಯನ್ನು ಮಾತ್ರವನ್ನಲ್ಲ, ಅದನ್ನು ಮಾರಾಟ ಮಾಡುತ್ತಿರುವ ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ಏಜೆಂಟರನ್ನೂ ಗುರಿಯಾಗಿಸಿದ್ದಾರೆ.

ಈ ಹಿಂದೆ ತರುಣಸಾಗರ ಎಂಬ ಜೈನಮುನಿಯನ್ನು ಟೀಕಿಸಿ ಬರೆದಿದ್ದ ಸಂದರ್ಭದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಕಾನೂನು ಸುವ್ಯವಸ್ಥೆ ಇಷ್ಟೊಂದು ಬಿಗಡಾಯಿಸಿರಲಿಲ್ಲ. ಈಗ ಪತ್ರಿಕಾ ಕಚೇರಿಯನ್ನೂ ಧ್ವಂಸ ಮಾಡಿ, ಕಂಪ್ಯೂಟರ್‌ನ್ನು ಪುಡಿ ಮಾಡಿ, ಹೊರಗಡೆ ಕಾವಲು ಕಾಯುತ್ತಿದ್ದ ಪೊಲೀಸ್ ಸಿಬ್ಬಂದಿಯ ಮೇಲೂ ಹಲ್ಲೆ ನಡೆಸಿ ಕೇಸರಿ ಮುಸುಕುಧಾರಿಗಳು ಪರಾರಿಯಾಗಿದ್ದಾರೆ. ಪತ್ರಿಕೆಯ ಪ್ರಕಾಶಕ ಬಿ.ವಿ. ಸೀತಾರಾಮ್ ಹಾಗೂ ಅವರ ಪತ್ನಿ ರೋಹಿಣಿ ಅವರಿಗೆ ನಿತ್ಯವೂ ಬೆದರಿಕೆಯ ಕರೆಗಳು ಬರುತ್ತಿವೆ. ವಜ್ರದೇಹಿ ಸ್ವಾಮೀಜಿ ಬಹಿರಂಗವಾಗಿಯೇ ದಾಳಿಯ ಹೊಣೆಯನ್ನು ಹೊತ್ತುಕೊಂಡಿದ್ದಾನೆ. "ನನ್ನ ವಿರುದ್ಧ ಬರೆದುದ್ದಕ್ಕಾಗಿ ಮನನೊಂದ ಅಭಿಮಾನಿಗಳು ಭಕ್ತರು ಈ ಕೃತ್ಯವೆಸಗಿದ್ದಾರೆ" ಎಂದು ಇನ್ನೊಂದು ಚಡ್ಡಿ ಸಂಜೆ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾನೆ.

ಪತ್ರಿಕಾ ಸ್ವಾತಂತ್ರ್ಯವನ್ನೇ ಹತ್ತಿಕ್ಕುವ ಕರಾಳ ಕೃತ್ಯಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಗೃಹ ಸಚಿವ ಡಾ. ವಿ.ಎಸ್. ಆಚಾರ್ಯ ಮೌನವಾಗಿಯೇ ಇದ್ದಾರೆ. ಕನಿಷ್ಠ ಪಕ್ಷ ಪತ್ರಿಕಾ ಬಳಗವನ್ನು ಮಾತನಾಡಿಸಿಲ್ಲ. ಇನ್ನು ಉಸ್ತುವಾರಿ ಸಚಿವ ಪಾಲೆಮಾರ್ ಒಂದು ಬಾರಿ ಭೇಟಿ ನೀಡಿ ಕೈತೊಳೆದುಕೊಂಡು ಉಳಿದ ಕೆಲಸವನ್ನು ಭಜರಂಗಿಗಳ[ಿಗೆ] ಕೈಗೊಪ್ಪಿಸಿದ್ದಾರೆ. ಇನ್ನು ಜಿಲ್ಲಾ ಪೊಲೀಸ್ ಇಲಾಖೆಯಂತೂ ಒಳಗೊಳಗೆ ಸಂತೋಷಪಡುತ್ತಿರುವ ವಿಘ್ನ ಸಂತೋಷಿಗಳಾಗಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ಈವರೆಗೆ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸಿಲ್ಲ, ಮಾತ್ರವಲ್ಲ ಪತ್ರಿಕಾ ಕಚೇರಿಗೆ ಸೂಕ್ತ ಭದ್ರತಾ ವ್ಯವಸ್ಥೆಯನ್ನೂ ಕಲ್ಪಿಸಿಲ್ಲ.

ಕಳೆದೆರಡು ದಿನಗಳಿಂದ ಪತ್ರಿಕಾ ಪ್ರಸಾರದ ಕಾರಿನಲ್ಲಿ ಓರ್ವ ಪೊಲೀಸ್ ಪೇದೆಯನ್ನು ಕಳುಹಿಸಲಾಗುತ್ತಿದೆ. ಆದರೆ ಸ್ಟಾಲ್‌ನವರು ಪತ್ರಿಕೆ ಇಟ್ಟುಕೊಳ್ಳಲು ಒಪ್ಪಿಕೊಳ್ಳಬೇಕಲ್ಲ, ಅಂತಹ ಭೀತಿಯ ವಾತಾವರಣ ಸೃಷ್ಟಿಸುವವರೆಗೆ ಕೈಕಟ್ಟಿ ಕುಳಿತಿದ್ದ ಪೊಲೀಸರು, ಈಗ ಕಾಟಾಚಾರಕ್ಕೆ ಕಾರಿನಲ್ಲಿ ಪೇಪರ್ ಬಂಡಲ್‌ನೊಂದಿಗೆ [ಕಳ]ಸುತ್ತಾದಿದರೆ ಆಗುವ ಪ್ರಯೋಜನವಾದರೂ ಏನು?

ಅದೇನೇ ಇರಲಿ, ಇಷ್ಟಕ್ಕೂ ಮಂಗಳೂರಿನಲ್ಲಿ ಪ್ರೆಸ್‌ಕ್ಲಬ್ ಇದೆ ಎಂಬುದನ್ನು ಮರೆಯುವಂತಿಲ್ಲ, ಕರಾವಳಿ ಅಲೆ ಪತ್ರಿಕೆಯ ಮೇಲೆ ಈ ಪರಿಯ ದಾಳಿ, ಆಕ್ರಮಣ ನಡೆಯುತ್ತಿದ್ದರೂ ಪತ್ರಿಕಾ ಸಂಘದ ವತಿಯಿಂದ ಚಿಕ್ಕ ಪ್ರತಿಭಟನೆಯನ್ನೂ ಹಮ್ಮಿಕೊಳ್ಳಲಾಗಿಲ್ಲ, ಆರೋಪಿಗಳನ್ನು ಬಂಧಿಸುವಂತೆ ಪೊಲೀಸ್ ಇಲಾಖೆಯನ್ನು ಒತ್ತಾಯಿಸುವ ಗೋಜಿಗೂ ಹೋಗಿಲ್ಲ, ಅದು ಬಿಡಿ, ಪತ್ರಿಕಾ ಕಚೇರಿ ಮೇಲೆ ದಾಳಿ ಮಾಡಿರುವ ಕುರಿತು ಸ್ಪಷ್ಟ ವರದಿಯನ್ನಾದರೂ ಪ್ರಕಟಿಸಬಹುದಿತ್ತಲ್ಲ, ಕೆಲವೊಂದು ಬೆರಳೆಣಿಕೆಯ ಪತ್ರಿಕೆಗಳನ್ನು ಹೊರತುಪಡಿಸಿದರೆ ಮಿಕ್ಕ ಎಲ್ಲವೂ ಇಲ್ಲಿ ಒಂದೇ ರೀತಿಯ ವಿಕೃತ ಪತ್ರಿಕಾ ಧರ್ಮವನ್ನು ಅನುಸರಿಸುತ್ತಿವೆ.

■ ಫಯಾಜ್



ಕುಂಚಿಟಿಗರಿಗೇ ಕಂಟಕವಾದ ಶಾಂತವೀರಸ್ವಾಮಿ



ಮುರುಘಾಮಠದ ಶಾಖಾಮಠ ಹೊಸದುರ್ಗದ ಒಪ್ಪತ್ತಿನ ಮಠದಿಂದ ಶ್ರೀ ಬಸವಶಾಂತವೀರ ಸ್ವಾಮೀಜಿಗೆ ಗೇಟ್‌ಪಾಸ್ ನೀಡಲಾಗಿದೆ. ಇದು ಅನಿರೀಕ್ಷಿತವೇನಲ್ಲ. ಶಿವಮೂರ್ತಿ ಶರಣರು ಆಡಳಿತಾಧಿಕಾರಿಯಾಗಿದ್ದ ಎಸ್.ಕೆ. ಬಸವರಾಜನ್‌ರನ್ನು ಮಠದಿಂದ ಹೊರಹಾಕಿದಾಗಲೇ ಬಸವಶಾಂತವೀರ ಸ್ವಾಮೀಜಿಗೂ ಗೇಟ್‌ಪಾಸ್ ನೀಡಲಿರುವ ವಿಚಾರ ಪ್ರಸ್ತುಕ್ಕ ಪಡೆದುಕೊಂಡಿತ್ತು. ನಂತರದ ದಿನಗಳಲ್ಲಿ ಅದು ಕೇವಲ ವದಂತಿ ಎಂಬಂತೆ ಭಕ್ತಾದಿಗಳ ಮನಸ್ಸಿನಿಂದ ಮರೆತೇ ಹೋಯಿತು. ಈಗ ಒಪ್ಪತ್ತಿನ ಮಠದ ಬಸವ ಶಾಂತವೀರ ಸ್ವಾಮೀಜಿ ಹಿರಿಯೂರಿನಲ್ಲಿ ಪತ್ರಿಕಾ ಹೇಳಿಕೆ ನೀಡಿ "ಒಪ್ಪತ್ತಿನ ಮಠ ತ್ಯಜಿಸುವಂತೆ ಶಿವಮೂರ್ತಿ ಮುರುಘಾಶರಣರು ಫೆ. 28 ರ ಗಡುವಿನೊಂದಿಗೆ ನೋಟಿಸ್ ನೀಡಿದ್ದು ನಾನು ನೂತನ ಮಠ ಕಟ್ಟಿಸುತ್ತೇನೆ. ನಾನು ಸ್ವಾಭಿಮಾನ-ಸಂಘಟನಾ ಶಕ್ತಿ ಪ್ರದರ್ಶಿಸಿದ್ದು ಒಪ್ಪತ್ತಿನ ಮಠದಿಂದ ಹೊರ ಹಾಕಲು ಕಾರಣ. ಮಠ ಬಿಡಿಸುವ ಸಂಪ್ರದಾಯಕ್ಕೆ ಬಲಿಗಾದವರಲ್ಲಿ ನಾನೇನೂ ಮೊದಲಿಗನಲ್ಲ. ಈಗ ನಾನೇ ಕಟ್ಟಿ ಬೆಳೆಸಿದ ಮಠ ಬಿಡುವಂತಾಗಿರುವುದು ನೋವಿನ ಸಂಗತಿಯಾದರೂ ಸ್ವಂತಿಕೆ, ಸ್ವಾಭಿಮಾನ ಹಾಗೂ ಸಂಘಟನಾ ಸಾಮರ್ಥ್ಯ ಪ್ರದರ್ಶನಕ್ಕೆ ಬಲವೆಂದು ಭಾವಿಸಿರುವೆ' ಎಂದು ಹೇಳಿಕೊಂಡಿದ್ದಾನೆ. ಮುಂದುವರಿದು ಶಿವಮೂರ್ತಿ ಶರಣರಿಗೂ ತಮಗೂ ಭಿನ್ನಾಭಿಪ್ರಾಯವಿಲ್ಲ ಎಂದು ಘೋಷಾರಿಸಿದ್ದಾನೆ.

ಶಿವಮೂರ್ತಿ ಶರಣರನ್ನು ಖಳನಾಯಕನ ಪದದಲ್ಲಿರಿಸಿರುವ ಬಸವಶಾಂತವೀರ ಸ್ವಾಮೀಜಿಯ ಹೇಳಿಕೆ ಸ್ವತಃ ಕುಂಚಟಿಗ ಜನಾಂಗದ ಮುಖಂಡರಿಗೇ ಬೇಸರ ತರಿಸಿದೆ. ಈತನ ಹುಂಬತನದ ಮಾತಿನ ವೈಖರಿ ಗಮನಿಸಿರುವ ಪ್ರತ್ಯೇಕ ಕುಂಚಟಿಗ ಜನಾಂಗದ ಮುಖಂಡರು ಈ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಾರದೆಂದು ಮುರುಘಾಶರಣರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಶಿವಮೂರ್ತಿ ಶರಣರು ಈ ಬಗ್ಗೆ ಬಹಿರಂಗ ಹೇಳಿಕೆ ನೀಡಿಲ್ಲವಾದರೂ ತಮ್ಮನ್ನು ಸಂಪರ್ಕಿಸಿದ ಕುಂಚಟಿಗ ಜನಾಂಗದ ಮುಖಂಡರ ಬಳಿ ಬಸವಶಾಂತವೀರ ಸ್ವಾಮೀಜಿಯ ನಡವಳಿಕೆಯ ಬಗ್ಗೆ ತುಂಬ ಅಸಮಾಧಾನ ವ್ಯಕ್ತಪಡಿಸಿದ್ದಾರೆನ್ನಲಾಗಿದೆ.



ಬಸವರಾಜ್

ಅಷ್ಟಕ್ಕೂ ಇಂತಹ ಬೆಳವಣಿಗೆಗೆ ಕಾರಣವೇನು? ಒಂದಂತೂ ಸತ್ಯ. ಒಪ್ಪತ್ತಿನ ಮಠ ಬಿಟ್ಟು ಹೋಗಲಿಕ್ಕೆ ಶಾಂತವೀರ ಸ್ವಾಮೀಜಿ ಕೊಡುತ್ತಿರುವ ಕಾರಣದಲ್ಲಿ ಎಳ್ಳಷ್ಟೂ ಹುರುಳಿಲ್ಲ. ಶಿವಮೂರ್ತಿ ಮುರುಘಾಶರಣರು ಹಿಂದುಳಿದ ಜಾತಿಗಳಿಗೆ ಒಂದೊಂದು ಮಠ ಸ್ಥಾಪಿಸಿ ಆ ಸಮುದಾಯಗಳು ಬಸವಾದಿಶರಣರ ತತ್ವಗಳ ಅಡಿಯಲ್ಲಿ ಸಂಘಟಿತವಾಗಬೇಕೆಂಬ ಆಶಯ ಹೊಂದಿರುವವರು.

ಕುಂಚಟಿಗ ಲಿಂಗಾಯತರನ್ನು ಲಿಂಗಾಯತ ಸಮಾಜದಲ್ಲೇ ಕೀಳಾಗಿ ಕಾಣುವ ಪರಿಪಾಠವಿದ್ದಾಗ ಜಗದ್ಗುರುಗಳು ಈ ಸಮಾಜಕ್ಕೆ ಧಾರ್ಮಿಕ ಗುರು ನೀಡಿದ್ದರು. ಕುಂಚಟಿಗ ಲಿಂಗಾಯತರಿಗೆ ಮುರುಘಾಮಠ ಒಂದು ಧಾರ್ಮಿಕ ಕೇಂದ್ರವಾಗಿದ್ದುದು ಇದೇ ಕಾರಣಕ್ಕೆ. ಇದೇ ಹಿನ್ನೆಲೆಯಲ್ಲಿ ಕುಂಚಟಿಗ ಸಮುದಾಯ ಇನ್ನಷ್ಟು ಸಂಘಟಿತವಾಗಿ, ಸಾಂಸ್ಕೃತಿಕವಾಗಿ ಬಲಿಷ್ಠವಾಗಬೇಕೆಂಬ ಉದ್ದೇಶದಿಂದಲೇ ಬಸವಶಾಂತವೀರ ಸ್ವಾಮೀಜಿಯನ್ನು ಒಪ್ಪತ್ತಿನ ಮಠಕ್ಕೆ ನೇಮಕ ಮಾಡಿದ್ದರು. ಪರಿಸ್ಥಿತಿ ಹೀಗಿರುವಾಗ ಬಸವಶಾಂತವೀರ ಸ್ವಾಮೀಜಿ ಸ್ವಾಭಿಮಾನ-ಸಂಘಟನಾ ಶಕ್ತಿ ಪ್ರದರ್ಶಿಸಿದರೆ, ಕುಂಚಟಿಗ ಸಮಾಜದಲ್ಲಿ ಪ್ರಾಬಲ್ಯ-ಮಹತ್ವ ಪಡೆದುಕೊಂಡರೆ ಶಿವಮೂರ್ತಿ ಶರಣರು ಅಸಹನೆ ಪಡುವವರಲ್ಲ. ಮಠದಿಂದ ಇವತ್ತು ಶಾಂತವೀರಸ್ವಾಮಿಗಳು ಹೊರಬೀಳಲೇಬೇಕಾದ ದಯನೀಯ ಸ್ಥಿತಿಗೆ ಆತನ ಸ್ವಯಂಕೃತಾಪರಾಧಗಳು, ಉದ್ಧಟತನದ ನಡವಳಿಕೆಗಳೇ ಕಾರಣ.

ಬಸವಶಾಂತವೀರ ಸ್ವಾಮೀಜಿಯ ಪೂರ್ವಾಶ್ರಮದ ಚರಿತ್ರೆ ಅಷ್ಟೇನೂ ಚೆನ್ನಾಗಿಲ್ಲ. ತನ್ನ ಹುಟ್ಟೂರು ಕೋಡಿಹಳ್ಳಿಯಲ್ಲೇ ಈತನಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಕೋಳಿಕಳ್ಳರು, ಕಾಯಿಕಳ್ಳರು, ಅಪಾಪೋಲಿಗಳ ಪಟ್ಟಿಯಲ್ಲಿದ್ದ ನಾಗರಾಜ ಕಾವಿಧಾರಿಯಾದರೂ ಊರಲ್ಲಿ ತಮ್ಮ ಇಮೇಜಿನ ಆಚೆ ಹೊರಬರಲಾಗಿಲ್ಲ. ಎಲ್ಲಾ ಬಡಮಕ್ಕಳಂತೆ ಮಠಕ್ಕೆ ಬಂದವನು ಎಸ್.ಎಸ್.ಎಲ್.ಸಿ.ಯವರೆಗೆ ವ್ಯಾಸಾಂಗ ಮಾಡಿದ. ಪಾಸಾಗಿರುವುದು ರಾಷ್ಟ್ರಭಾಷೆ ಹಿಂದಿಯೊಂದರಲ್ಲೇ. ತಾಯಿ ಕನ್ನಡಾಂಬೆ ಈತನಿಗೆ ಒಲಿಯಲಿಲ್ಲ. ನಾಗರಾಜ ಸೌಭಾಗ್ಯ ಬಸವರಾಜನ್‌ರ ಸೋದರ ಸಂಬಂಧಿಯಾಗಿದ್ದ ಎಂಬ ಕಾರಣಕ್ಕೆ ಗುರುಕುಲದಲ್ಲಿ ಸಂಸ್ಕಾರ ಪಡೆದು ನಂತರ ಬಸವಶಾಂತವೀರ ಸ್ವಾಮೀಜಿಯಾಗಿ ದೀಕ್ಷೆ ಪಡೆದ. ಈತನ ಇಮೇಜ್ ಬಿಲ್ಡ್ ಅಪ್ ಮಾಡಲು ಹೆಣಗಿದವರಲ್ಲಿ ಪರ್ಚೇಸಿಂಗ್ ಆಫೀಸರ್ ರುದ್ರಪ್ಪನದೂ ಪಾಲಿತ್ತು.

ವೀರಶೈವ ಸಮಾಜವೇ ವಿರೋಧಿಸಿತ್ತು

ಬಸವಶಾಂತವೀರ ಸ್ವಾಮೀಜಿಯನ್ನು ಹೊಸದುರ್ಗದ ಒಪ್ಪತ್ತಿನ ಮಠದಲ್ಲಿ ಪ್ರತಿಷ್ಠಾಪಿಸಲು ಹೋದಾಗ ಇಡೀ ಹೊಸದುರ್ಗದ ವೀರಶೈವ ಸಮಾಜವೇ ಪ್ರಬಲ ವಿರೋಧ ಮಾಡಿತ್ತು. ಅಂದು ಶಿವಮೂರ್ತಿ ಶರಣರು ತಮ್ಮ ಶಿಷ್ಯಗಣವನ್ನೆಲ್ಲಾ ಜೊತೆಗೆ ಕರೆದೊಯ್ದು ಬೃಹತ್ ಮೆರವಣಿಗೆ ಮಾಡಿ ಬಸವಶಾಂತವೀರ ಸ್ವಾಮೀಜಿಗೆ ಬೆಂಬಲ ಘೋಷಿಸಿ ಬಂದಿದ್ದರು. ಹಾಲಿ ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪನೂ ಅಂದಿನ ವಿದ್ಯಮಾನಕ್ಕೆ ಸಾಕ್ಷಿಯಾಗಿದ್ದರು. ಇಡೀ ಕಾರ್ಯಕ್ರಮದ ಮುಂದಾಳುಗಳಾಗಿ ಜವಾಬ್ದಾರಿ ವಹಿಸಿಕೊಂಡವರು ಹಾಲಿ ಶಾಸಕರಾಗಿರುವ, ಅಂದಿನ ಆಡಳಿತಾಧಿಕಾರಿಯಾಗಿದ್ದ, ಎಸ್.ಕೆ. ಬಸವರಾಜನ್ ಮತ್ತು ಸೌಭಾಗ್ಯ ಬಸವರಾಜನ್. ಬೇರಾವ ಸ್ವಾಮೀಜಿಯ ಬೀಳ್ಕೊಡುಗೆಗೂ ಮುತುವರ್ಜಿ ವಹಿಸದ ಬಸವರಾಜನ್ ದಂಪತಿಗಳು ಅಂದು ಮಾತ್ರ ವಿಶೇಷ ಮುತುವರ್ಜಿ ವಹಿಸಿದರು. ಈಗ ತಾನೇ ಕಟ್ಟಿ ಬೆಳೆಸಿದ ಮಠ ಬಿಡುವಂತಾಗಿರುವುದು ನೋವಿನ ಸಂಗತಿ ಎಂದು ಹೇಳುವ ಬಸವಶಾಂತವೀರ ಸ್ವಾಮಿಗೆ ಅಲ್ಲಿ ವಿಶೇಷವಾಗಿ ಏನನ್ನೂ ಕಿಸಿಯಲಿಲ್ಲ. ಸುವ್ಯವಸ್ಥಿತವಾದ ಕಲ್ಯಾಣ ಮಂಟಪ ಜಯದೇವ ಹಾಸ್ಟೆಲ್ ಇತ್ತು. ಜಾತ್ಯತೀತವಾಗಿ ಎಲ್ಲ ಜನರ ಸಹಕಾರದಿಂದ ಒಪ್ಪತ್ತಿನ ಮಠ ಆ ಭಾಗದ ಜನರ ಅಭಿಮಾನಕ್ಕೆ ಪಾತ್ರವಾಗಿತ್ತು. ಪ್ರತಿ ತಿಂಗಳು ಶರಣ ಸಂಗಮದಂತಹ ಕಾರ್ಯಕ್ರಮಗಳು, ಬಸವಾದಿ ಶರಣರ ಸ್ಮರಣೋತ್ಸವಗಳು ನಡೆಯುತ್ತಿದ್ದವು.

ಬಸವತತ್ವಗಳಿಗೆ ತಿಲಾಂಜಲಿ

ಬಸವಶಾಂತವೀರ ಸ್ವಾಮೀಜಿ ಒಪ್ಪತ್ತಿನ ಮಠದಲ್ಲಿ ನೆಲೆನಿಂತ ನಂತರ ಈ ಎಲ್ಲಾ ಬಸವತತ್ವಾಚರಣೆಗಳಿಗೆ ತಿಲಾಂಜಲಿ ನೀಡಲಾಯಿತು. ಬರುಬರುತ್ತಾ ಅದು ಕುಂಚಟಿಗ ಜನಾಂಗದವರು ಮಾತ್ರ ಸೇರುವ ತಾಣವಾಯಿತು. ಬೇರೆಬೇರೇ ಜನಾಂಗಗಳ ಸಂಪರ್ಕ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಚುನಾವಣೆ ಸಂದರ್ಭದಲ್ಲಂತೂ ಅದು ಕುಂಚಟಿಗ ಲಿಂಗಾಯತರ ರಾಜಕೀಯ ಅಡ್ಡೆ ಆಯಿತು. ಮಠದಲ್ಲಿ ರಾಜಕೀಯ ಚಟುವಟಿಕೆ ನಡೆಸಬೇಡಿ ಎಂಬ ಎಚ್ಚರಿಕೆಯನ್ನೂ ಶಿವಮೂರ್ತಿ ಶರಣರು ಕೊಟ್ಟರು. ಅದೇ ಸಂದರ್ಭದಲ್ಲಿ ಬಸವರಾಜನ್‌ರನ್ನು ರಾಜಕೀಯವಾಗಿ ಬೆಂಬಲಿಸುತ್ತಿದ್ದರೆಂಬ ಕಾರಣಕ್ಕೆ ಮಾದಾರಚನ್ನಯ್ಯ ಸ್ವಾಮೀಜಿಗಳಿಗೂ ಇಂತದೇ ಎಚ್ಚರಿಕೆ ನೀಡಿದ್ದರು. ಪರಿಸ್ಥಿತಿಯಲ್ಲಿ ಯಾವ ಸುಧಾರಣೆ ಕಂಡುಬರಲಿಲ್ಲ. ಅಲ್ಲಿನ ಬೇರೆಬೇರೆ ಜನಾಂಗದ ಭಕ್ತಾದಿಗಳು ಮುರುಘಾ ಶರಣರ ಬಳಿ ದೂರಿದಾಗಲೂ ಇಂದಲ್ಲ ನಾಳೆ ಪರಿಸ್ಥಿತಿ ಬದಲಾಗಬಹುದೆಂದು ಬಸವಶಾಂತ ವೀರಸ್ವಾಮೀಜಿಯನ್ನೇ ಮುರುಘಾಶರಣರು ಬೆಂಬಲಿಸಿದರು. ಇದಕ್ಕೆ ವ್ಯತಿರಿಕ್ತವಾಗಿ ಬಸವಶಾಂತವೀರ ಸ್ವಾಮೀಜಿ ಬಸವ ತತ್ವಾಚರಣೆ ಬದಿಗಿರಿಸಿದ್ದು ಮಾತ್ರವಲ್ಲ, ತನಗೆ ಸೌಭಾಗ್ಯಮ್ಮನ ಬೆಂಬಲವಿದೆ. ತಾನೇ ಇಂದಲ್ಲ ನಾಳೆ ಮುರುಘಾಮಠಕ್ಕೂ ಸ್ವಾಮೀಜಿಯಾಗ್ತೀನಿ ಎಂಬಂತ ಹುಂಬತನದ ಮಾತುಗಳನ್ನಾಡಲಾರಂಭಿಸಿದ್ದ. ಆಗಾಗ ತನ್ನ ಮಾತುಕತೆಗಳಲ್ಲಿ ಶಿವಮೂರ್ತಿ ಶರಣರ ಕುರಿತು ಹಗುರವಾಗಿ ಮಾತನಾಡುವ ಚಾಳಿ ಬೆಳೆಸಿಕೊಂಡಿದ್ದ. ಒಂದೆರಡು ಸಮಾರಂಭಗಳಲ್ಲಿ ನನಗೆ ಮುರುಘಾಮಠ ಮುಖ್ಯವಲ್ಲ, ನನ್ನ ಸಮುದಾಯದವರೇ ಮುಖ್ಯ ಎಂದು ಹೇಳಿ ಶರಣರಿಗೆ ಇರಿಸು-ಮುರಿಸು ಉಂಟು ಮಾಡಿದ್ದ. ಹೊಸದುರ್ಗ-ಹಿರಿಯೂರಿನಲ್ಲಿ ನಡೆದ ಹಿಂದೂ ವಿರಾಟ್ ಸಮಾಜೋತ್ಸವದಲ್ಲಿ ಭಾಗವಹಿಸಿ ಥೇಟ್ ಪ್ರಮೋದ್ ಮುತಾಲಿಕನ ಸಹೋದರನಂತೆ ತನ್ನ ಮುಸ್ಲಿಂ ದ್ವೇಷವನ್ನು ಕಾರಿಕೊಂಡಿದ್ದ. ಸ್ವತಃ ಮುರುಘಾಶರಣರೇ ತಿಳಿ ಹೇಳಿದರೂ ಬದಲಾಗಲಿಲ್ಲ.

ಶಿವಮೂರ್ತಿ ಶರಣರನ್ನೇ ತಡೆದರು

ಕಳೆದ ಆಷಾಢಮಾಸದಲ್ಲಿ ಹೊಸದುರ್ಗದ ಚರ್ಚೋಂದರಲ್ಲಿ 'ಆಷಾಢದ ಅನುಭವ ಚಿಂತನ ಮಾಲೆ'ಯ ಕಾರ್ಯಕ್ರಮ ಮುಗಿಸಿಕೊಂಡು ಒಪ್ಪತ್ತಿನ ಮಠಕ್ಕೆ ಹೋದರೆ ಶಾಂತವೀರ ಸ್ವಾಮೀಜಿಯ ಬೆಂಬಲಕ್ಕೆ ನಿಂತಿದ್ದ ಕೆಲ ಪಟ್ಟಭದ್ರರು ಶಿವಮೂರ್ತಿ ಶರಣರನ್ನು ಒಳಬರದಂತೆ ತಡೆಯುವ ಪ್ರಯತ್ನ ಮಾಡಿದರು. ಈ ಘಟನೆಯನ್ನು ಕಣ್ಣಾರೆ ನೋಡುತ್ತಿದ್ದ ಬಸವಶಾಂತವೀರ ಸ್ವಾಮೀಜಿಯ ಶಿಷ್ಯ ಮ್ಯಾನೇಜರ್ ಶಿವಣ್ಣ ಮತ್ತು ಸಹಚರರು ಜಪ್ಪಯ್ಯ ಅನ್ನದೇ ನಿಂತಿದ್ದರು. ಈ ವಿಷಯ ಗೊತ್ತಿದ್ದರೂ ಶಾಂತವೀರ ಸ್ವಾಮೀಜಿ ತಮ್ಮ ಭಕ್ತರೊಬ್ಬರ ಮನೆಯಲ್ಲಿ ತಮಗೆ ಪ್ರೀತಿ ಪಾತ್ರವಾದ ಒಗ್ಗರಣೆ ಮಂಡಕ್ಕಿ ಮೆಣಸಿನಕಾಯಿ ತಿನ್ನುತ್ತಿದ್ದ. ತಮಗೆ ಸಂಸ್ಕಾರ ನೀಡಿ ಸ್ವಾಮೀಜಿ ಪಟ್ಟಕ್ಕೇರಿಸಿದ ಶಿವಮೂರ್ತಿ ಶರಣರಿಗೆ ಬಸವಶಾಂತವೀರ ಸ್ವಾಮೀಜಿ ಅವಮಾನದ ಬಳುವಳಿ ನೀಡಿದ್ದ.



ಸೌಭಾಗ್ಯ


ಒಪ್ಪತ್ತಿನ ಮಠವನ್ನೇ ನುಂಗಲು ಹೊರಟಿದ್ದ

ಈ ನಡುವೆ ಒಪ್ಪತ್ತಿನ ಮಠಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತಿದ್ದಿ ರಾತ್ರೋರಾತ್ರಿ ಜನರಲ್ ಬಾಡಿ ಮೀಟಿಂಗ್ ಮಾಡಿ ಅಧ್ಯಕ್ಷರಾಗಿದ್ದ ಶಿವಮೂರ್ತಿ ಶರಣರ ಗೈರುಹಾಜರಿ ತೋರಿಸಿ ಇನ್ನು ಮುಂದೆ ತಾನೇ ಅಧ್ಯಕ್ಷ ಎಂದು ರೆಸಲ್ಯೂಷನ್ ಮಾಡಿಸಿ ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಗೆ ಕಳುಹಿಸಿದ. ಬೃಹನ್ಮಠದಿಂದ ಹೊರನಡೆದ ಎಂಟು ತಿಂಗಳ ನಂತರವೂ ಬಸವರಾಜನ್ ಕಾರ್ಯದರ್ಶಿ ಎಂದು ಸಹಿ ಮಾಡಿದ್ದಾರೆ. ಇದೇ ಬಸವರಾಜನ್‌ರ ಪ್ರಭಾವ ಬಳಸಿ ಕೂಡಲೇ ನೋಂದಣಿ ಮಾಡುವಂತೆ ತೀವ್ರ ಒತ್ತಡ ಹೇರಿದ್ದಾರೆ. ಅದೇಗೋ ವಿಷಯ ತಿಳಿದು ಶಿವಮೂರ್ತಿ ಶರಣರು ತಡೆಯೊಡ್ಡಿದ್ದಾರೆ. ಒಂದು ವೇಳೆ ಇದು ನೋಂದಣಿಯಾಗಿದ್ದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಒಪ್ಪತ್ತಿನ ಮಠದ ಆಸ್ತಿ ಶಾಂತವೀರ ಸ್ವಾಮೀಜಿಯ ಮಡಿಲಿಗೆ ಅನಾಯಾಸವಾಗಿ ಬೀಳುತ್ತಿತ್ತು. ತಮ್ಮ ಇಂಥ ಫೋರ್‌ಟ್ವೆಂಟಿ ನಡವಳಿಕೆಗಳು ಬಹಿರಂಗವಾಗಿ ಅನಾವರಣಗೊಂಡ ನಂತರವೂ ಬಸವಶಾಂತವೀರ ಸ್ವಾಮೀಜಿಗೆ ಒಪ್ಪತ್ತಿನ ಮಠದಲ್ಲಿ ಮುಂದುವರೆಯುವ ನೈತಿಕತೆ ಎಲ್ಲಿತ್ತು? ಶಿವಮೂರ್ತಿ ಶರಣರು ಒಂದೇ ಒಂದು ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರೆ ಬಸವಶಾಂತವೀರ ಸ್ವಾಮೀಜಿಗೆ ಜೈಲಿನ ಕಂಬಿಗಳು ತುಂಬಾ ಹತ್ತಿರದಲ್ಲಿದ್ದವು.

ಇಷ್ಟೆಲ್ಲಾ ಬೆಳವಣಿಗೆಗಳ ನಂತರವೇ ಬಸವ ಶಾಂತ ವೀರ ಸ್ವಾಮೀಜಿ ಒಪ್ಪತ್ತಿನ ಮಠ ತ್ಯಜಿಸಿ, ಹಿರಿಯೂರಿನ ಬಳಿ ಪ್ರತ್ಯೇಕ ಕುಂಚಟಿಗ ಮಠ ಸ್ಥಾಪಿಸುವ ಪ್ರಯತ್ನಗಳು ಚಾಲನೆ ಪಡೆದುಕೊಂಡವು. ಈ ಸಂಬಂಧ ಕುಂಚಟಿಗ ಸಮಾಜದ ಮುಖಂಡರು ಹಾಗೂ ತಮ್ಮ ಭಕ್ತಾದಿಗಳ ಸಮ್ಮುಖದಲ್ಲಿ ಎರಡು-ಮೂರು ಬಾರಿ ಮಾತುಕತೆ ನಡೆದು ಹಿರಿಯೂರಿನ ಐಮಂಗಲದ ಬಳಿ ಜಾಗವನ್ನು ಸಹಾ ನೋಡಿ ಜಾಗಕೊಳ್ಳುವಂತೆ ಶಿವಮೂರ್ತಿ ಶರಣರೇ ಸಲಹೆ ಮಾಡಿದ್ದಾರೆ. ಇದಕ್ಕೆ 35 ಲಕ್ಷ ಹಣ ನೀಡಬೇಕೆನ್ನುವ ಒಪ್ಪಂದವಾಗಿ ಶಿವಮೂರ್ತಿ ಶರಣರು 35 ಲಕ್ಷಕ್ಕೆ ಮೂರು ಪ್ರತ್ಯೇಕ ಚೆಕ್‌ಗಳನ್ನೂ ನೀಡಿದ್ದಾರೆ. ಅದರಲ್ಲಿ ಒಂದು ಚೆಕ್‌ನ 10 ಲಕ್ಷ ರೂಪಾಯಿಗಳನ್ನು ಬಸವಶಾಂತವೀರ ಸ್ವಾಮೀಜಿ ಡ್ರಾ ಮಾಡಿಕೊಂಡಿದ್ದಾರೆ. ಸ್ವಂತಿಕೆ, ಸ್ವಾಭಿಮಾನ, ಸಂಘಟನಾಶಕ್ತಿಯ ಮಾತನಾಡುವ ಬಸವ ಶಾಂತವೀರಸ್ವಾಮೀಜಿ ಮುರುಘಾ ಶರಣರಿಂದ ಸಹಾಯ ಪಡೆಯುವಾಗ ಇವನ್ನೆಲ್ಲಾ ಮರೆತಿದ್ದರೆ ಉದ್ದಕ್ಕೂ ಪುಢಾರಿ ರಾಜಕಾರಣಿಯಂತೆ ವರ್ತಿಸುತ್ತಾ ಬಂದು ಈಗ ತಾನೆತಾನಾಗಿ ಹೊರಬಂದಿರುವ ಬಸವಶಾಂತವೀರ ತಾನು ಸ್ವಾಭಿಮಾನ, ಸಂಘಟನಾ ಶಕ್ತಿ ಪ್ರದರ್ಶಿಸಿದ್ದಕ್ಕೆ ಹೊರಹಾಕಲಾಗಿದೆ ಎಂದು ರೈಲು ಬಿಟ್ಟರೆ ನಂಬುವವರ್‍ಯಾರು? ತಮ್ಮ ಮೇಲೆ ಇಂತಹ ಗಂಭೀರ ಆರೋಪ ಬಂದ ನಂತರವೂ ಶಿವಮೂರ್ತಿ ಶರಣರು ಉಳಿದ 25 ಲಕ್ಷ ಹಣ ನೀಡುತ್ತಾರಾ? ಇಷ್ಟೆಲ್ಲಾ ಕಹಿ ಅನುಭವಗಳ ನಂತರವೂ ತಮ್ಮ ಗೌರವಯುತ ನಿರ್ಗಮನಕ್ಕೆ ಅವಕಾಶ ಮಾಡಿಕೊಟ್ಟಿದ್ದ ಶಿವಮೂರ್ತಿ ಶರಣರ ಬಗ್ಗೆ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿ, ತಮ್ಮದೇ ಕುಂಚಟಿಗ ಸಮುದಾಯದ ಅನುಕಂಪ ಪಡೆಯುವ ಪ್ರಯತ್ನ ಅಗತ್ಯವಿತ್ತೇ? ಈತನನ್ನು ಹತ್ತಿರದಿಂದ ಬಲ್ಲವರ್‍ಯಾರೂ ತಮ್ಮ ಸಮುದಾಯಕ್ಕಾದರೂ ಒಳ್ಳೆಯ ಸ್ವಾಮೀಜಿಯಾಗುಳಿಯುತ್ತಾನೆಂಬ ಭರವಸೆ ಉಳಿಸಿಕೊಂಡಿಲ್ಲ. ಬಸವಶಾಂತವೀರ ಸ್ವಾಮೀಜಿಯನ್ನು ಶತಾಯ-ಗತಾಯ ಕುಂಚಟಿಗ ಸಮುದಾಯದ ಸ್ವಾಮೀಜಿಯಾಗಿ ಪ್ರತಿಷ್ಠಾಪಿಸಲೇಬೇಕೆಂದು ಹೊರಟಿರುವ ಕೆಲ ಮುಖಂಡರಿಗೆ ಹಾಗೂ ಈತನನ್ನು ತಾವು ಬೆಂಬಲಿಸಬೇಕೋ ಬೇಡವೋ ಎಂಬ ದ್ವಂದ್ವದಲ್ಲಿರುವವರಿಗೆ ಇದಿಷ್ಟು ಸಂಕ್ಷಿಪ್ತ ಮಾಹಿತಿ. ಇನ್ನು ಉಪಕತೆಗಳ ಪಟ್ಟಿ ದೊಡ್ಡದಿದೆ.

■ ವರದಿಗಾರ

ತುರುವೇಕೆರೆ: ಜಗ್ಗೇಶನ ಮಂಗಾಟ ಬಿಜೆಪಿಗೆ ಸಂಕಟ!



ಜಗ್ಗೇಶನ ಮಂಗಾಟದ ಪರಿಣಾಮವಾಗಿ ತುರುವೇಕೆರೆ ಜನ ಮತ್ತೊಂದು ಎಲೆಕ್ಷನ್ ನೋಡುವಂತಾಗಿ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯಕ್ಕಿರುವ ಮಹತ್ವದ ಬಗ್ಗೆ ತಲೆಬುಡ ಗೊತ್ತಿಲ್ಲದ ಈ ನಟಭಯಂಕರ ದುಡ್ಡಿಗಾಗಿ ತನ್ನನ್ನೇ ಮಾರಿಕೊಂಡು ಬಿಜೆಪಿಯ ಕೊಚ್ಚೆಗುಂಡಿಗೆ ಬಿದ್ದಿದ್ದರಿಂದ ಈ ಚುನಾವಣೆ ನಡೆಯಬೇಕಾಗಿದೆ.


2008ರ ಮೇನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಎಂ.ಟಿ.ಕೃಷ್ಣಪ್ಪ ಬಿಜೆಪಿಯ ಎಂ.ಡಿ.ಲಕ್ಷ್ಮಿನಾರಾಯಣ್ ವಿರುದ್ಧ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ್ದ ಜಗ್ಗೇಶ್‌ನನ್ನು ಇಲ್ಲಿನ ಜನ ತಮ್ಮ ಶಾಸಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಚುನಾವಣಾ ಪೂರ್ವದಲ್ಲಿ ಬಿಜೆಪಿ ಹರಿಸುತ್ತಿದ್ದ ಹಣ-ಹೆಂಡಗಳ ಹೊಳೆಯನ್ನು ನೋಡಿದರೆ ಕಾಂಗ್ರೆಸ್‌ನ ಜಗ್ಗೇಶ್ ಗೆಲ್ಲುವುದು ಕನಸಿನ ಮಾತಾಗಿತ್ತು. ಆದರೂ ತುರುವೇಕೆರೆಯ ಜನ ಹಣ-ಹೆಂಡದಾಸೆಗೆ ತಮ್ಮನ್ನು ಮಾರಿಕೊಳ್ಳದೇ ಜಗ್ಗೇಶ್‌ಗೆ ಓಟು ಹಾಕಿದ್ದರು. ಆದರೆ, ಜಗ್ಗೇಶ್ ಜನರು ತನ್ನ ಮೇಲಿಟ್ಟಿದ್ದ ಅಭಿಮಾನ, ವಿಶ್ವಾಸಗಳಿಗೆ ದ್ರೋಹ ಬಗೆದು ದುಡ್ಡಿನಾಸೆಗೆ ತನ್ನನ್ನು ತಾನೇ ಮಾರಿಕೊಂಡು ಬಿಜೆಪಿ ಕೊಚ್ಚೆಗುಂಡಿಯಲ್ಲಿ ಬಿದ್ದಿದ್ದಾನೆ. ಜಗ್ಗೇಶ್ ಇಂಥ ಸಗಣಿ ತಿನ್ನುವ ಕೆಲಸ ಮಾಡುತ್ತಾನೆಂದು ಮೊದಲೇ ಗೊತ್ತಿದ್ದರೆ ಪ್ರಾಯಶಃ ಅವತ್ತೇ ತುರುವೇಕೆರೆಯ ಜನ ಅವನಿಗೆ ಮನೆದಾರಿ ತೋರಿಸಿರುತ್ತಿದ್ದರು.

ಅಪ್ಪಿತಪ್ಪಿಯೂ ತುರುವೇಕೆರೆಯಲ್ಲಿ ತಾನು ಕಾಣಿಸಿಕೊಂಡರೆ ಜನ ಏನೇನು ತಗೊಂಡು ಹೊಡೀಬಹುದು ಎಂಬುದರ ಬಗ್ಗೆ ಸ್ವತಃ ಜಗ್ಗೇಶ್‌ಗೆ ಚೆನ್ನಾಗಿ ಗೊತ್ತಿದೆ. ಆ ಕಾರಣಕ್ಕಾಗಿಯೇ ಈ ಬಾರಿಯ ಉಪಚುನಾವಣೆಯಲ್ಲಿ ತಾನೂ ಸ್ಪರ್ಧಿಸುತ್ತಿಲ್ಲ, ತನ್ನ ಪತ್ನಿಯನ್ನೂ ನಿಲ್ಲಿಸುತ್ತಿಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವ ಮಾತು ದೂರ ಉಳಿಯಿತು. ಆತ ಬಿಜೆಪಿಯಿಂದ ಸ್ಪರ್ಧಿಸುವ ಅಭ್ಯರ್ಥಿ ಪರವಾಗಿ ಮತ ಕೇಳುವುದಕ್ಕೂ ಬರುವ ಪರಿಸ್ಥಿತಿಯಲ್ಲಿಲ್ಲ. ಯಾರದ್ದೋ ದುಡ್ಡಿನಲ್ಲಿ ಎಲ್ಲಮ್ಮ ಜಾತ್ರೆ ಮಾಡಿಕೊಂಡಿರೋದೊಂದೇ ಅವನಿಗುಳಿದಿರುವ ದಾರಿ.


ಸದ್ಯಕ್ಕೆ ಡಿಸೆಂಬರ್ 27ಕ್ಕೆ ಉಪಚುನಾವಣೆ ನಿಗದಿಯಾಗಿದೆ. ಜೆಡಿಎಸ್‌ನಿಂದ ಎಂ.ಟಿ.ಕೃಷ್ಣಪ್ಪ ಬಿಜೆಪಿಯಿಂದ ಎಂ.ಡಿ.ಲಕ್ಷ್ಮಿನಾರಾಯಣ ಮತ್ತು ಕಾಂಗ್ರೆಸ್‌ನಿಂದ ಎಚ್.ಬಿ.ನಂಜೇಗೌಡ (ಮೂರ್ತಿ) ಕಣದಲ್ಲಿದ್ದಾರೆ. ಮೂವರೂ ಮಾಜಿ ಶಾಸಕರೆ.

ಕಾಂಗ್ರೆಸ್‌ಗೆ ಜಗ್ಗೇಶನ ಆಗಮನದಿಂದ ತುಂಬಾ ವರ್ಷಗಳಿಂದ ಪಕ್ಷದಲ್ಲಿದ್ದು ದುಡಿಯುತ್ತಿದ್ದ, ತುಸು ಪರವಾಗಿಲ್ಲ ಎನ್ನಬಹುದಾದ ಮಾಜಿ ಶಾಸಕ ಎಸ್.ರುದ್ರಪ್ಪ, ಕೆ.ಸಿದ್ದೇಗೌಡ, ಕೆ.ರಾಜಣ್ಣ ಮುಂತಾದ ಜನರೆಲ್ಲಾ ಚೆಲ್ಲಾಪಿಲ್ಲಿಯಾಗಿ ಹೋಗಿದ್ದರು. ಇವರ ನಿರ್ಗಮನದಿಂದ ಸಂತೋಷಗೊಂಡಿದ್ದ ಜಗ್ಗೇಶ್ ಕೂಡ ತನ್ನ ಸ್ಥಾನವನ್ನು ಭದ್ರ ಮಾಡಿಕೊಂಡಿದ್ದ. ಈಗ ನೋಡಿದರೆ ತಾನೂ ಎಸ್ಕೇಪ್ ಆಗಿಹೋಗಿದ್ದಾನೆ. ಇದೂ ಒಂದು ರೀತಿಯಲ್ಲಿ ಕಾಂಗ್ರೆಸ್‌ಗೆ ಒಳ್ಳೆಯದೆ. ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಮೂರ್ತಿ ಜಗ್ಗೇಶ್ ಆಗಮನದಿಂದ ಅಸಮಾಧಾನಗೊಂಡಿದ್ದ ಎಲ್ಲರನ್ನೂ ಮತ್ತೆ ಗುಡ್ಡೆ ಹಾಕಿ ಪಕ್ಷ ಸಂಘಟನೆ ಮಾಡಿದ್ದಾರೆ.


ನಂಜೇಗೌಡ (ಮೂರ್ತಿ) 1995ರ ಅವಧಿಯಲ್ಲಿ ಜನತಾದಳ ಶಾಸಕರಾಗಿದ್ದು ಆಗಿನ ಮೈಸೂರು ಮಿನರಲ್ಸ್‌ನ ಅಧ್ಯಕ್ಷರಾಗಿದ್ದರು. ಶಾಸಕರಾಗುವ ಮೊದಲು ಎರಡು ಬಾರಿ ಸೋತಿದ್ದ ಅವರು ದೇವೇಗೌಡರ ಸಾಕುಮಗನೆಂಬಂತೆ ಬಿಂಬಿತವಾಗಿದ್ದರು. ರಾಜಕಾರಣ ಕಂಡ ಸ್ಥಿತ್ಯಂತರಗಳಿಂದ 'ಅಪ್ಪಾಜಿ'ಯನ್ನು ಮರೆತು ತಮ್ಮ ದಾರಿ ತಾವು ನೋಡಿಕೊಂಡರು. ಅಧಿಕಾರ ಇರಲಿ ಇಲ್ಲದಿರಲಿ, ಎಲ್ಲರೊಂದಿಗೂ ಸರಳವಾಗಿ, ನೇರವಾಗಿ ಮಾತನಾಡುತ್ತಾ ಜನರೊಂದಿಗೆ ಉತ್ತಮ ಸಂಬಂಧಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಒಂದು ಹಂತದಲ್ಲಿ ನಿಸ್ತೇಜವಾದಂತೆ ಕಾಣುತ್ತಿದ್ದ ಕ್ಷೇತ್ರದ ಕಾಂಗ್ರೆಸ್‌ಗೆ ಇಷ್ಟೊಂದು ಕಡಿಮೆ ಅವಧಿಯಲ್ಲಿ ಮರುಜೀವ ತುಂಬಿರುವುದು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಂತಿದೆ.



ಕೃಷ್ಣಪ್ಪ



ಲಕ್ಷ್ಮೀನಾರಾಯಣ



ನಂಜೇಗೌಡ

ಇನ್ನು ಜೆಡಿಎಸ್‌ನ ಅಭ್ಯರ್ಥಿ ಎಂ.ಟಿ.ಕೃಷ್ಣಪ್ಪ ಅವರು ತಮ್ಮ ಅಧಿಕಾರಾವಧಿಯಲ್ಲಿ ತಾಲ್ಲೂಕಿಗೆ ಸಾಕಷ್ಟು ಕೆಲಸ ಮಾಡಿದ್ದಾರಾದರೂ ಅವರಲ್ಲಿ ಮನೆ ಮಾಡಿರುವ ದರ್ಪ ಮಾತ್ರ ಕಡಿಮೆಯಾಗಿಲ್ಲ, ವಾಸ್ತವದಲ್ಲಿ ಈ ಗತ್ತುಗಾರಿಕೆಯಿಂದಾಗಿಯೇ ಹತ್ತಾರು ಪ್ರಮುಖರು ಅವರಿಂದ ದೂರವಾಗಿದ್ದಾರೆ. 'ತಮ್ಮನ್ನು ತಾತ್ಸಾರ ಮಾಡಲಾಗುತ್ತಿದೆ' ಎಂದು ಇತ್ತೀಚೆಗೆ ಕೆಲವು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರು ನೇರವಾಗಿ ಕೃಷ್ಣಪ್ಪ ಅವರ ಮೇಲೆ ಹರಿಹಾಯ್ದಿರುವುದು ಪಕ್ಷದೊಳಗೇ ಅವರ ವರ್ಚಸ್ಸು ಕುಂದುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇಂಥವರೆಲ್ಲಾ ಒಳಗೊಳಗೇ ಎಚ್.ಬಿ.ನಂಜೇಗೌಡರಿಗೆ ಬೆಂಬಲಿಸುತ್ತಾ ಕೃಷ್ಣಪ್ಪನಿಗೆ ಕೈಕೊಡುವುದಕ್ಕೆ ಸ್ಕೆಚ್ ಹಾಕಿದ್ದಾರೆ. ಹಾಗಾಗಿ, ಇಲ್ಲಿಯತನಕ ಕೃಷ್ಣಪ್ಪನ ಓಟ್ ಬ್ಯಾಂಕ್ ಎಂದೇ ಪರಿಗಣಿತವಾಗಿದ್ದ ದಬ್ಬೇಘಟ್ಟ, ಮಾಯಸಂದ್ರ ಹೋಬಳಿಗಳು ನಂಜೇಗೌಡರ ಓಟ್ ಬ್ಯಾಂಕಾಗಿ ಪರಿವರ್ತನೆಗೊಳ್ಳುತ್ತಿವೆ.

ಕೃಷ್ಣಪ್ಪನಿಗೆ ಇನ್ನೊಂದು ಸಮಸ್ಯೆಯಿದೆ. ಲಿಂಗಾಯತರು ಆತನ ಬೆಂಬಲಕ್ಕೆ ನಿಲ್ಲಲಾರರು. ಅಲ್ಲದೇ ಈ ಹಿಂದೆ ಸಾಲುಸಾಲಾಗಿ ಕೃಷ್ಣಪ್ಪ ಬೆನ್ನಿಗೆ ನಿಂತಿದ್ದ ಕುರುಬರು, ಗೊಲ್ಲರು ಸಿದ್ಧರಾಮಯ್ಯನ ಪ್ರಭಾವದಿಂದ ಜೆಡಿಎಸ್ ಆಫೀಸಿನ ಹತ್ತಿರವೂ ಸುಳಿಯುವುದಿಲ್ಲ. ಮೊನ್ನೆ ಸೋಮವಾರ ಕುರುಬ ಲೀಡರುಗಳಾದ ನಿಂಗಣ್ಣ, ನಾಗೇಶ್, ರೇವಣ್ಣ ಮುಂತಾದವರು ಸಿದ್ಧರಾಮಯ್ಯನವರನ್ನು ಭೇಟಿಯಾದಾಗ "ಈ ಬಾರಿ ನಾನು ಯಾರ ಪರವಾಗಿಯೂ ಮಾತನಾಡುವುದಿಲ್ಲ, ನಿಮಗೆ ಸರಿ ಎನಿಸಿದವರನ್ನು ಆಯ್ಕೆ ಮಾಡಿ" ಎಂದಷ್ಟೇ ಹೇಳಿದರಾದರೂ ನಂಜೇಗೌಡರ ಬಗ್ಗೆ ಸಾಫ್ಟ್ ಆಗಿ ಮಾತನಾಡಿರುವುದು ಕುರುಬರಿಗೆ ಒಂದು ಸೂಚನೆಯಂತಿದೆ. ಇದು ಕೃಷ್ಣಪ್ಪನಿಗೆ ಹಾನಿಕಾರಕವೆ.

ಇನ್ನು ಬಿಜೆಪಿಯ ಅಭ್ಯರ್ಥಿ ಎಂ.ಡಿ. ಲಕ್ಷ್ಮಿನಾರಾಯಣ ದೇವಾಂಗ ಜನಾಂಗಕ್ಕೆ ಸೇರಿದವರು. ಸಂಖ್ಯಾತ್ಮಕವಾಗಿ ನೋಡಿದರೆ ದೇವಾಂಗರದ್ದು ದೊಡ್ಡ ಸಮುದಾಯವೇನಲ್ಲ, ಹಾಗಾಗಿ ಜಾತಿಬಲದಿಂದ ಗೆಲ್ಲುವುದು ಕನಸಿನ ಮಾತು. 1999ರ ಚುನಾವಣೆಯಲ್ಲಿ ಲಿಂಗಾಯತರು ಸಾರಾಸಗಟಾಗಿ ಬಿಜೆಪಿಗೆ ಬೆಂಬಲಿಸಿದ್ದರಿಂದ ಅವರು ಗೆದ್ದಿದ್ದರು. ಆದರೆ, ಶಾಸಕನಾದ ನಂತರ ತನ್ನನ್ನು ಗೆಲ್ಲಿಸಿದ ಜನರ ಕಡೆ ಒಂದಿಷ್ಟು ಗಮನ ಕೊಡುವುದನ್ನು ಬಿಟ್ಟು ತನ್ನ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿಯೇ ಸಂಪೂರ್ಣವಾಗಿ ಮುಳುಗಿಹೋಗಿದ್ದರು. ಈ ಬಿಸಿನೆಸ್‌ನಿಂದ ತಾವೇನೋ ದುಂಡಗಾದರು. ಆದರೆ, ಅವರನ್ನು ಗೆಲ್ಲಿಸಿದ ಜನ ಮಾತ್ರ ಎಲ್ಲಿದ್ದರೋ ಅಲ್ಲೇ ಇದ್ದಾರೆ. ಇದು ವಾಸ್ತವದಲ್ಲಿ ಜನರಲ್ಲಿ ಲಕ್ಷ್ಮಿನಾರಾಯಣ ಬಗ್ಗೆ ಸಿಟ್ಟು ಬರುವುದಕ್ಕೆ ಪ್ರಧಾನ ಕಾರಣ.

ಇನ್ನೊಂದೆಡೆಗೆ ಲಿಂಗಾಯತರು ತುರುವೆಕೆರೆ ಕ್ಷೇತ್ರದಲ್ಲಿ ಪ್ರಬಲರಾಗಿದ್ದಾರೆ. ಇಲ್ಲಿ ತಮ್ಮನ್ನು ಪ್ರತಿನಿಧಿಸುವುದಕ್ಕೆ ಯಾವೊಬ್ಬ ಲಿಂಗಾಯತ ಲಿದ್ದರೂ ಬಿಜೆಪಿಗೆ ಸಿಗಲಿಲ್ಲವೇ ಎಂಬ ಪ್ರಶ್ನೆ ಆ ಲಿಂಗಾಯತರನ್ನು ಕಾಡುತ್ತಿರುವ ಪ್ರಶ್ನೆ. ಅಸಲಿಗೆ ಲಿಂಗಾಯತರಲ್ಲಿ ಸಿದ್ದಬಸಪ್ಪ, ಶಾಂತಕುಮಾರ್, ಚೆನ್ನಬಸಪ್ಪ ಡಿ.ಬಸವರಾಜು, ಲಾಯರ್ ಡಿ.ಟಿ.ರಾಜಶೇಖರ್ ಮುಂತಾದ ಜನಮನ್ನಣೆಯಿರುವ ಲೀಡರುಗಳಿದ್ದಾರೆ. ಅವರೆಲ್ಲರೂ ಬಹಳಷ್ಟು ಕಾಲದಿಂದ ಬಿಜೆಪಿಯಲ್ಲಿ ಕೆಲಸ ಮಾಡಿದ್ದಾರೆ. ಅಂತವರಲ್ಲಿ ಯಾರನ್ನಾದರೂ ಕಣಕ್ಕಿಳಿಸಿದ್ದರೆ ಲಿಂಗಾಯತರ ಎಲ್ಲಾ ಮತಗಳೂ ಬಿಜೆಪಿ ಪಾಲಾಗುತ್ತಿದ್ದವು. ಅದನ್ನು ಬಿಟ್ಟು ಸಂಖ್ಯಾಬಲದಲ್ಲಿ ತೀರಾ ದುರ್ಬಲವಾಗಿರುವ ದೇವಾಂಗ ಸಮುದಾಯದ ಲಕ್ಷ್ಮೀನಾರಾಯಣರನ್ನು ಕಣಕ್ಕಿಳಿಸಿರುವುದರಿಂದ ಲಿಂಗಾಯತರ ಓಟುಗಳು ಬೀಳುವುದು ಕಷ್ಟವಾಗಿದೆ. ದಿವಂಗತ ರಾಮಕೃಷ್ಣಯ್ಯನವರ ನಂತರದಲ್ಲಿ ಈ ಭಾಗದ ಲಿಂಗಾಯತರ ವಿಶ್ವಾಸ ಗಳಿಸಿಕೊಂಡಿರುವ ಎಚ್.ಟಿ. ನಂಜೇಗೌಡರನ್ನು ಲಿಂಗಾಯತ ನಾಯಕರೆಲ್ಲ ಬೆಂಬಲಿಸುವುದು ನಿಚ್ಚಳವಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿಯ ಬಗ್ಗೆ ಜನರಲ್ಲಿ ತಾತ್ಸಾರ ಮೂಡುವುದಕ್ಕೆ ಪ್ರಧಾನ ಕಾರಣ ಎಂದರೆ ಜನಪ್ರತಿನಿಧಿಗಳನ್ನು ಆ ಪಕ್ಷವು ತರಕಾರಿ ಖರೀದಿಸಿದಂತೆ ಖರೀದಿಸುತ್ತಿರುವುದು; ನಾಚಿಕೆ, ಮಾನ, ಮರ್ಯಾದೆಗಳನ್ನು ಬಿಟ್ಟು ಜಗ್ಗೇಶ್‌ನಂಥವರು ತಮ್ಮನ್ನು ತಾವೇ ಮಾರಿಕೊಳ್ಳುತ್ತಿರುವುದು. ಜಗ್ಗೇಶ್‌ಗೆ ಮತ್ತು ಬಿಜೆಪಿಗೆ ತಕ್ಕ ಪಾಠ ಕಲಿಸುವುದಕ್ಕೆ ಜನರಿಗಿರುವ ಒಂದೇ ಅಸ್ತ್ರ ಎಂದರೆ ಈ ಉಪಚುನಾವಣೆ.

ಸಾರಾಂಶೀಕರಿಸಿ ಹೇಳುವುದಾದರೆ, ಕಡಿಮೆ ಸಂಖ್ಯಾಬಲವಿರುವ ಗೊಲ್ಲರು, ತಿಗಳರು, ಕುರುಬರು ಮತ್ತು ಮುಸ್ಲಿಮರು ಈ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಲಿದ್ದಾರೆ. ತುರುವೇಕೆರೆಯಲ್ಲಿ ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆಯಿದ್ದಂತೆ ಕಾಣುತ್ತಿದೆಯಾದರೂ ಕಾಂಗ್ರೆಸ್‌ನ ನಂಜೇಗೌಡ ತಮ್ಮ ಶಾಸಕತ್ವದ ಎರಡನೇ ಇನ್ನಿಂಗ್ಸ್ ಪ್ರಾರಂಭಿಸುವುದಕ್ಕೆ ಅನುಕೂಲಕರವಾದ ವಾತಾವರಣವೇ ಜಾಸ್ತಿಯಿದೆ. ಉಳಿದಂತೆ ಬಿಜೆಪಿಯ ಲಕ್ಷ್ಮಿನಾರಾಯಣ ಮಣ್ಣು ತಿನ್ನುವ ದಾರಿಯಲ್ಲಿದ್ದರೆ, ಜೆಡಿಎಸ್‌ನ ಕೃಷ್ಣಪ್ಪ ಯಥಾಸ್ಥಿತಿ ಕಾಪಾಡಿಕೊಳ್ಳುತ್ತಾರೆ.

■ ವರದಿಗಾರ


ದೊಡ್ಡಬಳ್ಳಾಪುರ: ಪಕ್ಷಾಂತರಿಗಳದ್ದೇ ಕಾರುಬಾರು

ಇಲ್ಲಿ ಬಿಜೆಪಿ ಅಭ್ಯರ್ಥಿ ಆಗಿರುವ ಜಿ. ನರಸಿಂಹಸ್ವಾಮಿ ಅಂತಹ ಲೋಕನಾಯಕನೇನಲ್ಲ, ಹೇಳಿಕೊಳ್ಳುವಂತ ದೊಡ್ಡ ಗುಣಗಳಾಗಲಿ, ಜನಸೇವೆ ಮಾಡಿದ ಸಾಕ್ಷಿಗಳಾಗಲಿ ಇಲ್ಲ. ಆದರೂ ಸದ್ಯಕ್ಕೆ ಮುಂಬರುವ ಉಪಚುನಾವಣೆಯಲ್ಲಿ ಮೇಲ್ನೋಟಕ್ಕೆ ನರಸಿಂಹಸ್ವಾಮಿ ಮೇಲುಗೈ ಸಾಧಿಸಿರುವುದು ಕಾಣುತ್ತಿದೆ.




ನರಸಿಂಹಸ್ವಾಮಿ

ಬಳ್ಳಾರಿ ಗಣಿ ದುಡ್ಡು ಹಾಗೂ ಈ ಎಂಜಲಿನ ಸುತ್ತಾ ಹಾರಾಡುತ್ತಿರುವ ಪಕ್ಷಾಂತರಿಗಳೆಂಬ ಕಾಗೆಗಳ ಗದ್ದಲವೇ ಇದಕ್ಕೆ ಮುಖ್ಯ ಕಾರಣ. ದೊಡ್ಡಬಳ್ಳಾಪುರ ಮೊದಲಿನಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. ಆರ್.ಎಲ್. ಜಾಲಪ್ಪನ ಕಪಿಮುಷ್ಠಿಯಲ್ಲಿ ಸಿಕ್ಕು ನರಳಿರುವ ಕ್ಷೇತ್ರ. ಒಂದು ಸಾರಿ ಬಿಜೆಪಿಯಿಂದ ಗಂಟಿಗಾನಹಳ್ಳಿ ಕೃಷ್ಣಪ್ಪ ಇಲ್ಲಿಂದ ಗೆದ್ದಿದ್ದರೆಂಬುದನ್ನು ಬಿಟ್ಟರೆ ಬಿಜೆಪಿಗಿಲ್ಲಿ ನೆಲೆಯೇ ಇರಲಿಲ್ಲ. ಕಾಂಗ್ರೆಸ್‌ನಿಂದ ಜಾಲಪ್ಪ ಅವರ ಶಿಷ್ಯ ಆರ್.ಜಿ. ವೆಂಕಟಾಚಲಯ್ಯ ಆಮೇಲೆ ಜಾಲಪ್ಪನ ಮಗ ನರಸಿಂಹಸ್ವಾಮಿ ಇಲ್ಲಿ ಗೆದ್ದು ಶಾಸಕರಾಗಿದ್ದರು. ನಂತರ ಜಾಲಪ್ಪ ಚಿಕ್ಕಬಳ್ಳಾಪುರದಿಂದ ಸಂಸತ್‌ಗೆ ಸ್ಪರ್ಧಿಸಿ ಗೆದ್ದ ಮೇಲೆ ರಾಜಕಾರಣಿಯಾದ ನರಸಿಂಹಸ್ವಾಮಿ ಮೊದಲು ಒಂದು ಸಾರಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿ ನಂತರ 2004 ರಲ್ಲಿ ಶಾಸಕನೂ ಆಗಿದ್ದ. ಈಗ ಅದೇ ಕಾಂಗ್ರೆಸ್‌ನಿಂದ ಗೆದ್ದರೂ ಹಾದುಹಗಲೇ ಬಿಜೆಪಿಗಳ ಲಂಚ ತಿಂದು ಕಾಂಗ್ರೆಸ್‌ಗೆ ರಾಜೀನಾಮೆ ಕೊಟ್ಟು ಈಗ ಮತ್ತೆ ಬಿಜೆಪಿ ಕ್ಯಾಂಡಿಡೇಟಾಗಿ ಜನರಿಗೆ ತನ್ನ ಭ್ರಷ್ಟ ಮುಖ ತೋರಿಸುತ್ತಿದ್ದಾನೆ.



ವೆಂಕಟಾಚಲಯ್ಯ

ಕಾಂಗ್ರೆಸ್‌ಗಿದು ನಿಜಕ್ಕೂ ಇಕ್ಕಟ್ಟಿನ ಸ್ಥಿತಿ. ಡಿ.ಕೆ. ಶಿವಕುಮಾರ್ ಹಾಗೂ ದೇಶಪಾಂಡೆ ರಾಜ್ಯ ಕಾಂಗ್ರೆಸ್ ನೇತೃತ್ವ ವಹಿಸಿಕೊಂಡಾಗ ಸಮಾವೇಶ ನಡೆಸಿದ್ದು ದೊಡ್ಡಬಳ್ಳಾಪುರದಲ್ಲಿ. ಅವತ್ತು ನಲವತ್ತು ಸಾವಿರದಷ್ಟು ಜನ ಸೇರಿದ್ದರಾದರೂ ಇಲ್ಲಿ ಕಾಂಗ್ರೆ ಸ್ಥಿತಿ ಚೆನ್ನಾಗಿಲ್ಲ. ನರಸಿಂಹಸ್ವಾಮಿ ಬಿಜೆಪಿಗಳ ಕೊಳಗೇರಿ ನಿಗಮಕ್ಕೆ ಸೇರಿಕೊಂಡ ತಕ್ಷಣ ಕ್ಷೇತ್ರದ ಪ್ರಮುಖ ಕಾಂಗ್ರೆ ನಾಯಕರಾದ ತಳಗವಾರ ಲಕ್ಷ್ಮೀನಾರಾಯಣ, ಕಂಟನಕುಂಟೆ ಕೃಷ್ಣಮೂರ್ತಿ, ಮತ್ತಿತರರು ಬಿಜೆಪಿ ಸೇರಿದ್ದಾರೆ. ಇನ್ನು ಬಳ್ಳಾಪುರ ಟೌನಿನಲ್ಲಿ ಬಿಜೆಪಿಗೆ ಮೊದಲಿನಿಂದಲೂ ಒಂದಿಷ್ಟು ನೆಲೆ ಇದೆ. ಹಳೆ ಬಿಜೆಪಿ ಹನುಮಂತರಾಯಪ್ಪ ಟೌನಿನ ಮುಸ್ಲಿಮರನ್ನು ಬಿಡದೆ ಬಿಜೆಪಿ ಹಿಡಿತಕ್ಕೆ ತರುತ್ತಿದ್ದಾನೆ. ತೂಬಗೆರೆ ಹೋಬಳಿ ಪೂರಾ ಈಗ ದೇವನಹಳ್ಳಿ ಕ್ಷೇತ್ರಕ್ಕೆ ವರ್ಗಾ ಆಗಿರುವುದೊಂದೇ ನರಸಿಂಹಸ್ವಾಮಿಗಾಗಿರುವ ಅನಾನುಕೂಲ ಎಂದು ಹೇಳಬಹುದು. ಇಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ಆರ್.ಜಿ. ವೆಂಕಟಾಚಲಯ್ಯ ಎಲ್ಲಾ ಅರ್ಥದಲ್ಲೂ ಒಬ್ಬ ಮಾಸ್ ಲೀಡರ್. ಜನಾನುರಾಗಿ. ಆರ್‌ಜಿಗೆ ಬೆಳವಂಗಲ, ಸಾಸಲು ಕಡೆ ಸಾಲಿಡ್ ಜನಬೆಂಬಲ ಇದೆ. ಜೊತೆಗೆ ದೊಡ್ಡತುಮಕೂರಿನ ರಂಗರಾಜು, ಸಾಸಲು ಜಿಲ್ಲಾ ಪಂಚಾಯಿತಿ ಮಾಜಿ ಮೆಂಬರ್ ಲಕ್ಷ್ಮೀಪತಿ ಮುಂತಾದ ಶಕ್ತಿವಂತರು ಆರ್‌ಜಿ ಬೆನ್ನಿಗಿದ್ದಾರೆ. ಜೊತೆಗೊಬ್ಬ ಚೀರಾಟಗಾರ ಮಾಚಗೊಂಡನಹಳ್ಳಿ ಕೃಷ್ಣಪ್ಪನೆಂಬ ಅವಿವೇಕಿಯೂ ಕಾಂಗ್ರೆನಲ್ಲಿ ಓಡಾಡುತ್ತಿದ್ದಾನೆ. ಆರ್‌ಜಿ ಜಾಲಪ್ಪನ ನೆರಳಿನಲ್ಲೇ ಬೆಳೆದು ರಾಜಕೀಯ ಮಾಡಿದರೂ ಸಹ ಕ್ಷೇತ್ರದಲ್ಲಿ ಅವರಿಗೆ ಅತ್ಯುತ್ತಮ ಹೆಸರಿದೆ. ಒಮ್ಮೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಇನ್ನೊಮ್ಮೆ ಶಾಸಕರಾಗಿ ಆಯ್ಕೆಯಾಗಿದ್ದ ಆರ್‌ಜಿ ಹಳೆ ಮೈಸೂರಿನ ಅತ್ಯುತ್ತಮ ರಾಜಕಾರಣಿಗಳಲ್ಲಿ ಒಬ್ಬರು. ಆದರೆ ಬಿಜೆಪಿಗಳ ದುಡ್ಡಿನ ಬಲ. ವಂಚಕ ರಾಜಕೀಯದೆದುರು ಆರ್‌ಜಿ ಸೆಣಸಬೇಕೆಂದರೆ ಅದಕ್ಕೆ ಭಾರಿ ಶಕ್ತಿ ಬೇಕು.




ನರಸಿಂಹಯ್ಯ

ಜೆಡಿಎಸ್‌ನ ಅಭ್ಯರ್ಥಿ ಮುನೇಗೌಡ ಪಕ್ಕದ ದೇವನಹಳ್ಳಿ ತಾಲ್ಲೂಕಿನವರೆಂಬುದೇ ಮೊಟ್ಟಮೊದಲ ಮೈನಸ್ ಪಾಯಿಂಟ್. ಇಲ್ಲಿ ತೂಬಗೆರೆ ನರಸಿಂಹಯ್ಯನೆಂಬ ದೇವೇಗೌಡರ ಹಳೆ ಹುಲಿ ಇದ್ದರಾದರೂ ಆತ ಯಾಕೊ ಅಖಾಡಕ್ಕಿಳಿದಿಲ್ಲ.

ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್‌ಗೆ ಮೋಸವಾದರೆ ಅದಕ್ಕೆ ಕಾಂಗ್ರೆ ಸಂಸದ ಜಾಲಪ್ಪನೇ ನೇರ ಹೊಣೆ. ತಾನು ಕಾಂಗ್ರೆಸ್‌ನಲ್ಲಿದ್ದುಕೊಂಡೆ ಮಗ ನರಸಿಂಹಸ್ವಾಮಿ ಬಿಜೆಪಿಗೆ ಪಕ್ಷಾಂತರ ಮಾಡಲು ಗ್ರೀನ್‌ಸಿಗ್ನಲ್ ಕೊಟ್ಟಿರುವ ಜಾಲಪ್ಪ ಸ್ವಾರ್ಥ ರಾಜಕಾರಣಿಗೆ ಜೀವಂತ ಉದಾಹರಣೆಯಾಗಿದ್ದಾರೆ.

ಒಬ್ಬ ಮಗ ನರಸಿಂಹಸ್ವಾಮಿಗೆ ಶಾಸಕತ್ವ, ಇನ್ನೊಬ್ಬ ಮಗ ರಾಜೇಂದ್ರನಿಗೆ ಪುರಸಭೆ ಅಧ್ಯಕ್ಷತೆ, ಮತ್ತೊಬ್ಬ ಪುತ್ರ ನಾಗೇಂದ್ರನಿಗೆ ಇಂಜಿನಿಯರಿಂಗ್ ಕಾಲೇಜು ಮಾಡಿಕೊಟ್ಟಿರುವ ಜಾಲಪ್ಪನ ದುರಾಶೆಗೆ ಕೊನೆಯೇ ಇದ್ದಂತಿಲ್ಲ. ದೊಡ್ಡಬಳ್ಳಾಪುರ ಕ್ಷೇತ್ರವನ್ನೇ ತನ್ನಪ್ಪನ ಆಸ್ತಿಯೆಂಬಂತೆ ಅನುಭವಿಸಿಕೊಂಡು ಬಂದಿರುವ ಜಾಲಪ್ಪ ಮತ್ತವರ ಪಕ್ಷಾಂತರಿ ಪುತ್ರರಿಗೆ ಈ ಬಾರಿ ಜನ ಪಾಠ ಕಲಿಸಿದರೆ ಉತ್ತಮ. ■

ಆರಭಾವಿ: ಬಾಲಚಂದ್ರನ ಬಾನಗಡಿಗಳು



ಪ್ರಾಯಶಃ ಬಾಲಚಂದ್ರನಿಗೆ ತನ್ನ ವಿರುದ್ಧ ಜನ ಭುಸುಗುಟ್ಟುತ್ತಿರುವುದು ಮನವರಿಕೆಯಾಗಿರಬೇಕು. ಅದಕ್ಕಾಗಿಯೇ ರೈತರ ಮನ ಗೆಲ್ಲಲು ತನ್ನ ಘಟಪ್ರಭಾ ಷುಗರ್ಸ್ ಅನ್ನು ಮತ್ತೆ ಪ್ರಾರಂಭಿಸಿದ್ದಾನೆ. ಶಾಸಕನಾಗಿ, ಮಂತ್ರಿಯಾಗಿ ಈ ಬಾಲಚಂದ್ರ ಜನರಿಗಾಗಿ ಕಡಿದು ಗುಡ್ಡೆ ಹಾಕಿದ್ದೂ ಅಷ್ಟರಲ್ಲೇ ಇದೆ. ಕ್ಷೇತ್ರದಲ್ಲಿ ಒಮ್ಮೆ ಓಡಾಡಿದರೆ ಸಾಕು ಕೊಳಚೆ ಪ್ರದೇಶದಲ್ಲಿ ಓಡಾಡಿದಂಥ ಅನುಭವವಾಗುತ್ತದೆ. ಕ್ಷೇತ್ರವನ್ನು ಈ ಪಾಟಿ ಉದ್ಧಾರ ಮಾಡಿದ್ದಕ್ಕೆ ಇವನಿಗೆ ಓಟು ಕೊಡಬೇಕೆ?

ಬಿಜೆಪಿಯ ಮಂಗಾಟದ ಪರಿಣಾಮವಾಗಿ ಚುನಾವಣೆ ಎದುರಿಸುತ್ತಿರುವ ಕ್ಷೇತ್ರಗಳಲ್ಲಿ ಆರಭಾವಿ ದ ಒಂದು. ಚುನಾವಣೆಯ ದಿನ ಹತ್ತಿರವಾಗು ತೆಯೇ ಆರಭಾವಿ ಯುದ್ಧಭೂಮಿಯಂತೆ ರಂಗೇರುತ್ತಿದೆ. ಪಿಯಿಂದ ಬಾಲಚಂದ್ರ ಜಾರಕಿಹೊಳಿ, ಕಾಂಗ್ರೆಸ್‌ನಿಂದ ಕರಾವ್ ಪಾಟೀಲ್ ಹಾಗೂ ಜೆಡಿಎಸ್‌ನಿಂದ ಂದ ದಳವಾಯಿ ಕಣದಲ್ಲಿದ್ದಾರೆ. ಈ ಚುನಾವಣೆಯಲ್ಲಿ ಬೇಕಿರುವುದು ವಿಶೇಷವಾಗಿ ಬಿಜೆಪಿಗೆ ತಿಷ್ಠೆಯ ಪ್ರಶ್ನೆಯಾಗಿದ್ದರಿಂದ ಈಗಾಗಲೇ ರೌಡಿ ಕಂ ಆರೋಗ್ಯ ಸಚಿವ ಶ್ರೀ ಮುಲುವಿನ ರೌಡಿಗಳು, ದುಡ್ಡು ಕ್ಷೇತ್ರ ತ ನುಸುಳಿಬಿಟ್ಟಿದೆ. ಪ್ರಜ್ಞಾವಂತರಾಗಿರುವ ಕದಾರರು ಈ ಚುನಾವಣೆಯಲ್ಲಿ ಚಲಾಯಿಸುವ ಮೊದಲು ಒಂದಿಷ್ಟು ಚಿಸಬೇಕಿದೆ. ಆದರಲ್ಲೂ ಬಿಜೆಪಿಯ ಚಂದ್ರ ಜಾರಕಿಹೊಳಿಗೆ ಮತ ನೀಡ ದುಕೊಂಡವರು ವಿಶೇಷವಾಗಿ ಯೋಚಿಸ ದೆ. ಇಷ್ಟು ದಿನ ಬಾಲಚಂದ್ರ ಕ್ಷೇತ್ರಕ್ಕಾಗಿ ಮಾಡಿದ್ದಾನೆ, ತನಗಾಗಿ ಏನೇನು ಕೊಂಡಿದ್ದಾನೆ ಎಂಬುದನ್ನು ಸೂಕ್ಷ್ಮವಾಗಿ ಲೋಚಿಸಬೇಕಿದೆ.



...ತಾ ಶ...



ಸತೀಶ್ ಜಾರಕಿಹೊಳಿ

ವಾಸ್ತವದಲ್ಲಿ ಈ ಉಪಚುನಾವಣೆ ಯುವುದಕ್ಕೆ ಬಾಲಚಂದ್ರನೇ ನೇರ ಕಾರಣ. ಕೆ ಬ್ರಹ್ಮಚಾರಿ', 'ಉಂಡು ಉಪವಾಸಿ' ಕ್ಷೇತ್ರದಾದ್ಯಂತ ಹೆಸರುವಾಸಿಯಾಗಿರುವ ದುಡ್ಡು, ಅಧಿಕಾರದಾಸೆಗೆ ಜನಸಾಮಾನ್ಯ ಬಲಿಕೊಡುತ್ತಿದ್ದಾನೆ.

ಕೆಲವು ವರ್ಷಗಳ ಹಿಂದೆ ಕೊಳಕು ಸಾರಾಯಿ ಸುವದನ್ನೆ ದಂಧೆ ಮಾಡಿಕೊಂಡಿದ್ದ ಬಾಲಚಂದ್ರ ಂತರದಲ್ಲಿ ಸಿವಿಲ್ ಕಂಟ್ರಾಕ್ಟರ್‌ಗಳನ್ನು ಬೆದರಿಸಿ 0ರಷ್ಟು ಕಮೀಷನ್ ಕೀಳುತ್ತಾ ಪರ್ಸೆಂಟೇಜ್ ಣನಾದ. ಮೊದಲು ಅಣ್ಣ ಸತೀಶ್ ಜಾರಕಿಹೊಳಿ ಕೀಯ ಪ್ರವೇಶಿಸಿ ವಿಧಾನಪರಿಷತ್ ಸದಸ್ಯನಾದ. ತಮ್ಮ ರಮೇಶ್ ಜಾರಕಿಹೊಳಿಯ ಸರದಿ. ಕೈಯಲ್ಲಿ ದುಡ್ಡು ಕುಣಿಯುತ್ತಿತ್ತು. ಬಗಲಲ್ಲಿ ರೌಡಿಗಳ ಸುತ್ತುತ್ತಿತ್ತು, ಸಹೋದರರು ರಾಜಕೀಯದಲ್ಲಿ ಬಿಟ್ಟಿದ್ದರು. ಇಂತಹ ಸಂದರ್ಭದಲ್ಲಿ ಬಾಲಚಂದ್ರ ರಾಜಕೀಯ ಪ್ರವೇಶಿಸಿಯೇ ಬಿಟ್ಟ. ಕೋ-ಜಾ ರದಲ್ಲಿ ಎಮ್ಮೆಲ್ಲೆಯಾಗಿ ಮಂತ್ರಿ ಪಟ್ಟಕ್ಕೂ ಏರಿಬಿಟ್ಟ. ದುಡ್ಡು ಎಂತಹ ಸಂಬಂಧವನ್ನೂ ಹಾಳು ಮಾಡಿಬಿಡು ಲ್ಲವೆ? ಬಾಲಚಂದ್ರ ಮತ್ತು ಸತೀಶ್ ಎಂಬ ಕಿಹೊಳಿ ಸಹೋದರರ ವಿಚಾರದಲ್ಲೂ ಅದು ಗಿತ್ತು, ಇವರಿಬ್ಬರ ನಡುವೆ ಹಣಕಾಸಿನ ವ್ಯವಹಾರದಲ್ಲಿ ವೇರ್ಪಟ್ಟು, ಚಿಕ್ಕಪ್ರಮಾಣದ ಯುದ್ಧವೇ ಭವಾಗಿಬಿಟ್ಟಿತು. ಅದೇ ಹೊತ್ತಿಗೆ ಬಾಲಚಂದ್ರ ಶರ್ಮಾ ಎಂಬ ಹುಡುಗಿಗೆ ತಗುಲಿಕೊಂಡು ಟ ಮಾಡಿಕೊಂಡ ಸುದ್ದಿಯನ್ನು 'ಲಂಕೇಶ್' ಕೂಡ ಸಿತು. ಕೈಲಾಗದವನು ಮೈ ಪರಚಿಕೊಂಡ ಎಂಬಂತೆ ಬೀದಿಪಾಲಾಗಿದ್ದ ಮರ್ಯಾದೆಯನ್ನು ಮುಚ್ಚ ಆ ಭಾಗದ ಎಲ್ಲಾ ಪತ್ರಿಕೆಗಳನ್ನು ಖರೀದಿಸಿ ಸಿದ್ದನು. ಓದದಂತೆ ಮಾಡಿದ್ದ.

ನಡೆಗೆ ಬಾಲಚಂದ್ರನಿಗೆ ಪ್ರಧಾನ ಆದಾಯವಿದ್ದುದು ಕೊಳಕು ಸಾರಾಯಿ ದಂಧೆಯಿಂದ. ಈ ದಂಧೆಯನ್ನು ಹೇಗಾದರೂ ಮಾಡಿ ನಿಲ್ಲಿಸಿ ಬಾಲಚಂದ್ರನಿಗೆ ಒಂದು ಬಲವಾದ ಪೆಟ್ಟುಕೊಡಬೇಕೆಂದು ಸತೀಶ್ ಕೂಡ ಹೊಂಚು ಹಾಕಿದ್ದ. ಅದೇ ಸಮಯದಲ್ಲಿ ಯಡ್ಡಿ ಸಾರಾಯಿ ನಿಷೇಧ ಮಾಡುವ ಘೋಷಣೆ ಮಾಡಿದ್ದಕ್ಕೆ ಸತೀಶ್ ತನ್ನ ಸಂಪೂರ್ಣ ಬೆಂಬಲ ಕೊಟ್ಟು ಅದು ಬೇಗನೇ ಕಾರ್ಯಗತವಾಗುವಂತೆ ಮಾಡಿದ. ಇತ್ತ ಬೆಂಗಳೂರಿನಲ್ಲಿ ಸಾರಾಯಿ ನಿಷೇಧದ ಆಜ್ಞೆ ಹೊರಬೀಳುತ್ತಿದ್ದಂತೆ ಅತ್ತ ಪೊಲೀಸರು ಬಾಲಚಂದ್ರನ ಸಾರಾಯಿ ಅಡ್ಡೆಗಳ ಮೇಲೆ ವ್ಯವಸ್ಥಿತವಾಗಿ ದಾಳಿ ಮಾಡುವಂತೆ ಖುದ್ದು ಸತೀಶನೇ ನೋಡಿಕೊಂಡ. ಅಲ್ಲಿಂದ ಶುರುವಾಯಿತು ನೋಡಿ ಬಾಲಚಂದ್ರನ ದಿವಾಳಿಕೋರತನ.


ಅದೂಅಲ್ಲದೇ ಘಟಪ್ರಭಾ ಷುಗರ್ಸ್ ಲಿಮಿಟೆಡ್ ಕೂಡ ಇವನದೇ ಆಡಳಿತದಲ್ಲಿತ್ತು. ಅದ್ಹೇಗೆ ಆಡಳಿತ ನಡೆಸಿದನೋ ಗೊತ್ತಿಲ್ಲ ಆ ಕಾರ್ಖಾನೆ ಬರೊಬ್ಬರಿ ನೂರೈವತ್ತು ಕೋಟಿ ಸಾಲವನ್ನು ಹೆಗಲಿಗೇರಿಸಿಕೊಂಡಿತ್ತು. ಹೇಗೂ ಮುಳುಗುತ್ತಿರುವ ಕಂಪನಿಯಾದ್ದರಿಂದ ಅದರ ಮೇಲೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಬೇರೆ ಬೇರೆ ಬ್ಯಾಂಕುಗಳಿಂದ ಮತ್ತೊಂದಿಷ್ಟು ಸಾಲ ಎತ್ತಿ ಎಲ್ಲಾ ಬ್ಯಾಂಕುಗಳಿಗೂ ಟೋಪಿ ಹಾಕುವುದಕ್ಕೆ ಬಾಲಚಂದ್ರ ಸ್ಕೆಚ್ ಹಾಕಿದ್ದ. ಈ ಮೂಲಕವಾದರೂ ಸಾರಾಯಿ ನಿಷೇಧದಿಂದ ಆಗಿರುವ ಹಾನಿಯನ್ನು ತುಂಬಿಕೊಳ್ಳುವುದು ಅವನ ಯೋಚನೆಯಾಗಿತ್ತು. ಆದರೆ ಸತೀಶ್ ಅದಕ್ಕೂ ಬಿಡಲಿಲ್ಲ. ರಾಜ್ಯಪಾಲರ ಆಡಳಿತಾವಧಿಯಲ್ಲಿ ನೋಲಿ ಎಂಬ ಕಮೀಷನರ್ ಒಬ್ಬನನ್ನು ನೇಮಿಸಲಾಯಿತು; ಅವರು ಘಟಪ್ರಭಾ ಷುಗರ್ಸ್‌ನ ಛೇರ್ಮನ್ ಬಾಲಚಂದ್ರನ ಮೇಲೆ ಸೆಕ್ಷನ್ 64ರ ಪ್ರಕಾರ ಫ್ಯಾಕ್ಟರಿ ಲಾಕ್ ಮಾಡಿ ಬಂಧಿಸಬೇಕೆಂಬ ವರದಿ ನೀಡಿದರು. ಇದೆಲ್ಲದರ ಹಿಂದೆ ಸತೀಶ್‌ನ ಕೈವಾಡ ಇರುವುದು ಖುದ್ದು ಬಾಲಚಂದ್ರನಿಗೆ ಗೊತ್ತಿರದ ವಿಚಾರವೇನಲ್ಲ.

ಬರುಬರುತ್ತಾ ಬಾಲಚಂದ್ರನಿಗೆ ಸತೀಶ್‌ನ ಕಾಟವನ್ನು ತಡೆದುಕೊಳ್ಳುವುದೇ ದುಸ್ತರವಾಗಿ ಹೋಯಿತು. ಸತೀಶ್ ಆಗಲೇ ಪ್ರಬಲವಾಗಿ ಬೆಳೆದುಬಿಟ್ಟಿದ್ದ. ಅವನನ್ನು ಎದುರು ಹಾಕಿಕೊಳ್ಳಬೇಕೆಂದರೆ ತನಗೂ ಹಣಬಲ, ರಾಜಕೀಯ ಬಲ ಮತ್ತು ತೋಳ್ಬಲವಿರುವ ಒಬ್ಬ ಗಾಡ್‌ಫಾದರ್ ಬೇಕಿತ್ತು, ಆವಾಗ ಕಾಣಿಸಿ ಕೊಂಡವನೇ ರೌಡಿ ಶ್ರೀರಾಮುಲು. ಪಕ್ಕಾ ಬೀದಿ ರೌಡಿಯಾದ ಶ್ರೀರಾಮುಲುನ ಹಿಂದೆ ರೌಡಿಗಳ ಹಿಂಡೇ ಇದೆ; ರೆಡ್ಡಿಗಳಂತಹ ದುಡ್ಡಿನ ಗಣಿಗಳೇ ಅವನ ಬೆಂಬಲಕ್ಕಿವೆ; ಅಲ್ಲದೇ ರಾಜಕೀಯದಲ್ಲೂ ಮಿಂಚುತ್ತಾ ಆರೋಗ್ಯ ಮಂತ್ರಿಗಿರಿ ಬೇರೆ ಸಿಕ್ಕಿದೆ. ಈತನೇ ಸರಿಯಾದ ವ್ಯಕ್ತಿ ಎಂದುಕೊಂಡ ಬಾಲಚಂದ್ರ ಶ್ರೀರಾಮುಲುನ ಕಾಲಿಗೆ ಬಿದ್ದಿದ್ದಾನೆ. ಶ್ರೀರಾಮುಲು ಕೂಡ ಇದನ್ನೇ ಬಯಸಿದ್ದ. ಆ ಭಾಗದಲ್ಲಿ ತನಗೊಬ್ಬ ಭಂಟ ಬೇಕಿದ್ದ. ತನ್ನದೇ ಜಾತಿಯ ಬಾಲಚಂದ್ರನೇ ಸಿಕ್ಕಿದ್ದು ಒಳ್ಳೆಯದೇ ಆಯಿತು. ಶ್ರೀರಾಮುಲು ತಡಮಾಡದೇ ಬಾಲಚಂದ್ರನಿಗೊಂದು ಖಾಕಿ ಚೆಡ್ಡಿ ತೊಡಿಸಿ ಸೀದಾ ಯಡ್ಡಿ ಅಂಗಳಕ್ಕೆ ತಂದು ನಿಲ್ಲಿಸಿಬಿಟ್ಟ.

ಶ್ರೀರಾಮುಲುನ ಕೃಪಾಕಟಾಕ್ಷದಿಂದ ಬಾಲಚಂದ್ರನಿಗೆ ಮಂತ್ರಿಗಿರಿ ಸಿಕ್ಕಿತು. ತನ್ನ ಮೇಲಿದ್ದ ಫ್ಯಾಕ್ಟರಿ ಕೇಸ್‌ನಿಂದ ಬಚಾವ್ ಆದ. ಈಗ ಮತ್ತೆ ಆರಭಾವಿ ಕ್ಷೇತ್ರದ ಜನರೆದುರು ಮುಗ್ಧನಂತೆ ಕೈಮುಗಿದುಕೊಂಡು ಮತಯಾಚಿಸಲು ಬಂದಿದ್ದಾನೆ. ಈತ ಏನು ಮಹಾ ಘನಂದಾರಿ ಕೆಲಸ ಮಾಡಿದ್ದಾನೆಂದು ಈತನಿಗೆ ಜನ ಓಟು ಹಾಕಬೇಕು?



ವಿವೇಕ್ ರಾವ್



ಅರವಿಂದ ದಳವಾಯಿ

ಶಾಸಕನಾಗಿ, ಮಂತ್ರಿಯಾಗಿ ಈತ ಜನರಿಗಾಗಿ ಕಡಿದು ಗುಡ್ಡೆ ಹಾಕಿದ್ದೂ ಅಷ್ಟರಲ್ಲೇ ಇದೆ. ಕ್ಷೇತ್ರದಲ್ಲಿ ಒಮ್ಮೆ ಓಡಾಡಿದರೆ ಸಾಕು ಕೊಳಚೆ ಪ್ರದೇಶದಲ್ಲಿ ಓಡಾಡಿದಂಥ ಅನುಭವವಾಗುತ್ತದೆ. ಕ್ಷೇತ್ರವನ್ನು ಈ ಪಾಟಿ ಉದ್ಧಾರ ಮಾಡಿದ್ದಕ್ಕೆ ಇವನಿಗೆ ಓಟು ಕೊಡಬೇಕೆ? ಘಟಪ್ರಭಾ ಕಾಲುವೆಯ ಅಭಿವೃದ್ಧಿಗಾಗಿ ಸರ್ಕಾರದಿಂದ 16 ಕೋಟಿ ರೂಪಾಯಿ ಮಂಜೂರಾಗಿತ್ತು, ಕಾಲುವೆಯಾದರೂ ಅಭಿವೃದ್ಧಿಯಾಗಿದ್ದಿದ್ದರೆ ನೂರಾರು ರೈತ ಕುಟುಂಬಗಳಾದರೂ ಉದ್ಧಾರವಾಗುತ್ತಿದ್ದವು. ಕಾಲುವೆಯ ಅಭಿವೃದ್ಧಿಗಾಗಿ ಬಂದ ಅಷ್ಟೂ ಹಣವನ್ನು ಈತ ಸಂಪೂರ್ಣವಾಗಿ ನುಂಗಿ ನೀರು ಕುಡಿದಿದ್ದಾನೆ. ಈ ಮಹತ್ಕಾರ್ಯಕ್ಕಾಗಿ ಈತನಿಗೆ ಓಟು ಕೊಡಬೇಕೆ?

ಈ ಕ್ಷೇತ್ರದಲ್ಲಿ ಶೇ.30ರಷ್ಟು ಜನ ಉಪ್ಪಾರ ಜನಾಂಗಕ್ಕೆ ಸೇರಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ತೀರಾ ಹಿಂದುಳಿದ ಸಮುದಾಯವದು. ಆ ಕಾರಣಕ್ಕಾಗಿಯೇ ಉಪ್ಪಾರರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಬೇಡಿಕೆಯಿಟ್ಟಿದ್ದರು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ ಆ ಬೇಡಿಕೆಗೆ ಅಂಗೀಕಾರ ದೊರೆಯುವುದಿತ್ತು, ಅದಕ್ಕೆ ಪ್ರಬಲ ವಿರೋಧ ಒಡ್ಡಿದವನು ಆಗ ಸಮಾಜ ಕಲ್ಯಾಣ ಇಲಾಖೆಯ ಸಚಿವನಾಗಿದ್ದ ಇದೇ ಬಾಲಚಂದ್ರ ಜಾರಕಿಹೊಳಿ. ತಮ್ಮ ಸಮುದಾಯದ ನ್ಯಾಯಬದ್ಧ ಹಕ್ಕನ್ನು ಕಿತ್ತುಕೊಂಡು ದ್ರೋಹ ಬಗೆದದ್ದಕ್ಕಾಗಿ ಉಪ್ಪಾರರು ಇವನಿಗೆ ಓಟು ಕೊಡಬೇಕೆ? ಆವತ್ತು ಬಾಲಚಂದ್ರ ಮಾಡಿದ ದ್ರೋಹವನ್ನು ಉಪ್ಪಾರರು ಇನ್ನೂ ಮರೆತಿಲ್ಲ. ಇದೇ ಜನಾಂಗದ ವಿಧಾನ ಪರಿಷತ್ ಸದಸ್ಯ ಎಸ್.ಸಿ.ನೀರಾರವಿಯವರು ಮತ್ತೆ ಕುಮಾರಸ್ವಾಮಿಗೆ ದುಂಬಾಲು ಬಿದ್ದು ತಮ್ಮ ಬೇಡಿಕೆ ಈಡೇರಿಸಲು ಒತ್ತಾಯ ಮಾಡಿದ್ದರು. ಕುಮಾರಸ್ವಾಮಿ ಕೂಡ ಮುತುವರ್ಜಿ ವಹಿಸಿ ಸಮಾಜ ಕಲ್ಯಾಣ ಇಲಾಖೆಗೆ ಆದೇಶ ಮಾಡಿದ್ದರು. ಆದರೆ, ಯಡ್ಡಿ ಅದಕ್ಕೆ ಅಡ್ಡಗಾಲು ಹಾಕಿದ್ದರು. ಒಂದು ಕಡೆಯಿಂದ ಬಾಲಚಂದ್ರ, ಇನ್ನೊಂದು ಕಡೆಯಿಂದ ಯಡ್ಡಿ – ಇಬ್ಬರೂ ಉಪ್ಪಾರರಿಗೆ ದ್ರೋಹವೆಸಗಿದರು. ಆರಭಾವಿ ಕ್ಷೇತ್ರದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ಉಪ್ಪಾರರು ಬಾಲಚಂದ್ರನಿಗೆ, ಯಡ್ಡಿಗೆ ಈ ಚುನಾವಣೆಯಲ್ಲಿ ಪಾಠ ಕಲಿಸಬೇಡವೆ?

ಪ್ರಾಯಶಃ ಬಾಲಚಂದ್ರನಿಗೆ ತನ್ನ ವಿರುದ್ಧ ಜನ ಭುಸುಗುಟ್ಟುತ್ತಿರುವುದು ಮನವರಿಕೆಯಾಗಿರಬೇಕು. ಅದಕ್ಕಾಗಿಯೇ ರೈತರ ಮನ ಗೆಲ್ಲಲು ತನ್ನ ಘಟಪ್ರಭಾ ಷುಗರ್ಸ್ ಅನ್ನು ಮತ್ತೆ ಪ್ರಾರಂಭಿಸಿದ್ದಾನೆ. ಏಕೆಂದರೆ, ಕಬ್ಬು ಬೆಳೆಗಾರರಿಗೆ ಸಹಾಯ ಮಾಡುವ ಪೋಜು ಕೊಟ್ಟು ಅವರಿಂದ ಓಟು ಕಿತ್ತುಕೊಳ್ಳಬೇಕಿದೆ. ಕಬ್ಬು ಬೆಳೆಗಾರರು ಒಂದಿಷ್ಟು ಎಚ್ಚರದಿಂದ ಇರಬೇಕು. ಬಾಲಚಂದ್ರ ಟೋಪಿ ಹಾಕುವುದರಲ್ಲಿ ನಿಸ್ಸೀಮ. ತನ್ನ ಸಕ್ಕರೆ ಕಾರ್ಖಾನೆಯನ್ನು ಆತ ಪ್ರಾರಂಭಿಸಿರುವುದೇ ಕಬ್ಬು ಬೆಳೆಗಾರರ, ರೈತರ ಓಟು ಪಡೆಯುವುದಕ್ಕಾಗಿಯಾದ್ದರಿಂದ ಚುನಾವಣೆ ಮುಗಿದ ತಕ್ಷಣವೇ ಅದನ್ನು ಮುಚ್ಚುವುದರಲ್ಲಿ ಯಾವುದೇ ಅನುಮಾನವಿಲ್ಲ. ಹಗಲು ಕಂಡ ಬಾವಿಗೆ ರಾತ್ರಿ ಬೀಳುವ ಮೂರ್ಖತನವನ್ನು ರೈತರು ಮಾಡದಿರುವುದು ಒಳ್ಳೆಯದು.

ಇನ್ನು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೂ ಕೂಡ ಬಾಲಚಂದ್ರನ ಈ ಬಾನಗಡಿಗಳನ್ನು ಎನ್‌ಕ್ಯಾಶ್ ಮಾಡಿಕೊಂಡು ಚುನಾವಣೆ ಎದುರಿಸಬೇಕು. ಈ ಹಿಂದೆ ಬಾಲಚಂದ್ರನ ವಿರುದ್ಧ ಸೆಡ್ಡು ಹೊಡೆದು ಅಲ್ಪ ಅಂತರದಲ್ಲಿ ಸೋತಿದ್ದ ವಿವೇಕರಾವ್ ಪಾಟೀಲ್ ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಅವರ ಹಿಂದೆ ನಿಷ್ಠಾವಂತ ಕಾರ್ಯಕರ್ತರ ದೊಡ್ಡ ದಂಡೇ ಇದೆ. ಒಂದೆರಡು ಬಾರಿ ಪಕ್ಷ ಹಾರಿದ್ದಾರಾದರೂ ಭ್ರಷ್ಟಾಚಾರ, ಲಂಚಗುಳಿತನಗಳಿಂದ ಮೈಕೈ ಹೊಲಸು ಮಾಡಿಕೊಂಡವರಲ್ಲ, ಅದೂಅಲ್ಲದೇ ಅವರು ಕುರುಬರ ಜಾತಿಗೆ ಸೇರಿರುವುದರಿಂದ ಕ್ಷೇತ್ರದಲ್ಲಿ ಎರಡನೇ ಅತಿದೊಡ್ಡ ಸಮುದಾಯವಾಗಿರುವ ಕುರುಬ ಮತಗಳು ಅವರಿಗೆ ಸಾಲಿಡ್ಡಾಗಿ ಬೀಳುವ ಸಾಧ್ಯತೆಯಿದೆ.

ಜೆಡಿಎಸ್‌ನಿಂದ ಅರವಿಂದ ದಳವಾಯಿ ನಿಂತಿದ್ದಾನೆ. ಈತ ಅಸಿಸ್ಟೆಂಟ್ ಕಮೀಷನರ್ ಹುದ್ದೆಗೆ ರಾಜಿನಾಮೆ ಕೊಟ್ಟು ರಾಜಕೀಯಕ್ಕೆ ಬಂದವನು. ಚಿಕ್ಕ ವಯಸ್ಸು, ಹುಮ್ಮಸ್ಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜಾರಕಿಹೊಳಿ ದರ್ಬಾರ್‌ಗೆ ಸೆಡ್ಡುಹೊಡೆಯಬಲ್ಲ ತಾಕತ್ತಿದೆ. ಈತ ಕೂಡ ಕುರುಬ ಸಮುದಾಯಕ್ಕೆ ಸೇರಿರುವುದರಿಂದ ಕುರುಬರ ಮತಗಳು ವಿವೇಕರಾವ್ ಪಾಟೀಲ್ ಮತ್ತು ಅರವಿಂದ ದಳವಾಯಿಗಳ ಮಧ್ಯೆ ಒಡೆಯುವ ಸಾಧ್ಯತೆಯಿದೆ.

ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಈ ಚುನಾವಣೆಯಲ್ಲಿ ಸ್ವಲ್ಪ ಚಾಣಾಕ್ಷತನ ಮೆರೆಯಬೇಕಿದೆ. ಬಾಲಚಂದ್ರ ಜಾರಕಿಹೊಳಿ ಜನರಿಗೆ ದ್ರೋಹ ಬಗೆದು ಅವರ ವಿಶ್ವಾಸ ಕಳೆದುಕೊಂಡು ಬೆತ್ತಲಾಗಿ ನಿಂತಿದ್ದಾನೆ. ಜನ ಆತನಿಗೆ ಓಟು ಹಾಕುವುದು ಕಷ್ಟ. ಆದ್ದರಿಂದಲೇ ಆತ ಶ್ರೀರಾಮುಲುನ ಹಡಬೆ ದುಡ್ಡಿನ ಮೇಲೆ ಅವಲಂಬಿತನಾಗಿದ್ದಾನೆ. ಹಾಗಾಗಿ ಕಾಂಗ್ರೆಸ್-ಜೆಡಿಎಸ್‌ನವರು ಒಟ್ಟಾಗಿ ಶ್ರೀರಾಮುಲುನ ದುಡ್ಡು ಆರಭಾವಿ ತಲುಪದಂತೆ ನೋಡಿಕೊಳ್ಳಬೇಕಿದೆ.

ಇನ್ನೊಂದೆಡೆಗೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಬೆಂಬಲದೊಂದಿಗೆ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಜಯಕುಮಾರ್ ಪ್ರತಿ ಸ್ತ್ರೀಶಕ್ತಿ ಸಂಘಟನೆಗಳಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಸಕತ್ ಪಾರ್ಟಿ ಕೊಟ್ಟು, ಹತ್ತು ಸಾವಿರ ರೂಪಾಯಿ ಕಟ್ಟೊಂದನ್ನು ಕೈಯಲ್ಲಿಟ್ಟು ಚುನಾವಣಾ ಪ್ರಚಾರಕ್ಕಿಳಿಸಿದ್ದಾನೆ. ಜೊತೆಗೆ ಬಾಲಚಂದ್ರನ ಬಾಡಿಗಾರ್ಡ್‌ನಂತಿರುವ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಕಟ್ಟೀಮನಿ ತನ್ನ ಇಲಾಖೆಯ ಜೀಪನ್ನೇ ಬಾಲಚಂದ್ರನ ಚುನಾವಣಾ ಪ್ರಚಾರಕ್ಕೆ ಬಿಟ್ಟಿದ್ದಾನೆ. ಇನ್ನು ತಹಸೀಲ್ದಾರ್ ಕೂಡ ತಾನೇನು ಕಡಿಮೆಯಿಲ್ಲ ವೆಂಬಂತೆ ಇಲಾಖೆಯ ಜೀಪುಗಳನ್ನು ಬಾಲಚಂದ್ರನ ಪರ ಪ್ರಚಾರಕ್ಕೆ ಕಳುಹಿಸಿಕೊಟ್ಟಿದ್ದಾನೆ. ಈ ವಿಚಾರಗಳನ್ನೆಲ್ಲಾ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಚುನಾವಣಾ ಪ್ರಚಾರದಲ್ಲಿ ಬಳಸಿಕೊಂಡರೆ ಬಾಲಚಂದ್ರ ಬೀದಿಪಾಲಾಗುವುದು ಗ್ಯಾರಂಟಿ.

■ ಮೇಘರಾಜ್


ಬಾಲಚಂದ್ರ ಮಾಡಿದ ಕೊಲೆ

ಹೊರಗೆ ಸಭ್ಯಸ್ಥನಂತೆ ಪೋಜು ಕೊಡುವ ಬಾಲಚಂದ್ರ ಜಾರಕಿಹೊಳಿ ಎಂಥ ಕ್ರೂರಿ ಎಂಬುದನ್ನು ಆತ ಇತ್ತೀಚೆಗೆ ಮಾಡಿರುವ ಅಮಾನವೀಯ ಕೊಲೆಯೇ ಸಾರಿ ಸಾರಿ ಹೇಳುತ್ತದೆ. ಅದು ಬೆಳಕಿಗೆ ಬಾರದೇ ಮುಚ್ಚಿಹೋಯಿತೆಂಬುದು ಬೇರೆ ಮಾತು.

ತನ್ನ ಘಟಪ್ರಭಾ ಷುಗರ್ಸ್ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ 16 ವರ್ಷದಿಂದ ಸೇವಕನಂತೆ ದುಡಿಯುತ್ತಿದ್ದ ಉಪ್ಪಾರ ಜನಾಂಗದ ವಿಠ್ಠಲ ಚೆಲ್ಲಿ ಎಂಬ ಕಾರ್ಮಿಕನಿಗೆ ಕಳೆದ ನಾಲ್ಕಾರು ತಿಂಗಳಿನಿಂದ ಸಂಬಳವನ್ನೇ ಕೊಟ್ಟಿರಲಿಲ್ಲ. ಜೀವನೋಪಾಯಕ್ಕಾಗಿ ಈ ಕೆಲಸವನ್ನೇ ನೆಚ್ಚಿಕೊಂಡಿದ್ದ ಆತ ಸಂಬಳ ಕೊಡಿ ಎಂದು ಬಾಲಚಂದ್ರನಿಗೆ, ಆಡಳಿತ ಮಂಡಳಿಗೆ ಅಂಗಲಾಚಿ ಬೇಡಿಕೊಂಡ. ಆದರೆ, ಬಾಲಚಂದ್ರ ಆತನನ್ನು ಒದ್ದು ಓಡಿಸಿದ್ದ. ಬಾಲಚಂದ್ರ ಕೊಟ್ಟ ಹಿಂಸೆಯನ್ನು ಆ ಬಡ ಕಾರ್ಮಿಕ ಬಹಿರಂಗ ಮಾಡಿದ್ದಕ್ಕೆ ಮತ್ತೆ ಅವನನ್ನು ಹಿಡಿದು ಕೊಡಬಾರದ ಹಿಂಸೆ ಕೊಟ್ಟರು. ಎಷ್ಟರಮಟ್ಟಿಗೆ ಎಂದರೆ ಆತ ತನಗಾದ ಅವಮಾನ, ಹಿಂಸೆ, ತನ್ನನ್ನೇ ನಂಬಿಕೊಂಡಿರುವ ಕುಟುಂಬವನ್ನು ಹೇಗೆ ಸಾಕುವುದು ಎಂದೆಲ್ಲಾ ಯೋಚನೆ ಮಾಡುತ್ತಾ ದಿಕ್ಕುಗೆಟ್ಟು ಆತ್ಮಹತ್ಯೆ ಮಾಡಿಕೊಂಡ. ಇದನ್ನು ವಾಸ್ತವದಲ್ಲಿ ಆತ್ಮಹತ್ಯೆ ಎನ್ನಬೇಕೆ ಅಥವ ಬಾಲಚಂದ್ರ ಜಾರಕಿಹೊಳಿ ಮಾಡಿದ ಕೊಲೆ ಎನ್ನಬೇಕೆ ನೀವೇ ಯೋಚಿಸಿ.

ತಮ್ಮಣ್ಣ... ನೂರು ಕೋಟಿ ಎಲ್ಲಿಂದ ಬಂತಣ್ಣ?

ಮದ್ದೂರಿನ ಶಾಸಕರಾಗಿದ್ದ ಸಿದ್ದರಾಜು ಅವರ ಅಕಾಲಿಕ ಮರಣದಿಂದ ತೆರವಾದ ಮದ್ದೂರು ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ಮತ್ತೆ ಚುನಾವಣೆ ಎದುರಾಗಿದೆ. ಜೆಡಿಎಸ್‌ನಿಂದ ದಿವಂಗತ ಸಿದ್ದರಾಜು ಅವರ ಪತ್ನಿ ಕಲ್ಪನಾ ಸಿದ್ದರಾಜು, ಕಾಂಗ್ರೆಸ್‌ನಿಂದ ಗುರುಚರಣ ಹಾಗೂ ಬಿಜೆಪಿಯಿಂದ ಡಿಸಿ ತಮ್ಮಣ್ಣ ಕಣದಲ್ಲಿದ್ದಾರೆ. ಓಟು ಹಾಕುವ ಮೊದಲು ಈ ಮೂವರಲ್ಲಿ ಯಾರನ್ನು ಗೆಲ್ಲಿಸಬೇಕೆಂದು ಮದ್ದೂರಿನ ಪ್ರಜ್ಞಾವಂತ ಮತದಾರರು ಚೆನ್ನಾಗಿ ಯೋಚಿಸಬೇಕಿದೆ. ಅದರಲ್ಲೂ ಬಿಜೆಪಿಯ ಡಿ.ಸಿ.ತಮ್ಮಣ್ಣನಿಗೆ ಓಟು ಹಾಕುವವರು ಒಂದಿಷ್ಟು ಸೂಕ್ಷ್ಮವಾಗಿಯೇ ಯೋಚನೆ ಮಾಡಬೇಕಾಗಿದೆ.



ಡಿಸಿ ತಮ್ಮಣ್ಣ ಮೊನ್ನೆ ತನ್ನ ನಾಮಪತ್ರ ಸಲ್ಲಿಸುವಾಗ ತನಗೆ ಬರೊಬ್ಬರಿ 100 ಕೋಟಿ ರೂಪಾಯಿ ಮೌಲ್ಯದ ಆಸ್ತಿಯಿದೆ ಎಂದು ಅಧಿಕೃತವಾಗಿ ಅಫಿಡವಿಟ್ಟನ್ನು ಸಲ್ಲಿಸಿದ್ದಾನೆ. ಒಮ್ಮೆ ಯೋಚಿಸಿ. ಇದು ಕೇವಲ ರಾಮನ ಲೆಕ್ಕ; ಆತ ಘೋಷಿಸಿದ ಅಧಿಕೃತ ಆಸ್ತಿ, ದಾಖಲೆಗಳಾಚೆಗೆ, ಕೃಷ್ಣನ ಲೆಕ್ಕಾಚಾರದಲ್ಲಿ ಅನಧಿಕೃತವಾಗಿ ಮಾಡಿದ ಆಸ್ತಿ ಇನ್ನೆಷ್ಟಿರಬಹುದು.

ಹಾಗೆ ನೋಡಿದರೆ ಡಿ.ಸಿ.ತಮ್ಮಣ್ಣ ಹುಟ್ಟುವಾಗಲೇ ಕುಬೇರನಾಗಿ ಹುಟ್ಟಿರಲಿಲ್ಲ, ಮದ್ದೂರು ತಾಲ್ಲೂಕಿನ ದೊಡ್ಡ ಅರಸೀಕೆರೆ ಗ್ರಾಮದ ಚಿಕ್ಕ ಮರಿಗೌಡ ಎಂಬ ಸಾಮಾನ್ಯ ರೈತನ ಮಗನಾಗಿ ಈತ ಹುಟ್ಟಿದ್ದು. ಹಾಗೂಹೀಗೂ ಬಿ.ಇ ಮುಗಿಸಿಕೊಂಡು ಸರ್ಕಾರಿ ಕೆಲಸ ಸೇರಿದ್ದ. ನಂತರ ಕೆಐಎಡಿಬಿನಲ್ಲಿ ಡಿಓ ಆಗಿ ಆಮೇಲೆ ಸ್ವಯಂನಿವೃತ್ತಿ ಹೊಂದಿ ರಾಜಕೀಯಕ್ಕಿಳಿದಿದ್ದಾನೆ. ಈತನ ವಂಶವೇ ಒಂದು ರೀತಿಯಲ್ಲಿ ಸುಲಿಗೆಕೋರರ ವಂಶ. ಈತನ ತಾತ ಗೌಡಯ್ಯ ರೈತರಿಗೆ 100 ರೂ. ಸಾಲ ಕೊಟ್ಟು ಅದಕ್ಕೆ ಬಡ್ಡಿ, ಚಕ್ರ ಬಡ್ಡಿ ಸೇರಿಸಿ ಸಾವಿರಾರು ರೂ. ಸುಲಿಯುತ್ತಿದ್ದ. ಕೊಡಲಾಗದಿದ್ದವರ ಜಮೀನುಗಳನ್ನು ಗುಳುಂ ಮಾಡುತ್ತಿದ್ದ. ಅಂತಹ ಮೋಸದ ರಕ್ತ ಡಿ.ಸಿ.ತಮ್ಮಣ್ಣನಲ್ಲೂ ಹರಿಯುತ್ತಿದೆ.

ಮಂಗನಂತೆ ಪಕ್ಷದಿಂದ ಪಕ್ಷಕ್ಕೆ ಹಾರುವಲ್ಲಿ ನಿಸ್ಸೀಮನಾಗಿರುವ ಈತನನ್ನು ಇತ್ತೀಚೆಗೆ ಜೆಡಿಎಸ್‌ನವರು ತೀವ್ರವಾಗಿ ಖಂಡಿಸಿದರು. ಅದಕ್ಕೆ ತಮ್ಮಣ್ಣ "ನಮ್ಮದು ದೇವೇಗೌಡರಂಥ ಭಿಕಾರಿ ಮನೆತನವಲ್ಲ, ನಮ್ಮದು ರಾಯಲ್ ಫ್ಯಾಮಿಲಿ. ನಮಗೆ 200 ಎಕರೆ ಜಮೀನಿತ್ತು, ನಮ್ಮ ಮನೆಯವರ ಹೆಸರಿನಲ್ಲಿ ಎರಡು ಊರುಗಳಿವೆ" ಎಂದೆಲ್ಲಾ ಬಡಾಯಿ ಕೊಚ್ಚಿಕೊಂಡಿದ್ದಾನೆ. ಈತನ ಫ್ಯಾಮಿಲಿ ಇಷ್ಟೊಂದು ಸಂಪತ್ತು ಗುಡ್ಡೆಹಾಕಿದೆಯೆಂದರೆ ಎಷ್ಟು ರೈತಕುಟುಂಬಗಳನ್ನು ಬೀದಿಪಾಲು ಮಾಡಿದ್ದಿರಬಹುದು ನೀವೇ ಯೋಚಿಸಿ.

ಕೆಐಎಡಿಬಿಯಲ್ಲಿ ಭಾರಿ ನುಂಗಾಟ



ತಮ್ಮಣ್ಣನೇನೂ ಕಡಿಮೆಯಿಲ್ಲ, ನುಂಗಾಟದಲ್ಲಿ ತನ್ನ ಅಜ್ಜನನ್ನು ಮೀರಿಸುತ್ತಾನೆ. ಒಬ್ಬ ಸಾಮಾನ್ಯ ಅಧಿಕಾರಿಯಾಗಿದ್ದ ತಮ್ಮಣ್ಣ ಕೋಟ್ಯಾಧಿಪತಿಯಾದದ್ದೇ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ (ಕೆ.ಐ.ಎ.ಡಿ.ಬಿ) ಆತ ನಡೆಸಿದ ನುಂಗಾಟದಿಂದ. ಎಷ್ಟರಮಟ್ಟಿಗೆ ಸಾರ್ವಜನಿಕರ ದುಡ್ಡು ನುಂಗಿದ್ದಾನೆಂದರೆ ಪ್ರಾಯಶಃ ಈ ಇಲಾಖೆಯಲ್ಲಿ ದೇಶಪಾಂಡೆಯನ್ನು ಬಿಟ್ಟರೆ ಚೆನ್ನಾಗಿ ಮೇಯ್ದವನೆಂದರೆ ತಮ್ಮಣ್ಣನೇ ಇರಬೇಕು.

ತಮ್ಮಣ್ಣ ಕೆ.ಐ.ಎ.ಡಿ.ಬಿಗೆ ಒಬ್ಬ ಸಾಮಾನ್ಯ ಇಂಜಿನಿಯರ್ ಆಗಿ ಸೇರಿದ್ದ. ಅದ್ಯಾರ್ಯಾರ ಕಾಲು ಹಿಡಿದನೋ, ಯಾರ್ಯಾರಿಗೆ ಎಷ್ಟೆಷ್ಟು ತಿನ್ನಿಸಿದನೋ ಗೊತ್ತಿಲ್ಲ ಅಂತು ನೋಡುನೋಡುತ್ತಿದ್ದಂತೆ ಚೀಫ್ ಡೆವಲಪ್‌ಮೆಂಟ್ ಆಫೀಸರ್ ಆಗಿ ಬಡ್ತಿ ಪಡೆದ. ಯಾವಾಗ ಇಂತಹ ಒಂದು ಮಹತ್ವಪೂರ್ಣ ಹುದ್ದೆ ಸಿಕ್ಕಿತೋ ಕೆ.ಐ.ಎ.ಡಿ.ಬಿ ಅಭಿವೃದ್ಧಿಗಿಂತ ಎಷ್ಟೋ ಪಟ್ಟು ಹೆಚ್ಚಿಗೆ ತನ್ನ ಸ್ವಾಭಿವೃದ್ಧಿ ಮಾಡಿಕೊಂಡ. ಸಾವಿರಾರು ರೈತರ ಭೂಮಿ ಕಿತ್ತುಕೊಂಡು ಕಂಪನಿಗಳ ಪಾದಕ್ಕರ್ಪಿಸಿದ. ಆ ಕಂಪನಿಗಳು ತಮಗೆ ಸೇವೆ ಸಲ್ಲಿಸಿದ ತಮ್ಮಣ್ಣನಿಗೆ ಸರಿಯಾದ ಭಕ್ಷೀಸು ಕೊಟ್ಟವು.

ಈತನ ಹಗಲು ದರೋಡೆ ಹೇಗಿತ್ತೆಂಬುದಕ್ಕೆ ಒಂದು ಉದಾಹರಣೆ ನೋಡಿ. ಕೆ.ಐ.ಎ.ಡಿ.ಬಿಯಿಂದ ಬಿಡದಿಯಲ್ಲಿ ಟೊಯೋಟಾ ಕಿರ್ಲೋಸ್ಕರ್ ಕಂಪನಿಗೆ ಭೂಮಿ ನೀಡುವಾಗ ಹಗರಣ ಮಾಡಿಕೊಂಡು ಈತ ಜೇಬಿಗಿಳಿಸಿಕೊಂಡಿದ್ದು ಕೇವಲ 150 ಕೋಟಿ ರೂಪಾಯಿ ಮಾತ್ರ! ಭೂಮಿ ಕಳೆದುಕೊಂಡ ರೈತರು ಬೀದಿ ಪಾಲಾದರು. ತಮ್ಮಣ್ಣ ಮಾತ್ರ ಕೋಟ್ಯಾಧಿಪತಿಯಾದ. ಆಗ ಕಾಂಗ್ರೆಸ್ ಸರ್ಕಾರವಿತ್ತು, ಆರ್.ವಿ.ದೇಶಪಾಂಡೆ ಭಾರಿ ಕೈಗಾರಿಕಾ ಮಂತ್ರಿಯಾಗಿದ್ದ. ಈ ಹಗರಣ ಕುರಿತು ತನಿಖೆ ಮಾಡುತ್ತೇನೆಂದು ಹೇಳುತ್ತಲೇ ಕಾಲಹರಣ ಮಾಡಿದರೆ ಹೊರತು ತಮ್ಮಣ್ಣನ ಒಂದು ಕೂದಲನ್ನೂ ಕಿತ್ತುಕೊಳ್ಳಲಾಗಲಿಲ್ಲ, ತನಿಖೆ ಮಾಡಿದ್ದರೆ ಈ ಲೂಟಿಯಲ್ಲಿ ದೇಶಪಾಂಡೆ ಪಾಲೆಷ್ಟಿತ್ತು ಎಂಬುದೂ ಹೊರಬೀಳುತ್ತಿತ್ತು; ತಮ್ಮಣ್ಣ–ದೇಶಪಾಂಡೆ ಜೋಡಿ ಜೈಲು ಪಾಲಾಗುತ್ತಿತ್ತು, ಹಾಗಾಗಿಯೇ ಇಡೀ ಹಗರಣವನ್ನು ತಿಪ್ಪೆ ಸಾರಿಸಿದರು. ಇತ್ತ ತಮ್ಮಣ್ಣನೂ ಸಕತ್ತಾಗಿ ದುಡ್ಡು ಮಾಡಿಕೊಂಡಿದ್ದನಾದ್ದರಿಂದ ಸ್ವಯಂನಿವೃತ್ತಿ ಘೋಷಣೆ ಮಾಡಿಕೊಂಡು ಮನೆ ಸೇರಿಕೊಂಡ.



ಕಲ್ಪನಾ ಸಿದ್ದರಾಜು

ಆಮೇಲೆ ಎಸ್ಸೆಂ ಕೃಷ್ಣನ ಹಿಂದೆಮುಂದೆ ಸುತ್ತಾಡಿಕೊಂಡಿದ್ದು ಕಿರುಗಾವಲಿನಿಂದ ಸ್ಪರ್ಧಿಸಿ ಎಮ್ಮೆಲ್ಲೆಯಾದ. ಮೊದಲೇ ಮೇಯುವುದರಲ್ಲಿ ನಿಸ್ಸೀಮನಾಗಿದ್ದ ತಮ್ಮಣ್ಣ ಎಮ್ಮೆಲ್ಲೆಯಾದರೆ ಕೇಳಬೇಕೇ?

2500 ಸಾವಿರ ಕೋಟಿಯ ಒಡೆಯ!

ಸರ್ಕಾರಿ ಯಂತ್ರಾಂಗದಲ್ಲಿ ಕೇವಲ ಒಬ್ಬ ಅಧಿಕಾರಿಯಾಗಿದ್ದ ಆಮೇಲೆ ಎರಡು ಬಾರಿ ಎಮ್ಮೆಲ್ಲೆಯಾಗಿದ್ದ ತಮ್ಮಣ್ಣ ಈ ಹೊತ್ತು ಏನಿಲ್ಲವೆಂದರೂ ಎರಡೂವರೆ ಸಾವಿರ ಕೋಟಿಗೆ ಬಾಳುತ್ತಾನೆ. ಅವನೇ ಹೇಳಿದ ಲೆಕ್ಕದ ಪ್ರಕಾರವೇ ಹೋಗುವುದಾದರೆ 2004ರ ಚುನಾವಣೆಯ ಸಮಯದಲ್ಲಿ ಈತನ ಆಸ್ತಿ 5.31 ಕೋಟಿ ರೂಪಾಯಿ ಇತ್ತು, 2008ರ ಚುನಾವಣೆಯ ವೇಳೆಗೆ ಅದು 53.88 ಕೋಟಿ ರೂ.ಗಳಿಗೆ ಬೆಳೆಯಿತು. 2008ರ ಡಿಸೆಂಬರ್ ಹೊತ್ತಿಗೆ ಪತ್ನಿ ಪ್ರಮೀಳಾ ಹೆಸರಿನಲ್ಲಿ 100.52 ಕೋಟಿ ರೂ. ಇದೆ ಎಂದು ನಮೂದಿಸಿಕೊಂಡಿದ್ದಾನೆ. ಆತನ ಅಫಿಡವಿಟ್ಟಿನ ಪ್ರಕಾರ ಬೆಂಗಳೂರಿನ ಪೀಣ್ಯ, ಮೈಸೂರಿನ ಇಟ್ಟಿಗೆಗೂಡು, ಅಲ್ಲಸಂದ್ರಗಳಲ್ಲಿ ಸೈಟುಗಳು, 50 ಎಕರೆ ಜಮೀನು, ಹತ್ತೂವರೆ ಕೆಜಿ ಬಂಗಾರ ಇದೆಯಂತೆ. ಇದು ಸಾಚಾತನದ ಲೆಕ್ಕವಲ್ಲ, ಆತನಿಗೆ ಬೆಂಗಳೂರಿನಲ್ಲಿ ಮೂರು ಪೆಟ್ರೋಲ್ ಬಂಕ್‌ಗಳಿವೆ, ವಿಜಯನಗರದಲ್ಲಿ ಮನೆಯಿದೆ, ಪೀಣ್ಯದಲ್ಲಿ ತಿಂಗಳಿಗೆ ತಲಾ ಹತ್ತತ್ತು ಲಕ್ಷ ಬಾಡಿಗೆ ಬರುವ ಎರಡು ಕಾಂಪ್ಲೆಕ್ಸ್‌ಗಳಿವೆ, ಗಾಂಧಿನಗರದ ಪ್ರತಿಷ್ಠಿತ ಹೋಟೆಲ್ ಗ್ರ್ಯಾಂಡೀನ್ ಇವನ ಒಡೆತನದಲ್ಲಿದೆ, ಬೆಂಗಳೂರಿನ ಲಕ್ಷ್ಮಿದೇವಿ ನಗರದಲ್ಲಿ ಬೃಹತ್ತಾದ ಗಾರ್ಮೆಂಟ್ಸ್ ಬಿಲ್ಡಿಂಗ್ ಇದೆ, ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಹೋಟೆಲ್ ಇದೆ, ಬಿಡದಿಯಲ್ಲಿ ಭಾರಿ ಪ್ರಮಾಣದಲ್ಲಿ ಜಮೀನಿದೆ. ಬೆಂಗಳೂರು ಜಿಲ್ಲೆಯ ಮಾದನಾಯಕನಹಳ್ಳಿಯಲ್ಲಿ ಮತ್ತು ಮಳವಳ್ಳಿ ತಾಲ್ಲೂಕಿನಲ್ಲಿ ಸುಮಾರು 25 ಎಕರೆ ಜಮೀನಿದೆ. ಪ್ರಮೀಳಾ ಸಂತೋಷ್ ಲ್ಯಾಂಡ್ ಡೆವಲಪರ್ಸ್‌ನಲ್ಲಿ ಈತನಿಗೆ ಷೇರುಗಳಿವೆ, ಹೊಸಕೋಟೆ, ಕೋಲಾರಗಳಲ್ಲಿ ಜಮೀನಿದೆ. ಬೇರೆ ಬೇರೆ ಜಾಗದಲ್ಲಿ ಐದು ಫಾರಂಗಳಿವೆ. ಇವ್ಯಾವನ್ನೂ ತನ್ನ ಆಸ್ತಿಯ ಪಟ್ಟಿಯಲ್ಲಿ ತಮ್ಮಣ್ಣ ತೋರಿಸಿಲ್ಲ, ಅದೂ ಅಲ್ಲದೇ ತನ್ನ ನಾಲ್ವರು ಹೆಣ್ಣುಮಕ್ಕಳಿಗೆ ನೀಡಿರುವ ತಲಾ ನೂರು ಕೋಟಿ ಮೌಲ್ಯದ ಆಸ್ತಿಗಳು, ಬೆಂಗಳೂರಿನಲ್ಲಿ ಹೊಸದಾಗಿ ನಿರ್ಮಿಸಿಕೊಟ್ಟಿರುವ ಮನೆಗಳು, ಮಗ ಸಂತೋಷನ ಹೆಸರಿನಲ್ಲಿರುವ ಆಸ್ತಿಗಳು, ಷೇರುಗಳು, ವಿಮೆಗಳು, ಡಿಬೆಂಚರ್‌ಗಳು, ಎನ್‌ಎಸ್‌ಸಿ ಸರ್ಟಿಫಿಕೇಟ್ – ಇವ್ಯಾವ್ಯೂ ಅವನು ತೋರಿಸಿರುವ ಲೆಕ್ಕದಲ್ಲಿಲ್ಲ, ಇವೆಲ್ಲವುಗಳನ್ನೂ ಲೆಕ್ಕ ಹಾಕಿದರೆ ತಮ್ಮಣ್ಣನ ಆಸ್ತಿ ಎರಡೂವರೆ ಸಾವಿರ ಕೋಟಿ ದಾಟುತ್ತದೆ.

ಎರಡು ಬಾರಿ ಎಮ್ಮೆಲ್ಲೆಯಾಗಿದ್ದಕ್ಕೆ ಇಷ್ಟೊಂದು ಆಸ್ತಿ ಮಾಡಿಕೊಂಡಿದ್ದಾನೆಂದರೆ ಇನ್ನೊಮ್ಮೆ ಇವನನ್ನು ಆರಿಸಿಕಳಿಸಿದರೆ ಇನ್ನೆಷ್ಟು ಲೂಟಿ ಹೊಡೆಯಬಹುದು? ಇನ್ನೆಷ್ಟು ಜನರನ್ನು ಬೀದಿಗೆ ದೂಡಬಹುದು?

ಜನರಿಗೆ ಮಾಡಿದ್ದೇನು?

ಎಮ್ಮೆಲ್ಲೆ ಎಂಪಿಯಾಗಿ ಗೆದ್ದ ಮೇಲೆ ರಾಜಕಾರಣಿಗಳು ದುಡ್ಡು ಮಾಡುತ್ತಾರೆ ನಿಜ. ಒಂದಿಷ್ಟಾದರೂ ಜನಪರ ಕಾಳಜಿಗಳಿದ್ದರೆ, ತನ್ನನ್ನು ಗೆಲ್ಲಿಸಿದ ಜನರ ಬಗ್ಗೆ ಒಂದಿಷ್ಟಾದರೂ ಅನುಕಂಪ ಇದ್ದರೆ ತಾನು ಮೇಯುವುದರ ಜೊತೆಗೆ ಜನರಿಗೂ ಒಂದಿಷ್ಟು ಒಳ್ಳೆಯ ಕೆಲಸಗಳನ್ನು ಮಾಡಿಸಬಹುದು. ಹೀಗೆ ಮಾಡಿರುವ ಅದೆಷ್ಟೋ ರಾಜಕಾರಣಿಗಳು ನಮ್ಮ ನಡುವಿದ್ದಾರೆ. ಆದರೆ, ತಮ್ಮಣ್ಣ ಆ ಜಾಯಮಾನದವನಲ್ಲ, ಏನಿದ್ದರೂ ತಾನೊಬ್ಬನೇ ಮೇಯಬೇಕು. ಏನಿದ್ದರೂ ತಾನೊಬ್ಬನೇ ತಿನ್ನಬೇಕು ಎನ್ನುವ ಬಕಾಸುರ.

ಕಬ್ಬಿನ ಬೆಳೆಗಾರರು ಸೂಕ್ತ ಬೆಲೆ ಸಿಗಲಿಲ್ಲ ಎಂಬ ಕಾರಣಕ್ಕೆ ಸಾಲುಸಾಲಾಗಿ ಆತ್ಮಹತ್ಯೆ ಮಾಡಿಕೊಂಡರು. ಆಗ ತಮ್ಮಣ್ಣ ಎಲ್ಲಿದ್ದ ಎಂಬುದು ಯಾರಿಗೂ ಗೊತ್ತಿಲ್ಲ. ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ತೀರ್ಪು ಬಂದಾಗ ಈ ನದಿ ನೀರನ್ನೇ ನೆಚ್ಚಿಕೊಂಡಿರುವ ಮಂಡ್ಯ, ಮದ್ದೂರು ಭಾಗದ ರೈತರು ಬೀದಿಗಿಳಿದು ದೊಡ್ಡ ಹೋರಾಟ ಮಾಡಿದರು. ಆಗಲೂ ತಮ್ಮಣ್ಣ ಎಲ್ಲಿ ಮಲಗಿ ನಿದ್ದೆ ಮಾಡುತ್ತಿದ್ದ ಎಂಬುದು ಗೊತ್ತಿಲ್ಲ. ಈಗ ಚುನಾವಣೆ ಎದುರಾಗಿರುವಾಗ ದುಡ್ಡಿನ ಕಂತೆಗಳನ್ನು, ಹೆಂಡದ ಬಾಟಲಿಗಳನ್ನು ಹಿಡಿದುಕೊಂಡು ಜನರ ಮುಂದೆ ಬಂದಿದ್ದಾನೆ. ಜನರ ಕಷ್ಟಗಳಿಗಾಗದ ಇಂಥವನನ್ನು ಗೆಲ್ಲಿಸಿದರೆ ಜನರಿಗೇನು ಲಾಭ. ಲಾಭ ಎನ್ನುವುದಕ್ಕಿಂತ ನಷ್ಟವೇ ಜಾಸ್ತಿಯಾಗುತ್ತವಲ್ಲವೆ? ಎರಡೂವರೆ ಸಾವಿರ ಕೋಟಿಗಳಷ್ಟು ಆಸ್ತಿ ಮಾಡಿಕೊಂಡಿರುವ ಈತ ಮುಂದಿನ ಎಲೆಕ್ಷನ್ ಬರುವುದರೊಳಗಾಗಿ ನಾಲ್ಕೂವರೆ ಸಾವಿರ ಕೋಟಿ ಮಾಡಿಕೊಳ್ಳುವುದಿಲ್ಲವೆ?

ತಮ್ಮಣ್ಣ ಎಷ್ಟೇ ದುಡ್ಡು ಚೆಲ್ಲಿದರೂ, ಎಷ್ಟೇ ಹೆಂಡ ಹರಿಸಿದರೂ ಗೆಲ್ಲುವುದು ತುಸು ಕಷ್ಟವೇ. ಜೆಡಿಎಸ್‌ನ ಕಲ್ಪನಾ ಸಿದ್ದರಾಜು ಪರ ಸಿದ್ಧರಾಜು ನಿಧನದ ಅನುಕಂಪದ ಹವಾ ಬೀಸುತ್ತಿದೆ. ಮದ್ದೂರಿನ ಜನರೇನು ದಡ್ಡರಲ್ಲ, ತಮ್ಮಣ್ಣನ ದುರಾಚಾರಗಳ ಬಗ್ಗೆ ಎಲ್ಲರಿಗಿಂತ ಅವರಿಗೇ ಚೆನ್ನಾಗಿ ಗೊತ್ತಿದೆ. ಆತನನ್ನು ಗೆಲ್ಲಿಸುವ ತಪ್ಪನ್ನು ಮಾಡಲಾರರು. ■

ಲಕ್ಷ್ಮಣ್ ಚೀಕನಹಳ್ಳಿ



ಮಧು ಹರಕೆಯ ಕುರಿ

ತಮ್ಮಣ್ಣನ ರಾಜಕಾರಣಕ್ಕೆ ಮಾದೇಗೌಡರ ಮಗ ಮಧು ಹರಕೆಯ ಕುರಿಯಾಗಿಹೋಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಧು ಬಿಜೆಪಿಯ ಕ್ಯಾಂಡಿಡೇಟ್ ಆಗಿದ್ದರು. ತಮ್ಮಣ್ಣನೆಂಬ ಮಂಗ ಬಿಜೆಪಿಗೆ ಜಂಪ್ ಮಾಡುತ್ತಿದ್ದಂತೆಯೇ ಮಧುಗೆ ಎಮ್ಮೆಲ್ಸಿ ಸೀಟಿನ ಆಸೆ ತೋರಿಸಿ, ಆತನ ಕೈಯಲ್ಲಿ ಎರಡು ಕೋಟಿ ದುಡ್ಡಿನ ಗುಡ್ಡೆಯಿಟ್ಟು ಮದ್ದೂರಿನ ಬಿಜೆಪಿ ಟಿಕೆಟ್‌ನ್ನು ತಮ್ಮಣ್ಣನಿಗೆ ದಯಪಾಲಿಸಲಾಗಿದೆ. ಅದೂ ಅಲ್ಲದೇ ಟಿಕೆಟ್ ಕೈತಪ್ಪಿ ಹೋಗಿದ್ದರಿಂದ ಮಾದೇಗೌಡರ ಭಾರತಿ ಸಂಸ್ಥೆಗೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜನ್ನು ಕಟ್ಟಿಸಿಕೊಡಲಾಗುತ್ತದಂತೆ.

ನೆನಪಿರಲಿ ಈ ಹಿಂದೆ ಮಾದೇಗೌಡರಿಗೆ ಕರಡಕೆರೆಯ ನಿಂಗಯ್ಯನಿಂದ ಗೂಸಾ ತಿನ್ನಿಸಿದ್ದು, ಅವರ ಮಗ ಮಧು ಬೆಂಬಲಿಗರ ಮೇಲೆ ಸುಳ್ಳು ಕೇಸುಗಳನ್ನು ಹಾಕಿಸಿ ಸತಾಯಿಸಿದ್ದು ಇದೇ ತಮ್ಮಣ್ಣ. ಈ ಹೊತ್ತು ಅವರೆಲ್ಲಾ ಅದ್ಯಾವ ಮುಖ ಇಟ್ಟುಕೊಂಡು ತಮ್ಮಣ್ಣನಿಗಾಗಿ ಚುನಾವಣಾ ಪ್ರಚಾರ ಮಾಡುತ್ತಿದ್ದಾರೋ?

▶▶▶3

ತಮ್ಮ ಪಾತ್ರಗಳನ್ನು ಬದಲಾಯಿಸುತ್ತಾರೆಂದು ಭಾರತೀಯರು ಅರ್ಥ ಮಾಡಿಕೊಳ್ಳಲು ಆರಂಭಿಸುತ್ತಿದ್ದಾಗ ಅವರನ್ನು ಈ ಬೌದ್ಧಿಕ ಬಾಲಿಶತನಕ್ಕೆ ದೂಡಲಾಗಿದೆ.

2001 ರ ಪಾರ್ಲಿಮೆಂಟಿನ ಮೇಲಿನ ದಾಳಿಯಿಂ ಪ್ರಾರಂಭವಾಗಿ ಇತ್ತೀಚಿನ ತನಕ ಈ ದೇಶದಲ್ಲಿ ನಡೆ ಎಲ್ಲಾ ಭಯೋತ್ಪಾದಕ ಕೃತ್ಯಗಳಿಗೆ ಮುಸಲ್ಮಾನ ಸಂಘಟನೆಗ ಕಾರಣ ಎಂದು ಹೇಳಲಾಗುತ್ತಿತ್ತು. ಈ ಪ್ರವೃತ್ತಿ ಬದಲಾಗಿ ಇತ್ತೀಚೆಗೆ. ಮಾಲೆಗಾಂವ್ ಬಾಂಬ್ ಸ್ಫೋಟದ ವಿಚಾರ ನಡೆಸುತ್ತಿದ್ದ ಮಹಾರಾಷ್ಟ್ರದ ಆಂಟಿ ಟೆರರಿಸಂ ಸ್ಕ್ವಾ (ಎಟಿಎಸ್) ಕಳೆದ ಅಕ್ಟೋಬರ್ ತಿಂಗಳಲ್ಲಿ ಹಿಂದೂ ಸ್ವಾ ಪ್ರಜ್ಞಾ, ಸ್ವಯಂ ಘೋಷಿತ ದೈವಪುರುಷ ಸ್ವಾಮಿ ದಯಾನ ಪಾಂಡೆ ಮತ್ತು ಭಾರತೀಯ ಸೇನಾಧಿಕಾರಿ ಪುರೋಹಿತ್‌ನ ಬಂಧಿಸಿತು. ಅವರೆಲ್ಲ ಹಿಂದೂ ರಾಷ್ಟ್ರೀಯವಾದಿಗಳ ಅಭಿನವ ಭಾರತ ಎಂಬ ಧರ್ಮಾಂಧ ಸಂಘಟನೆಯ ಸಕ್ರಿ ಸದಸ್ಯರು. ಆದರೆ ಎಟಿಎಸ್ ವಿರುದ್ಧ ಶಿವಸೇನೆ ಮ ಆರ್‌ಎಸ್‌ಎಸ್ ಅಲ್ಲದೆ ಬಿಜೆಪಿ ಮತ್ತದರ ನಾಯ ಅಡ್ವಾಣಿಯವರು ಕೆಂಡಕಾರಿದ್ದರು. ಇದಾದ ಕೆಲದಿನಗಳ ಎಟಿಎಸ್‌ನ ಮುಖ್ಯಸ್ಥ ಹೇಮಂತ್ ಕರ್ಕರೆ ಅವ ಭಯೋತ್ಪಾದಕರ ದಾಳಿಯಲ್ಲಿ ಅಸುನೀಗಿದರು.

ಅಡ್ವಾಣಿಯವರು ಸೇರಿದಂತೆ ಹಲವು ಪ್ರಕಾರ ಪೊಲೀ ಬಗ್ಗೆ ಪ್ರಜೆಗಳು ಪ್ರಶ್ನೆಗಳನ್ನೆತ್ತುವುದೇ ಒಂದು ದೊ ಅಪರಾಧವಾಗಿದೆ. ಸಂಶಯಾಸ್ಪದ ಭಯೋತ್ಪಾದಕರ ದಾ ಗಳು, ಮಬ್ಬುಮಬ್ಬಾದ ವಿಚಾರಣೆಗಳು, ನಕಲಿ ಎನ್‌ಕೌಂಟ ಗಳು ಕುರಿತಂತೆ ನಿಗೂಢ ಇತಿಹಾಸವನ್ನೇ ಹೊಂದಿರು ದೇಶ ನಮ್ಮದು. ಜಗತ್ತಿನಲ್ಲೇ ಅತಿಹೆಚ್ಚು ಸಂಖ್ಯೆಯಲ್ಲಿ ಲಾ ಅಪ್ ಮರಣಗಳು ಸಂಭವಿಸುವ ದೇಶ ಎಂಬ 'ಹೆಗ್ಗಳಿ ಹೊಂದಿದ್ದರೂ ಹಿಂಸಾಚಾರದ ವಿರುದ್ಧ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕದ ದೇಶ ನಮ್ಮದು. ಎನ್‌ಕೌಂಟ ಸ್ಪೆಷಲಿಸ್ಟ್‌ಗಳಿಗೆ ಬಲಿಯಾಗದೆ ಹಿಂಸಾಗೃಹಗಳನ ಪ್ರವೇಶಿಸುವವರೇ ಅದೃಷ್ಟವಂತರು ಎಂದು ಭಾವಿಸು ದೇಶ ನಮ್ಮದು. ಭೂಗತಲೋಕಕ್ಕೂ ಎನ್‌ಕೌಂಟರ್ ಸ್ಪೆಷಲಿಸ್ ಗಳಿಗೂ ವ್ಯತ್ಯಾಸವೇ ಇಲ್ಲದಂತಹ ದೇಶ ನಮ್ಮದು.

ಇದೆಲ್ಲದರ ಬಗ್ಗೆ ಅರಿವು ಹೊಂದಿರುವವರು ಮುಂಬ ಮೇಲಿನ ದಾಳಿಯನ್ನು ಹೇಗೆ ಪರಿಗಣಿಸಬೇಕು? ಹಲವ ಅಮೆರಿಕ ಮಾಡಿರುವಂತೆ ಮಾಡಬೇಕೆಂದು ವಾದಿಸುತ್ತಾ ಆದರೆ ಅಫ್ಘಾನಿಸ್ತಾನ ಮತ್ತು ಇರಾಕ್ ಮೇಲೆ ಯು ಸಾರಿರುವ ಅಮೆರಿಕದ ಪರಿಸ್ಥಿತಿ ಇಂದು ಅಷ್ಟೇನು ಚೆನ್ನಾಗಿ ಎಂದೂ, ಸಾವಿರಾರು ಅಮೆರಿಕದ ಸೈನಿಕರು ಸೇರಿದಂ ಲಕ್ಷಾಂತರ ಜನರು ಸತ್ತಿದ್ದಾರೆಂದೂ, ಅಮೆರಿಕದ ಅಧ ಜಾರ್ಜ್ ಬುಷ್‌ನನ್ನು ಬೇರೆ ದೇಶದವರಲ್ಲದೆ ಸ್ವ ಅಮೆರಿಕನ್ನರೇ ದ್ವೇಷಿಸುತ್ತಾರೆಂದೂ ಹಲವರು ವಾದಿಸುತ್ತಾ


ಆಂತರಿಕ ಭದ್ರತೆಗೆಂದು ಅಮೆರಿಕದ ಸರ್ಕಾರ ಬಿಲಿಯ ಗಟ್ಟಲೆ ಡಾಲರ್‌ಗಳನ್ನು ವೆಚ್ಚ ಮಾಡಿದೆ. ಆದರೆ ಅದ ಭಾರತದಿಂದ ಸಾಧ್ಯವಿಲ್ಲ. ಅಷ್ಟೇ ಅಲ್ಲದೆ, ಹಿಡಿತ ತಪ್ಪುತ್ತಿರು ಅಣುಬಾಂಬ್ ಹೊಂದಿರುವ ಶತ್ರು ದೇಶ ನಮ್ಮ ಪಕ್ಕದ ಇದೆ; ಕಾಶ್ಮೀರವನ್ನು ಸೈನ್ಯ ಆಕ್ರಮಿಸಿಕೊಂಡಿದೆ; ಶೋಷಣೆ ಗುರಿಯಾಗಿರುವ 150 ಮಿಲಿಯನ್ ಬಡ ಮುಸಲ್ಮಾನ ನಮ್ಮ ದೇಶದಲ್ಲಿದ್ದಾರೆ. ಒಂದು ಸಮುದಾಯವಾಗಿ ಅವರನ ಗೋಡೆಗೆ ದೂಡಲಾಗಿದೆಯಲ್ಲದೆ, ಅವರು ಎಲ್ಲಾ ಆಸೆಗಳನ ಕಳೆದುಕೊಂಡು ಮೂಲಭೂತವಾದಿಗಳಾದರೆ ಭಾರತಕ್ಕೆ ಮಾ ವಲ್ಲ ಇಡೀ ಜಗತ್ತಿಗೆ ದೊಡ್ಡ ಸವಾಲಾಗುತ್ತಾರೆ. ಕೇವ ಹತ್ತು ಜನ ಮೂರು ದಿನಗಳ ಕಾಲ ಪೊಲೀಸರನ್ನು ಮತ್ತ ಎನ್‌ಎಸ್‌ಜಿ ಕಮಾಂಡೋಗಳನ್ನು ಹೈರಾಣಾಗಿಸುತ್ತಾರೆಂದ ಮತ್ತು ಕಾಶ್ಮೀರ ಕಣಿವೆಯನ್ನು ಹದ್ದುಬಸ್ತಿನಲ್ಲಿಡಲು ಅರ್ಧ ಮಿಲಿಯನ್ ಸೈನಿಕರು ಬೇಕಾಗಿದ್ದಾರೆಂದರೆ, ಲೆಕ್ಕಾ ಹಾಕಿ

ಭಯೋತ್ಪಾದನಾ ನಿಗ್ರಹ ಕಾನೂನುಗಳೂ ಉಪಯೋಗ ಬರುವುದಿಲ್ಲ, ಏಕೆಂದರೆ ಅವುಗಳು ಬಳಕೆಯಾಗುವುದ ಸರ್ಕಾರಗಳಿಗೆ ಬೇಕಿಲ್ಲದವರ ವಿರುದ್ಧ. ಆ ಕಾರಣಕ್ಕಾಗಿಯೆ ಇಲ್ಲಿಯ ತನಕ ಆ ಕಾನೂನಿನಡಿ ಕೇವಲ ಶೇ. ಎರಡರಷ ಪ್ರಕರಣಗಳು ಸಾಬೀತಾಗಿವೆ. ಆ ಕಾನೂನುಗಳು ಬೇಕಿಲ್ಲದ ರನ್ನು ಜಾಮೀನು ಕೊಡದೆ ಅನಿರ್ದಿಷ್ಟ ಕಾಲ ಜೈಲಿ ದೂಡುವುದಕ್ಕೆ ಉಪಯೋಗಕ್ಕೆ ಬರುತ್ತದಷ್ಟೆ. ಅಂದಹಾ ಮುಂಬೈ ಮೇಲೆ ದಾಳಿ ಮಾಡಿದಂತಹ ಭಯೋತ್ಪಾದಕರು ಜಾಮೀನು ಸಿಗುವುದಿಲ್ಲ ಅಥವಾ ಗಲ್ಲುಶಿಕ್ಷೆಗೆ ಗುರಿಯಾ ಬೇಕಾಗುತ್ತದೆ ಎಂಬ ಆತಂಕ ಖಂಡಿತವಾಗಿಯೂ ಕಾಡ ವುದಿಲ್ಲ, ಬದಲಾಗಿ ಅವರಿಗೆ ಬೇಕಿರುವುದೇ ಸಾವು.

ಭಯೋತ್ಪಾದನೆಯನ್ನು ನಿಗ್ರಹಿಸಬೇಕಿದ್ದರೆ (ಅದನ ಅಂತ್ಯಗೊಳಿಸಬೇಕೆಂಬ ಮುಗ್ಧತೆ ಅಗತ್ಯವಿಲ್ಲ) ನಾವು ಕನ್ನಡಿಯ ಕಾಣಿಸುತ್ತಿರುವ ಭೂತವನ್ನು ಕಣ್ಣಿಟ್ಟು ನೋಡಬೇಕಿದೆ. ನಾ ಕ್ರಮಿಸುತ್ತಿರುವ ದಾರಿಯಲ್ಲೀಗ ಕವಲು ಕಾಣಿಸುತ್ತಿದೆ. ಒಂದ ಮೇಲೆ 'ನ್ಯಾಯ' ಎಂದು ಬರೆದಿದ್ದರೆ ಇನ್ನೊಂದರ ಮೇ 'ಆಂತರಿಕ ಯುದ್ಧ' ಎಂದು ಬರೆಯಲಾಗಿದೆ. ಮೂರ ಮಾರ್ಗ ನಮ್ಮ ಮುಂದಿಲ್ಲ ಮತ್ತು ಹಿಂದಕ್ಕೆ ಸಾಗು ಸಾಧ್ಯತೆಗಳಿಲ್ಲ. ಆಯ್ಕೆ ಮಾಡಬೇಕಿದೆ.

(ಅರುಂಧತಿ ರಾಯ್ ಅವ ಲೇಖನದ ಸಂಕ್ಷಿಪ್ತ ಅನುವಾ

ಶಿವನಗೌಡನಾಯಕನ ಚೆಡ್ಡಿಯನ್ನು ಕಳಚಲು ದೇವದುರ್ಗ ರೆಡಿ!




ಶಿವನಗೌಡ ನಾಯಕ್

ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ' ಎಂಬಂತೆ ಹಣದ ದಾಹಕ್ಕಾಗಿಯೆ ಇತ್ತೀಚಿನ ಕೆಲವು ಪಿಂಜರಾಪೋಲು ರಾಜಕಾರಣಿಗಳು ತಾವು ಆಯ್ಕೆಯಾಗಿ ಬಂದಿದ್ದ ಪಕ್ಷವನ್ನು ತೊರೆದು ಚೆಡ್ಡಿ ತೊಟ್ಟುಕೊಂಡದ್ದು ನೀವೆಲ್ಲ ಬಲ್ಲ ಸಂಗತಿಯಾಗಿದೆ. ಆದರೆ ಈ ರಾಜಕಾರಣಿಗಳು ಮಾತ್ರ ಯಾವ ನಾಚಿಕೆಯೂ ಇಲ್ಲದೆ ಮತಕ್ಷೇತ್ರದ ಉದ್ಧಾರಕ್ಕಾಗಿ ಆಡಳಿತಾರೂಢಪಕ್ಷವಾದ ಬಿ.ಜೆ.ಪಿ.ಯನ್ನು ಸೇರಬೇಕಾಯಿತೆಂದು ಬೊಂಬಡಾ ಬಜಾಯಿಸುತ್ತಾ ನಡೆದಿದ್ದಾರೆ. ಇಂಥ ಚದ್ಮವೇಷಧಾರಿಗಳ ಕುತಂತ್ರವನ್ನು ಅರಿಯದಷ್ಟು ಮತದಾರ ಮುಗ್ಧನಾಗಿಲ್ಲ.

ಆದರೇನಂತೆ? ಈ ದುರುಳರ ದುಷ್ಟ ನೀತಿಯಿಂದಾಗಿಯೆ? ಈಗ ಕರ್ನಾಟಕದ ಎಂಟು ಕ್ಷೇತ್ರಗಳ ಮತದಾರರು ಮತ್ತೆ ಚುನಾವಣೆ ಎಂಬ ಹೊಲಸು ರಾಜಕಾರಣವನ್ನು ನೋಡಬೇಕಾಗಿ ಬಂದಿದೆ. ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿಯೂ ಶಿವನಗೌಡ ನಾಯಕನ ಹಣದ ಹಪಾಹಪಿತನದಿಂದಾಗಿ ಮತ್ತೆ ಚುನಾವಣಾ ಅಖಾಡ ಸಿದ್ಧವಾಗಿದೆ. ಆದರೆ ಈ ಬಾರಿ ಜನರಲ್ಲಿ ಈ ಆಟವನ್ನು ನೋಡಬೇಕಾದ ಹುರುಪಾಗಲಿ - ಹುಮ್ಮಸ್ಸಾಗಲಿ ಇಲ್ಲವೆ ಇಲ್ಲ, ಯಾರು ಸೋಲುತ್ತಾರೆ, ಇನ್ನಾರು ಗೆಲ್ಲುತ್ತಾರೆ ಎಂಬ ಬಗ್ಗೆಯೂ ಕನಿಷ್ಠ ಕುತೂಹಲಗಳೂ ಇಲ್ಲ.

ಆದರೆ ಪಕ್ಷದ ನಾಯಕರಿಗೆ ಮಾತ್ರ ತಾವು ಗೆದ್ದು - ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಬೇಕೆಂಬ ಹ್ಯಾವ ಹೊಕ್ಕೊಂಡು ಒಂದೆ ಸಮ ಅಂಡುಸುಟ್ಟ ಬೆಕ್ಕಿನಂತೆ ತಿರುಗುತ್ತಿದ್ದಾರೆ. ಕರ್ನಾಟಕ ಸರಕಾರದ ಗ್ರಂಥಾಲಯ ಸಚಿವನಾಗಿದ್ದುಕೊಂಡು ಶಿವನಗೌಡ ನಾಯಕ ಇಡೀ ಕರ್ನಾಟಕವನ್ನು ಒಂದು ಬಾರಿಯಾದರೂ ಸುತ್ತಿದನೋ ಬಿಟ್ಟನೋ ಗೊತ್ತಿಲ್ಲ. ಆದರೆ ದೇವದುರ್ಗ ತಾಲೂಕನ್ನು ಮಾತ್ರ ಒಂದೆರಡು ಬಾರಿ ರೌಂಡು ಹೊಡೆದು ಸುಸ್ತಾಗಿರುವುದಂತೂ ಖರೆ. ಕೆಂಪುಗೂಟದ ಈತನ ಕಾರು ಬರೀ ದೇವದುರ್ಗ ಮತಕ್ಷೇತ್ರದಲ್ಲಿ ಧೂಳೆಬ್ಬಿಸುತ್ತ ತಿರುಗಾಡುತ್ತಿದ್ದದ್ದು ನೋಡಿದರೆ ಈತ ಮಂತ್ರಿಯಾಗಿರುವುದು ಇಡೀ ರಾಜ್ಯಕ್ಕಲ್ಲ, ದೇವದುರ್ಗಕ್ಕೆ ಮಾತ್ರ ಎಂದು ಮತದಾರ ಅಂದುಕೊಂಡದ್ದುಂಟು.



ಭಗವಂತ್ ನಾಯಕ್

ಹೈದರಾಬಾದ್ ಕರ್ನಾಟಕದಲ್ಲಿ ಬರುವ ದೇವದುರ್ಗದ ಜನ ಈ ಉಪಚುನಾವಣೆಯಲ್ಲಿ ಪಾಲ್ಗೊಳ್ಳುವ ಮೊದಲು ನಿಜಕ್ಕೂ ಈ ಬಿಜೆಪಿ ಸರ್ಕಾರದಿಂದ ತಮ್ಮ ಪ್ರದೇಶ ಉದ್ಧಾರವಾಗುತ್ತಾ ಅಂತ ಒಂದು ಬಾರಿ ಯೋಚಿಸುವುದೊಳ್ಳೆಯದು. ರಾಜ್ಯದಲ್ಲಿ ಯಡ್ಡಿ ನೇತೃತ್ವದ ಚೆಡ್ಡಿ ಬಿಜೆಪಿ ಅಧಿಕಾರದ ಗದ್ದುಗೆಗೇರುತ್ತಿದ್ದಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಸಮಾನತೆಯನ್ನು ಹೋಗಲಾಡಿಸುತ್ತೇವೆ, ಇಲ್ಲಿನ ಬಡತನ ನಿರಕ್ಷರತನ ಹಾಗೂ ನಿರುದ್ಯೋಗವನ್ನು ಬೇರು ಸಮೇತ ಕಿತ್ತುಹಾಕುತ್ತೇವೆ ಎಂದು ದೊಡ್ಡದಾಗಿ ಬೋಂಗು ಬಿಟ್ಟಿತ್ತು. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ತಮ್ಮ ಈ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ಅವರು ಈಡೇರಿಸಿದರು ಎಂಬುದು ಕೇವಲ ಹೈದರಾಬಾದ್ ಕರ್ನಾಟಕದ ಜನರಿಗೆ ಮಾತ್ರ ಗೊತ್ತಿರುವ ವಿಚಾರ.

ರಾಜ್ಯದಲ್ಲಿಯೇ ಅತೀ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕವನ್ನು ಅಭಿವೃದ್ಧಿಪಡಿಸುವುದಕ್ಕಾಗಿಯೇ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಯಾಗಿದೆ. ಪ್ರತಿವರ್ಷ ರಾಜ್ಯ ಸರಕಾರದ ಬಜೆಟ್‌ನಲ್ಲಿ ಈ ಮಂಡಳಿಗೆ 32 ಕೋಟಿ ರೂಪಾಯಿಗಳನ್ನು ತೆಗೆದಿಡಲಾಗುತ್ತದೆ. ಆದರೆ ಈ ವರ್ಷ ಈ ಮೊತ್ತದಲ್ಲಿ ದಿಢೀರನೇ 10 ಕೋಟಿ ರೂಪಾಯಿಗಳನ್ನು ಬಿಜೆಪಿ ಸರ್ಕಾರ ಕಡಿಮೆ ಮಾಡಿತು. ಯಾಕೆಂದರೆ, ಶ್ರೀಮಂತ ಮಠಮಾನ್ಯಗಳಿಗೆ ಕೊಡುವುದಕ್ಕೆ ಆ ಹಣ ಬೇಕಾಗಿತ್ತು. ಇನ್ನೂ ನೇರವಾಗಿ ಹೇಳಬೇಕೆಂದರೆ, ಬಿಜೆಪಿ ಸರ್ಕಾರ ಹೈದರಾಬಾದ್ ಕರ್ನಾಟಕದ ಬಡವರ ಅನ್ನವನ್ನು ಕಿತ್ತುಕೊಂಡು ರಾಮಚಂದ್ರಾಪುರದ ರಾಘವೇಶ್ವರನಂಥ ಶ್ರೀಮಂತ ಬ್ರಾಹ್ಮಣರಿಗೆ ಕೊಟ್ಟಿತು. ಅದೂ ಹೋಗಲಿ ಬಿಡಿ. ಈ ದಟ್ಟ ದರಿದ್ರ ನಾಡಿನ ಅಭಿವೃದ್ಧಿಗಾಗಿ ಉಳಿದ 22 ಕೋಟಿ ರೂಪಾಯಿಯನ್ನಾದರೂ ಖರ್ಚು ಮಾಡಿತೆ? ಖಂಡಿತಾ ಇಲ್ಲ. ದುಡ್ಡು ಮೀಸಲಿರಿಸಿ ಒಂದು ವರ್ಷ ಆಗುತ್ತಾ ಬಂದರೂ, ಇಲ್ಲಿಯವರೆಗೆ ಸರ್ಕಾರ ಬಿಡುಗಡೆ ಮಾಡಿರುವುದೂ ಕೇವಲ ಎರಡು ಕೋಟಿ ರೂಪಾಯಿ ಮಾತ್ರ!



ಡಾ. ರಘು

ಈಗ ಹೇಳಿ ದೇವದುರ್ಗದ ಜನ ಬಿಜೆಪಿಗೆ ಯಾವ ಕಾರಣಕ್ಕೆ ಓಟು ಹಾಕಬೇಕು? ಹೈದರಾಬಾದ್ ಕರ್ನಾಟಕದ ಬಗ್ಗೆ ಉದಾಸೀನ, ನಿರ್ಲಕ್ಷ್ಯ ತೋರುತ್ತಿರುವುದಕ್ಕಾ? ಬಿಜೆಪಿಯನ್ನು ಗೆಲ್ಲಿಸಿ ತಾವೇ ಮಣ್ಣು ತಿನ್ನುವುದಕ್ಕಾ? ದೇವದುರ್ಗದ ಜನ ಯಡ್ಡಿಯ ಈ ರೀತಿಯ ಕಣ್ಣಾಮುಚ್ಚಾಲೆಯನ್ನು ಅರಿಯದಷ್ಟು ಅಬ್ಬೆಪಾರಿಗಳಲ್ಲ. ಅದಕ್ಕಾಗಿಯೇ ಈ ಬಾರಿ ಶಿವನಗೌಡ ಎಂಬ ಚೆಡ್ಡಿ ಆಸಾಮಿಯ ಚೆಡ್ಡಿ ಕಳಚಲೇಬೇಕೆಂದು ಮತದಾರರು ತೀರ್ಮಾನಿಸಿದಂತಿದೆ.

ಉತ್ತರ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ಪ್ರೊ.ಡಿ.ಎಂ.ನಂಜುಂಡಪ್ಪನವರು ಸಿದ್ಧಪಡಿಸಿ ಸಲ್ಲಿಸಿದ್ದ ವರದಿಯನ್ನು ಅನುಷ್ಠಾನಗೊಳಿಸುವುದಾಗಿ ಯಡ್ಡಿ ಭಾರಿ ಬೊಗಳೆ ಬಿಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಅದಕ್ಕಾಗಿ ಶಶಿಲ ನಮೋಶಿ ಎಂಬ ಎಂ.ಎಲ್.ಸಿ.ಯನ್ನು ಅಧ್ಯಕ್ಷನನ್ನಾಗಿ ಕುಳ್ಳಿರಿಸಿ ಶಿಫಾರಸು ಮಾಡುವ ಕೆಲಸ ಮಾಡಿದ್ದೂ ಆಗಿದೆ. ಆದರೆ ಕೆಲಸ ಮಾತ್ರ ಏನೂ ಆಗಿಲ್ಲ. ಶಶಿಲ ನಮೋಶಿಗೆ ಅಧ್ಯಕ್ಷಗಿರಿಯ ಕುರ್ಚಿಕೊಟ್ಟು ಆತನನ್ನು ಸಂಪ್ರೀತಗೊಳಿಸುವಂತೆ ಮಾಡಿ, ಇನ್ನೊಂದು ಕಡೆ ಹೈದ್ರಾಬಾದ ಕರ್ನಾಟಕದ ಜನತೆಯನ್ನು ತಣ್ಣಗೆ ಕುಳಿತುಕೊಳ್ಳುವಂತೆ ನೋಡಿಕೊಳ್ಳುತ್ತಿದೆ.

ಲೋಕಸಭಾ ಸದಸ್ಯ ವೆಂಕಟೇಶ್ ನಾಯಕ ಶಿವನಗೌಡನ ಎದುರು ಮೊನ್ನಿನ ಚುನಾವಣೆಯಲ್ಲಿ ಸೋತು ಹೋಗಿದ್ದರೂ ತನ್ನ ಮೀಸೆ ಮಣ್ಣಾಗಿಲ್ಲ ಎನ್ನುವಂತೆ ಈ ಬಾರಿ ತನ್ನ ಕುಲಪುತ್ರ ಭಗವಂತರಾಯ ನಾಯಕನನ್ನು ಅಖಾಡಕ್ಕೆ ಇಳಿಸಿದ್ದಾನೆ. ಈ ಕುಲಪುತ್ರ ಎಂಥ ಕಾಮಾಂಧ ಎನ್ನುವುದು ಶರಣಮ್ಮ ಕಾಮರಡ್ಡಿ ಅವರ ಮಗಳ ಪ್ರಕರಣದಿಂದ ಇಡೀ ರಾಜ್ಯಕ್ಕೆ ರಾಜ್ಯವೇ ಕೊಂಡಾಡುತ್ತದೆ. ಈತನ ಸಹೋದರ ರಾಜಶೇಖರ ನಾಯಕನಂತೂ ಮಂಗಳಾ ನಾಯಕಳ ಜೊತೆ ಚಕ್ಕಂದವಾಡಿ ಅವಳನ್ನು ಕೊಲೆ ಮಾಡಿಸಿದ್ದು ಯಾರೂ ಮರೆತಿಲ್ಲ. ಸ್ವತಃ ತಮ್ಮ ಹುಟ್ಟೂರಾದ ಅರಕೇರಿಯಲ್ಲಿ ಚಂದುಳ್ಳ ಅಂಗನವಾಡಿ ಕಾರ್ಯಕರ್ತೆಯೂ ಬಚಾವಾಗಿಲ್ಲ. ಇಷ್ಟೆಲ್ಲ ರಾಡಿ ಇಟ್ಟುಕೊಂಡು ವೆಂಕಟೇಶನಾಯಕ ಯಾವ ಧೈರ್ಯದ ಮೇಲೆ ದೇವದುರ್ಗದ ಮತಕ್ಷೇತ್ರಕ್ಕೆ ತನ್ನ ಕುಲಪುತ್ರನನ್ನು ಎಂಎಲ್ಎನನ್ನಾಗಿ ಮಾಡಬೇಕೆಂದು ಬಯಸಿದ್ದಾನೋ ತಿಳಿಯುತ್ತಿಲ್ಲ.

ಹೀಗಾಗಿ ಇಲ್ಲಿ ಅನಿವಾರ್ಯ ಆಯ್ಕೆ ಎಂಬಂತೆ ಡಾ. ರಘು ಜೆಡಿಎಸ್‌ದಿಂದ ಸ್ಪರ್ಧಿಸಿದ್ದಾನೆ. ದೇವೇಗೌಡರು ಕೂಡ ಡಾ. ರಘು ಗೆಲ್ಲಬೇಕೆಂದೇ ಯಾವ್ಯಾವ ಪಟ್ಟುಗಳನ್ನು ಹಾಕಬೇಕೋ ಅವನ್ನೆಲ್ಲ ಈ ಕ್ಷೇತ್ರದಲ್ಲಿ ಈಗಾಗಲೆ ಹಾಕಿದ್ದಾರೆ. ಆಲ್ಕೋಡ ಹನುಮಂತಪ್ಪ ಎಂಬ ಮಾಜಿ ಮಂತ್ರಿ ಹಾಗೂ ರಂಗಪ್ಪ ನಾಯಕ ಎಂಬ ಮಾಜಿ ಲೋಕಸಭಾ ಸದಸ್ಯನಿಗೆ ಒಪ್ಪಿಸಿದ್ದಾಗಿದೆ.

ಹೀಗಾಗಿ ಇಲ್ಲಿ ಚುನಾವಣೆ ಬಿರುಸಿನಿಂದ ಸಾಗಿರುವುದು ಜೆಡಿಎಸ್ ಹಾಗೂ ಬಿಜೆಪಿಯ ನಡುವೆ ಮಾತ್ರ. ಚೆಡ್ಡಿ ಸರಕಾರದ ಹಕೀಕತ್ತು, ಬೊಂಬಡಾ ಬಜಾಯಿಸುವ ಚಾಳಿಯನ್ನು ಗಮನಿಸಿರುವ ಇಲ್ಲಿನ ಮತದಾರ ಅನಾಯಾಸವಾಗಿ ಈ ಬಾರಿ ಶಿವನಗೌಡ ಚೆಡ್ಡಿಯನ್ನು ಕಳಚಿ ಬೆತ್ತಲು ಮಾಡುವುದಂತೂ ಗ್ಯಾರಂಟಿ.

■ ವಿಶ್ವಾರಾಧ್ಯ ಸತ್ಯಂಪೇಟೆ

ನೀನೆ ಕೂಗುತಿದ್ದ ಘೋಷಣೆ ಅಲವೇನಣ್ಣ!



ಚಿಕ್ಕಮಗಳೂರಿನ ಸೀದುಎಗ್ಗೆ ಶಾಸಕ ಸಿ.ಟಿ. ರವಿ ತನ್ನ ಖಯಾಲಿ ಕೃತ್ಯವನ್ನು ಬಹಿರಂಗವಾಗೇ ಮುಂದುವರಿಸಿದ್ದಾನಂತಲ್ಲಾ, ಬಾಬಾಬುಡನ್‌ಗಿರಿಯಲ್ಲಿ ಹಿಂದಿನ ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಕೋರ್ಟಿನ ಆಜ್ಞೆಯಿದ್ದರೂ ಹವನಹೋಮವನ್ನೆಲ್ಲಾ ಮಾಡಿಸಿ, ಬಾಬಾಬುಡನ್ ಗಿರಿ ತುಂಬ ಹೊಗೆ ಎಬ್ಬಿಸಿದ ರವಿ ಅನುಸೂಯಾ ಪೂಜೆ ಎಂಬ ಅಡ್ಡಕಸುಬಿ ಕೆಲಸ ಮಾಡಲೆಂದು ಹಾದಿಬೀದಿಯಲ್ಲಿ ನಿಂತಿದ್ದ ಮಹಿಳೆಯರಿಗೆಲ್ಲಾ ಕಾಸು ಕೊಟ್ಟು ಕರೆದುಕೊಂಡು ಹೋಗಿದ್ದನಂತಲ್ಲಾ, ರವಿ ಮೂವತ್ತು ಸಾವಿರ ಜನ ನಿರೀಕ್ಷಿಸಿದರೆ, ಬಂದವರ ಸಂಖ್ಯೆ ಒಂದೂ ಕಾಲು ಸಾವಿರವನ್ನು ದಾಟಲಿಲ್ಲವಂತಲ್ಲಾ, ಇದರಿಂದ ಕುಪಿತಗೊಂಡ ರವಿ ಹಲ್ಲು ಮಸೆಯುತ್ತಿರುವಾಗಲೇ ಭಜರಂಗಿಯೊಬ್ಬ ಅಶ್ಲೀಲ ಘೋಷಣೆ ಹಾಕಿಬಿಟ್ಟನಂತಲ್ಲಾ, ಇದರಿಂದ ಇನ್ನೂ ಸಿಟ್ಟಾದ ರವಿ ಭಜರಂಗಿಯ ಬಲಗೆನ್ನೆಗೆ ಬಾರಿಸಿಬಿಟ್ಟನಂತಲ್ಲಾ, ಕಂಗಾಲಾದ ಭಜರಂಗಿ "ಇದ್ಯಾಕಣ್ಣ?" ಎಂದು ಕೇಳಲಾಗಿ "ಅನ್ಯ ಧರ್ಮೀಯರ ಬಗ್ಗೆ ಅಶ್ಲೀಲವಾಗಿ ಕೂಗುವಂತಿಲ್ಲಾ" ಎಂದನಂತಲ್ಲ, ಅದಕ್ಕೆ ಭಜರಂಗಿ "ಇದಕ್ಕಿಂತ ಹೊಲಸಾಗಿ ಮೊದಲು ನೀನೇ ಕೂಗುತ್ತಿರಲಿಲ್ಲವೆ?" ಎಂದನಂತಲ್ಲಾ, ಥೂತ್ತೇರಿ!

* * * * * *

"ಜಾತಿ ರಾಜಕಾರಣ ಸಂಕುಚಿತವಾದದ್ದು, ಅದಕ್ಕಿಂತಲೂ ಸಂಕುಚಿತವಾದದ್ದು ಕುಟುಂಬ ರಾಜಕಾರಣ" ಎಂಬ ವ್ಯಾಪಕ ಚರ್ಚೆ ಕರ್ನಾಟಕದ ತುಂಬಾ ನಡೆಯುತ್ತಿರುವುದನ್ನು ಕೇಳಿಸಿಕೊಂಡ ಮಾಜಿ ಪ್ರಧಾನಿಗಳು "ಇಡೀ ದೇಶದ ತುಂಬ ಎಲ್ಲರೂ ಮಾಡುತ್ತಿರುವುದನ್ನೇ ನಾನು ಮಾಡುತ್ತಿರುವುದು" ಎಂದು ಮಾರುತ್ತರ ಕೊಟ್ಟಿದ್ದಾರಂತಲ್ಲಾ, ಇದಕ್ಕೆ ಚೆಡ್ಡಿಗಳು "ಇರಬಹುದು. ಆದರೆ ಒಬ್ಬ ಮಗ ಮುಖ್ಯಮಂತ್ರಿ, ಮತ್ತೊಬ್ಬ ಭಾರಿ ಸಚಿವ, ಮತ್ತೊಬ್ಬ ಮಗ ಮುಖ್ಯಮಂತ್ರಿ ಪೈಲು ವಿಲೇವಾರಿ ಇತ್ಯಾದಿ ಮಾಡುತ್ತ ಇದ್ದ, ಈಗೊಬ್ಬ ಸೊಸೆ ಶಾಸಕಿಯಾಗುತ್ತಿರುವುದು ದೇಶದ ಯಾವ ಭಾಗದಲ್ಲಾದರೂ ನಡೆದಿದೆಯೇ" ಎಂದು ಮಾಜಿ ಪ್ರಧಾನಿಯವರನ್ನು ಕೇಳಿದವಂತಲ್ಲಾ, ಇದರಿಂದ ಕೆಂಡಮಂಡಲವಾದ ದೇವೇಗೌಡರು "ನಾನು ನನ್ನ ವಯೋಮಾನದವರಿಗೆ ಮಾತ್ರ ಉತ್ತರಿಸುತ್ತೇನೆ. ಅದರಲ್ಲೂ ದೇಶದ ದೊಡ್ಡ ರಾಜಕಾರಣಿಗಳ ಪ್ರಶ್ನೆಗೆ ಮಾತ್ರ ಉತ್ತರಿಸುತ್ತೇನೆ. ನೀವು ಇನ್ನೂ ಪ್ರಶ್ನೆಗಳನ್ನು ಕೇಳುವುದಾದರೆ ಭವಾನಿಯನ್ನು ನಿಲ್ಲಿಸಿ, ಚಿನ್ನಮ್ಮನನ್ನು ಎಮ್ಮೆಲ್ಸಿ ಮಾಡಿಬಿಡುತ್ತೇನೆ" ಎಂದು ಹೆದರಿಸಿದರಂತಲ್ಲಾ, ಥೂತ್ತೇರಿ!

* * * * * *

ಈಗ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಖಂಡಿತ ಅಕ್ರಮ ನಡೆದೇ ನಡೆಯುತ್ತದೆಂದು ಹೇಳಿಕೆ ನೀಡುತ್ತಿರುವ ಕುಮಾರಸ್ವಾಮಿಯವರನ್ನು ಈ ಬಗ್ಗೆ ವಿಚಾರಿಸಿ, ಇನ್ನಷ್ಟು ಮಾಹಿತಿ ತಿಳಿದುಕೊಂಡು ಸಂಬಂಧಿಸಿದ ಅಧಿಕಾರಿಗಳು, ಮತದಾರರು ಮತ್ತು ಪಾರ್ಟಿಗೆ ತಿಳಿಸುವ ಜವಾಬ್ದಾರಿ ನಮ್ಮ ಮೇಲೂ ಇರುವುದರಿಂದ ಫೋನ್ ಮಾಡಿದರೆ ಕುಮಾರಣ್ಣನ ಮೊಬೈಲ್ ರಿಂಗಾಯ್ತು.

ರಿಂಗ್ ಟೋನ್: "ನಿನ್ನಾ ಪೂಜೆಗೆ ಬಂದೇ ಮಾದೇಶ್ವರಾ ನಮ್ಮ ಕರುಣದಿಕಾಯೊ...."

"ಹಲೋ ಯಾರೂ?"

ಥೂತ್ತೇರಿ

ಯಾಹೂ

"ನಾನು ಸಾರ್ ಯಾಹೂ. ಒಂದು ವಿಷಯ ಕೇಳನಾ ಅಂತ, ಎಲ್ಲಿದ್ದಿರಿ ಸಾ?"

"ಇಲ್ಲೆ ತುರುವೇಕೆರೆಲಿದ್ದಿನಿ. ಅದೇನು ಕೇಳಿ?"

"ಏನಿಲ್ಲಾ, ಈ ಚುನಾವಣೆಲಿ ಅಕ್ರಮ ನಡಿಯುತ್ತೆ ಅಂದ್ರಲ್ಲ, ನಿಜವೆ?"

"ನಿಜವೆ ಅಂತ ಕೇಳ್ತಿರಲ್ಲ, ಯಲ್ಲಾ ಚುನಾವಣೆಲೂ ಅದು ಇದ್ದದ್ದೆ."

"ಈ ಚುನಾವಣೆಲಿ ಏನು ನಡಿಬವುದು ಸಾರ್?"

"ನನ್ನ ಅನುಭವದ ಪ್ರಕಾರ ಹೇಳೋದಾದ್ರೆ ಪಾರ್ಟಿಯ ಕಾರ್ಯಕರ್ತರು ಅಂತ ಏನಿದಾರೆ ಅವ್ರುರು ಮತದಾರರಿಗೆ ಏನೇನೂ ಬೇಕೊ ಅದನೆಲ್ಲಾ ಹಂಚೊ ಒಂದು ಪ್ರಕ್ರಿಯೆ ಏನಿದೆ ಅದನ್ನ ಚಾಚೂತಪ್ಪದೆ ಮಾಡತಕ್ಕಂತ ಒಂದು ಕೃತ್ಯನ ವ್ಯವಸ್ಥಿತವಾಗಿ ಮಾಡತಕ್ಕಂತ ಸಂಚನ್ನ ರೂಪಿಸಿದಾರೆ."

"ಏನೇನು ಹಂಚಬವುದು ಸಾರ್?"

"ಅದನ್ನ ನಾವು ಖಚಿತವಾಗಿ ಹೇಳೋದು ಕಷ್ಟ ಆಗಬವುದು. ಆ ಪಾರ್ಟಿಯವರು ಏನೇನು ಆಮಿಷಗಳನ್ನು ಸಂಗ್ರಹಿಸಿದಾರೆ ಮತ್ತು ಯಾವ ತರದ ಪದಾರ್ಥಗಳಿಗೆ ಆರ್ಡರು ಕೊಟ್ಟು ತರಿಸಿದಾರೆ ಅನ್ನೊ ಮಾಹಿತಿ ನಮಗೆ ಸಿಕ್ಕಬೇಕಿದೆ ಅಷ್ಟೆ."

"ಪದಾರ್ಥಗಳನ್ನು ಹಂಚತರ ಸಾರ್?"

"ಹೌದು ಕಂಡ್ರಿ. ಕೆಲವು ಬಡವರ ಮನೆಲಿ ಟಿ.ವಿ. ಇರೋದಿಲ್ಲ, ಯುವಕರೇನಿದಾರೆ ಅವ್ರುರತ್ರ ಮೊಬೈಲ್ ಫೋನಿರಲ್ಲ, ಜಾಸ್ತಿ ಓಟು ಮಾಡಸತಕ್ಕಂತ ಕೆಲವು ಕಾರ್ಯಕರ್ತರೇನಿದಾರೆ ಅಂದ್ರೆ ಕೆಲವು ಜಾತಿ ಮುಖಂಡರೇನಿದಾರೆ ಅವ್ರುರಿಗೆ ವೆಹಿಕಲ್ ಕೂಡ ಕೊಡಸಬೇಕಾಗುತ್ತೆ, ಆಮೇಲೆ ಚುನಾವಣೆ ಮುಗಿಯೋವರಿಗೂ ಕೆಲವು ಮತದಾರರಿಗೆ ಮದ್ಯವನ್ನು ಸರಬರಾಜು ಮಾಡಬೇಕಾಗುತ್ತೆ, ಹಾಗೆ ಮಾಂಸದ ಅಡಿಗೆ ಏನಿದೆ ಅಂದ್ರೆ ಬಾಡೂಟ ಅದನ್ನೆಲ್ಲಾ ಅತ್ಯಂತ ಚನ್ನಾಗಿ ನೋಡಿಕೋಬೇಕಾಗುತ್ತೆ. ಇದಲ್ಲದೆ ಕ್ಯಾಶ್ ಕೂಡ ಹಂಚಬೇಕಾಗುತ್ತೆ."

"ದುಡ್ಡು ಯಾವ ತರ ಕೊಡ್ತರೆ ಸಾರ್?"

"ನಮ್ಮ ಒಂದು ಸುದೈವಕ್ಕೆ ಸ್ತ್ರೀಶಕ್ತಿ ಸಂಗಗಳು ಇರೋದ್ರಿಂದ ಹಣ ಹಂಚಕ್ಕೆ ಅಂತ ತೊಂದ್ರೆ ಆಗ್ತಾಯಿಲ್ಲ, ಪ್ರತಿಯೊಂದು ಮಹಿಳಾ ಸಂಗ ಏನಿದೆ ಆ ಪ್ರದೇಶದಲ್ಲಿ ಬರೋ ಮತದಾರರ್ರೇನಿದಾರೆ ಅವ್ರುರ ಲೆಕ್ಕ ತಗೊಂಡು ಒಂದು ಓಟಿಗಿಷ್ಟು ಅಂತ ಬಟಾವಡೆ ನಡೆಯುತ್ತೆ, ಅಕಸ್ಮಾತ್ ಸ್ತ್ರೀಸಗತಿಯೋರು ಇಟ್ಟುಕೊಂಡ್ರೂ ಒಂದೆರಡು ಸಾವ್ರರ ಇಟ್ಟಗಳತರೆ ವರತು ಕಾರ್ಯಕರ್ತರ ತರ ಪೂರಾ ಹಣವೆ ಇಟ್ಟುಗೊಳಲ್ಲ, ಆದ್ರಿಂದ ಹಿಂದಿಗಿಂತಲೂ ಈಗ ಹಣ ಹಂಚೋದು ಈಜಿ."

"ಟಿಫನ್‌ಕ್ಯಾರಿನೂ ಕೊಡ್ತರಂತೆ ನಿಜವಾ?"

"ಬರಿ ಟಿಫನ್ ಕ್ಯಾರಿ ಕೊಟ್ರೆ ಓಟು ಮಾಡ್ತಾರಾ? ಅದರೊಳಗೆ ಉಂಗುರ ಮೂಗುತಿ ಈ ಥರ ಏನಾದ್ರು ಗಿಫ್ಟ್ ಇಡಬೇಕಾಗುತ್ತೆ."

"ಚಾಮುಂಡೇಶ್ವರಿ ಚುನಾವಣೇಲಿ ನೀವು ಹಂಚಕ್ಕೆ ಅಂತ ತಂದಿದ್ದ ಟಿಫನ್ ಕ್ಯಾರಿಗಳಲ್ಲಿ ಇವ್ರುನೆಲ್ಲಾ ಇಟ್ಟಿದ್ರ ಸಾರ್?"

"ಇಲ್ಲ ಕಂಡ್ರಿ. ಆ ರಾತ್ರಿ ಕ್ಯಾರಿಯರ್ ತಯಾರು ಮಾಡಿ ಕೊಡಬೇಕು ಅನ್ನದ್ರಲ್ಲಿ ಯಾರೊ ಕಿಡಿಗೇಡಿಗಳು ಮಾಹಿತಿ ಕೊಟ್ಟು ಯಡವಟ್ಟಾಯ್ತು, ಇಲ್ದೆಯಿದ್ರೆ ಸಿದ್ದರಾಮಯ್ಯ ಇಪ್ಪತ್ತು ಸಾವ್ರರ ಓಟಲ್ಲಿ ಸೋಲ್ತಿದ್ರು."

"ಈಗ ನಿಮ್ಮ ಚುನಾವಣೇಲಿ ಏನು ಕೊಡಬೇಕು ಅಂತ ಇದ್ದಿರಿ ಸಾರ್?"

"ಇನ್ನು ಏನೂ ತೀರ್ಮಾನ ಮಾಡಿಲ್ಲ, ವರಿಷ್ಠರು ತೀರ್ಮಾನ ತಗೊತರೆ."

"ವರಿಷ್ಠರು ಅಂದ್ರಿನ್ನಾರು ದೇವೇಗೌಡ್ರಲ್ಲವ ಸಾರ್?"

"ಅಲ್ಲ, ಇದಕ್ಕೆ ಬೇರೆ ವರಿಷ್ಠರವ್ರುರೆ."

"ಥೂತ್ತೇರಿ!!!" ■

ಸೀರ್ಝುರ್ ಹೇಮಂತನ ರಣತಂತ್ರ

ಬೋನಿಗೆ ಬಿದ್ದ ಸುನೀಲ

ಶಿಕಾರಿಗೆ ಹೋದವನೇ ಬೋನಿಗೆ ಬಿದ್ದರೆ ಹೇಗಿರುತ್ತೆ?

ಯಾವತ್ತೂ ಯಾಮಾರದ, ಸುಲಭಕ್ಕೆ ಪೊಲೀಸರ ಕಣ್ಣಿಗೂ ಸಿಕ್ಕದ ಸೈಲೆಂಟ್ ಸುನೀಲನನ್ನು ಬಿಡದಿಯ ಸಬ್ ಇನ್ಸ್‌ಪೆಕ್ಟರ್ ಸತ್ಯನಾರಾಯಣ ಹೆಡೆಮುರಿ ಕಟ್ಟಿ ಜೈಲಿಗೆ ದಬ್ಬಿದ್ದಾರೆಂದರೆ ಯಡವಟ್ಟಾಗಿದ್ದು ಎಲ್ಲಿ?

ಬಹುಶಃ ಪರಪ್ಪನ ಅಗ್ರಹಾರ ಜೈಲಲ್ಲಿ ತನ್ನ ಗಾಯ ನೆಕ್ಕುತ್ತಿರುವ ಹಂತಕ ಸುನೀಲನಿಗೂ ಅರ್ಥವಾಗದ ಪ್ರಶ್ನೆಯಿದು.

ದಾಸರಹಳ್ಳಿಯ ಸೀರ್ಝುರ್ ಹೇಮಂತ ಈ ಪಾಟ ತಲೆ ಓಡಿಸುತ್ತಾನೆಂದು ಆತನಿಗಾದರೂ ಹೇಗೆ ಗೊತ್ತಾಗಬೇಕು? ಡಿಸೆಂಬರ್ ಹನ್ನೊಂದರ ಸಂಜೆ ರಾಮನಗರದ ಸಬ್ ಜೈಲಿನಿಂದ ಸೀರ್ಝುರ್ ಹೇಮಂತ ಹೊರಬಿದ್ದೇ ತೀರುತ್ತಾನೆ. ಆತನ ಜೊತೆಗೆ ಮೆಂಟ್ಲು ಪ್ರಕಾಶನ ಹಂತಕ ಕೋಳಿ ರಮೇಶನೂ ಇರುತ್ತಾನೆ.



ಹಾಗೊಮ್ಮೆ ಹೇಮಂತನ ಸೇಫ್ಟಿಗೆಂದು ತನ್ನ ದುಷ್ಮನ್ ಬ್ರೇಕ್ ಜಗ್ಗಿಯೇನಾದರೂ ಬಂದನೆಂದರೆ ಅದು ಬಂಪರ್ ಲಾಟರಿಯೇ. ಒಂದೇ ಏಟಿಗೆ ತನ್ನೆಲ್ಲಾ ವೈರಿಗಳನ್ನೂ ಒಟ್ಟೊಟ್ಟಿಗೇ ಮುಗಿಸಿ ಬಿಟ್ಟರೆ ಬೆಂಗಳೂರಿನ ಮಟ್ಟಿಗೆ ನನಗೆ ಎದುರಾಳಿಗಳೇ ಇಲ್ಲದಂತಾಗುತ್ತದೆ. ತನ್ನ ಪ್ರಾಣಕ್ಕಿದ್ದ ದೊಡ್ಡ ಆಪತ್ತೊಂದು ನಿವಾರಣೆಗೊಂಡಂತಾಗುತ್ತದೆ!

ಇಂಥ ಲೆಕ್ಕ ಹಾಕಿಯೇ ಡಿಸೆಂಬರ್ 11 ರ ಬೆಳಿಗ್ಗೆ ಮೂರು ಇನ್ನೋವಾ ಗಾಡಿಗಳ ತುಂಬ ಹುಡುಗರನ್ನು ಹಾಕಿಕೊಂಡು ರಾಮನಗರದ ಹಾದಿ ಹಿಡಿದವನು ಸೈಲೆಂಟ್ ಸುನೀಲ. ಜೊತೆಗಿದ್ದ ಹಂತಕರಾದರೂ ಎಂಥವರು?

ಶ್ರೀರಾಂಪುರದ ಚಕ್ರೆಯ ತಮ್ಮ ಡ್ಯಾನಿಯಲ್. ಖತರ್‌ನಾಕ್ ತೊಡ್ಡ ಮಂಜ. ಪಳಗಿದ ಬ್ಯಾಟ್ಸ್‌ಮನ್ ಜಸವಂತ್ ಸಿಂಗ್ ಮತ್ತು ಚುರುಕು ರೌಡಿ ಬಾಲಸುಬ್ರಮಣಿ ಸೇರಿದಂತೆ ಎರಡು ದಜನ್ ಹಂತಕರ ಹಿಂಡನ್ನೇ ಕಟ್ಟಿಕೊಂಡು ಸೀರ್ಝುರ್ ಹೇಮಂತನ ಮೇಲೆ ದಂಡೆತ್ತಿ ಹೋಗಿದ್ದ ಸುನೀಲನಿಗೆ ತಾನು ಅನಾಯಾಸವಾಗಿ ರಾಮನಗರ ಪೊಲೀಸರ ಬೋನಿಗೆ ಬೀಳುತ್ತೇನೆಂದೂ, ಅದು ಹೇಮಂತನೇ ಹೆಣೆದ ಬಲೆಯೆಂದೂ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು.

ಅಷ್ಟಕ್ಕೂ ತನ್ನ ಕಡುವೈರಿ ಬ್ರೇಕ್ ಜಗ್ಗಿಯನ್ನು ಕಡೆಗಣಿಸಿ ಸೀರ್ಝುರ್ ಹೇಮಂತನನ್ನು ಮೊದಲು ನಿಕಾಲಿ ಮಾಡಲು ತಾನೇ ಆಖಾಡಕ್ಕೆ ಧುಮುಕುವಷ್ಟು ತುರ್ತಾದ ಹಗೆಯಾದರೂ ಸುನೀಲಗೇನಿತ್ತು? ಬಹುಶಃ ಬೆಂಗಳೂರು ಅಂಡರ್‌ವರ್ಲ್ಡ್‌ನ ಊಹೆಗೇ ನಿಲುಕದ ಸಂಗತಿಯಿದು. ನಿನ್ನೆ ಮೊನ್ನೆಯತನಕ ಕಡಬಗೆರೆಯ ಪಾಯ್ಸನ್ ರಾಮನ ಬಲಗೈ ಬಂಟನಂತಿದ್ದವನು ದಾಸರಹಳ್ಳಿಯ ಸೀರ್ಝುರ್ ಹೇಮಂತ. ಕೇಬಲ್ ಶ್ರೀಧರನ ಪರ ನಿಂತು ಪ್ರಸಾದಿ ಹತ್ಯೆಗೆ ಕೈಜೋಡಿಸಿದ ಹೇಮಂತ ಒಂದಾನೊಂದು ಕಾಲಕ್ಕೆ ತನ್ನ ಜೊತೆಗಾರನಂತಿದ್ದ ಮೆಂಟ್ಲು ಪ್ರಕಾಶನ ವಿರುದ್ಧವೇ ತಿರುಗಿಬಿದ್ದ, ಅದಕ್ಕೆ ಕಾರಣ ಕೂಡ ಕೇಬಲ್ ಶ್ರೀಧರನೇ.


ಹೇಮಂತ

ಕೇಬಲ್ ದಂಧೆಯ ಪಾಲಿಗಾಗಿ ಸಾಕಿ ಬೆಳೆಸಿದ ಧಣಿ ಶ್ರೀಧರನನ್ನೇ ಮುಗಿಸುತ್ತೇನೆಂದು ಮೆಂಟ್ಲು ಪ್ರಕಾಶ ಕ್ಯಾತೆ ತೆಗೆದಾಗ ಶ್ರೀಧರನ ಬೆನ್ನಿಗೆ ನಿಂತವನು. ಹೇಮಂತ. ಆತ ಮಹಾನ್ ಲೆಕ್ಕಾಚಾರಿ. ದೊಡ್ಡ ಲಾಭ ವಿಲ್ಲದೇ ಡೀಲಿಗಿಳಿಯಲಾರ. ಚಿಲ್ಲರೆ ವಿಷಯಕ್ಕೆ ದುಷ್ಮನಿ ಕಟ್ಟಿಕೊಳ್ಳುವವನಲ್ಲ, ಅಂಥದೊಂದು ಲೆಕ್ಕ ಹಾಕಿಯೇ ಪಾಯ್ಸನ್ ರಾಮನ ಜೊತೆ ಬಿದ್ದ. ಯಾವತ್ತು ಸುಂಕದಕಟ್ಟೆಯ ಇಸ್ಪೀಟ್ ಕ್ಲಬ್ ಒಂದರ ಮಾಮೂಲಿಗೆ ಸುನೀಲ ಕೈಯಿಟ್ಟಿದ್ದು ಗೊತ್ತಾಯಿತೋ ಹುಷಾರಾದ ಹೇಮಂತ ಸುನೀಲನನ್ನು ತಡವಿಕೊಂಡ. ಮಾಗಡಿ ರಸ್ತೆಯ ಜೆ.ಕೆ. ದಾಬಾದ ಪಕ್ಕದಲ್ಲೇ ತನ್ನ ಇಸ್ಪೀಟ್ ಕ್ಲಬ್ ತೆರೆದಿದ್ದ ನಟೋರಿಯಸ್ ಜೂಗಾರಿ ದೊರೆ ಕ್ಲಬ್ ನಾರಾಯಣ ವಾರಂಪ್ರತಿ ಸುನೀಲನಿಗೆ 25 ಸಾವಿರ ರೂಪಾಯಿಯ ಹಫ್ತಾ ಕೊಡುತ್ತಿದ್ದ. ಇಸ್ಪೀಟ್ ಕ್ಲಬ್ ಇದ್ದ ಬಿಲ್ಡಿಂಗ್‌ನಲ್ಲೇ ಸ್ಕಿಲ್‌ಗೇಮ್ ಕೂಡ ಶುರು ಹಚ್ಚಿಕೊಂಡಿದ್ದ ನಾರಾಯಣನನ್ನು ಲಾಕ್ ಮಾಡಿಕೊಂಡ ಹೇಮಂತ ಆತನ ಎದುರೇ ಸುನೀಲನಿಗೆ ಫೋನೆತ್ತಿಕೊಂಡು ಆವಾಜುಬಿಟ್ಟ. "ನೀನ್ಯಾವ ದೊಡ್ಡ ರೌಡಿನೋ? ಆ ಮುದುಕ ಚಿಕನ್ ಕಣ್ ರಾಜೇಂದ್ರನನ್ನು ಮುಗಿಸಿದ ಮಾತ್ರಕ್ಕೇ ನೀನು ಕಿಲಾಡಿನಾ? ಇದೇನಿದ್ರೂ ನನ್ನ ಏರಿಯಾ. ಇಲ್ಲಿಗೇನಾದ್ರೂ ಕಾಲಿಟ್ರೆ ಅಂದ್ರೆ ಇದೇ ಸುಂಕದಕಟ್ಟೆ ಫುಟ್‌ಪಾತ್‌ಲ್ಲೇ ಹೆಣವಾಗ್ತೀಯ ಗೊತ್ತಾಯ್ತಾ?"

ಇದು ಸೀರ್ಝುರ್ ಹೇಮಂತನ ಮೀಟರು. ಇಲ್ಲಿಗೆ ವರ್ಷದ ಹಿಂದೆ ಹೀಗೆ ಏಕಾಏಕಿ ತನ್ನನ್ನು ತಡವಿಕೊಂಡ ಹೇಮಂತನಿಗೂ ಗಾಯತ್ರಿನಗರದ ಬ್ರೇಕ್ ಜಗ್ಗಿಗೂ ಆ ಹೊತ್ತಿಗಾಗಲೇ ನೆಂಟಸ್ತಿಕೆಯಾಗಿತ್ತು, ತನ್ನ ತಮ್ಮ ಪ್ರಸಾದಿಯ ಹತ್ಯೆಗೆ ಮೂಲ ಕಾರಣನಾಗಿದ್ದ ಮೆಂಟ್ಲು ಪ್ರಕಾಶನನ್ನು ಮೇಲೆಳೆದುಕೊಂಡಿದ್ದ ಹೇಮಂತನ ಜೊತೆ ಜಗ್ಗಿ ಕೈಜೋಡಿಸಲೇಬೇಕು ತಾನೆ?

ಅಲ್ಲಿಗೆ ಸುನೀಲನೂ ನಿರ್ಧರಿಸಿಬಿಟ್ಟ. ತನ್ನ ಕಡುವೈರಿ ಬ್ರೇಕ್ ಜಗ್ಗಿಗಿಂತಲೂ ಮೊದಲು ಹೇಮಂತನನ್ನು ಮುಗಿಸಬೇಕು! ಒಂದೆರಡು ಕಡೆ ಸುನೀಲನ ಗ್ಯಾಂಗ್ ಹೇಮಂತನಿಗಾಗಿ ಅಟೆಂಪ್ಟ್ ಮಾಡಿತಾದರೂ ಕೂದಲೆಳೆಯಲ್ಲಿ ಬಚಾವಾದ ಹೇಮಂತ ಇಲ್ಲಿಗೆ ಎಂಟು ತಿಂಗಳ ಹಿಂದೆ ತನ್ನ ಕೈಚಳಕ ತೋರಿಸಿಬಿಟ್ಟ. ಅದು ಮೆಂಟ್ಲು ಪ್ರಕಾಶನ ಹತ್ಯೆ. ಸದ್ದಿಲ್ಲದೇ ಕೋಳಿ ರಮೇಶನನ್ನು ರೆಡಿ ಮಾಡಿ ಉಪಾಯವಾಗಿ ಮೆಂಟ್ಲು ಪ್ರಕಾಶನನ್ನು ಸಾವನದುರ್ಗಕ್ಕೆ ಕರೆದೊಯ್ದು ಕೊಚ್ಚಿ ಹಾಕಿಸಿದ ಹೇಮಂತ ಜೈಲಲ್ಲಿ ಕೂತೇ ಇಷ್ಟೆಲ್ಲವನ್ನೂ ಸಾಧಿಸಿದ್ದ.

ತನ್ನ ರಿವಾಲ್ವರ್ ಸಮೇತ ಸಿಸಿಬಿಯ ಇನ್ಸ್‌ಪೆಕ್ಟರ್ ಬಾಳೇಗೌಡರ ಕೈಗೆ ಸಿಕ್ಕಿಬಿದ್ದು ಜೈಲು ಪಾಲಾಗಿದ್ದ ಹೇಮಂತ ಈ ಮಧ್ಯೆ ಜಾಮೀನಿನ ಮೇಲೆ ಹೊರಬಿದ್ದನಾದರೂ ಹೆಚ್ಚು ದಿನ ಇರಲಿಲ್ಲ, ಮೂರೇ ತಿಂಗಳಲ್ಲಿ ಮತ್ತೆ ಸಿಸಿಬಿ ಪೊಲೀಸರ ಕೈಗೆ ಸಿಕ್ಕಿಬಿದ್ದ. ಅದಕ್ಕೂ ಮುನ್ನ ತನ್ನ ಗಾಡ್‌ಫಾದರ್ ಪಾಯ್ಸನ್ ರಾಮನ ಜೊತೆ ಕಚ್ಚಾಡಿಕೊಂಡ. ಆತ ರಾಮನಗರ ಜೈಲಿಗೆ ಬಂದಿದ್ದು ಇಲ್ಲಿಗೆ ಮೂರು ತಿಂಗಳ ಹಿಂದೆ. ಅದು ಎಂಥಾ ಇಕ್ಕಟ್ಟಿನ ಪರಿಸ್ಥಿತಿಯೆಂದರೆ ಆ ಹೊತ್ತಿಗಾಗಲೇ ರಾಮನಗರ ಜೈಲಲ್ಲಿ ಮೈಸೂರಿನ ಅಪ್ಪಾ ಮಾದೇಶ ಆಧಿಪತ್ಯ ಸ್ಥಾಪಿಸಿದ್ದ. ಹೇಳಿಕೇಳಿ ಆತ ಸೈಲೆಂಟ್ ಸುನೀಲನ ಪಕ್ಕಾ ಬೆಂಬಲಿಗ. ಆತನ ಜೊತೆಗಿದ್ದ ಹುಡುಗರು ಕೂಡ ಸುನೀಲನ ಪರಮಾಪ್ತರೇ.

ಸಣ್ಣಪುಟ್ಟದ್ದಕ್ಕೆಲ್ಲ ಹತ್ತಿಪ್ಪತ್ತು ಮಂದಿ ದಾಂಢಿಗರ ಹಿಂಡನ್ನೇ ಜೊತೆಗಿಟ್ಟುಕೊಂಡಿರುತ್ತಿದ್ದ ಅಪ್ಪಾ ಮಾದೇಶನಿಗೂ ಆಗಷ್ಟೇ ರಾಮನಗರ ಜೈಲಿಗೆ ಎಂಟ್ರಿಯಾಗಿದ್ದ ಹೇಮಂತನಿಗೂ ಪದೇಪದೇ ಚಕಮಕಿಯಾಗಿದೆ. ಇವನನ್ನು ಕಂಡರೆ ಆತ ಗುರಾಯಿಸುವುದು, ಆತ ಸಿಕ್ಕರೆ ಈತ ಕಿಚಾಯಿಸುವುದು ಮಾಮೂಲಾಗಿ ಹೋಯಿತು. ಇಲ್ಲಿಗೆ ಹದಿನೈದು ದಿನಗಳ ಹಿಂದೆ ಏಕಾಏಕಿ ಅಪ್ಪಾ ಮಾದೇಶನನ್ನು ಅಟಕಾಯಿಸಿಕೊಂಡ ಹೇಮಂತ 'ನಿನ್ನ ಗುರು ಸುನೀಲ ನೇನು ಮಹಾನ್ ಕಿಲಾಡಿನಾ? ಆ ಮುದುಕ ಚಿಕನ್ ಕಣ್ ರಾಜೇಂದ್ರನನ್ನು ಮುಗಿಸಿದ ಮಾತ್ರಕ್ಕೆ ರೌಡಿನಾ? ತಾಕತ್ತಿದ್ರೆ ನನ್ನೆದುರು ಬಂದು ನಿಂತ್ಕೊಳ್ಳೋಕೆ ಹೇಳು' ಎಂದುಬಿಟ್ಟ.

ಇಷ್ಟಾಗಿದ್ದೇ ತಡ, ಅಪ್ಪಾ ಮಾದೇಶನಿಗೂ ಹೇಮಂತನಿಗೂ ಝುಟಾಪಟಿಯಾಗಿದೆ. ಜೈಲಧಿಕಾರಿಗಳು ಹೇಮಂತನನ್ನೇ ಸೆಲ್ಲಿಗೆ ತಳ್ಳಿ ಶಿಕ್ಷಿಸಿದ್ದಾರೆ. ಇದಾಗಿ ಹತ್ತೇ ದಿನಕ್ಕೆ ಅಂದರೆ ಡಿಸೆಂಬರ್ 6 ರ ಶನಿವಾರ ರಾಮನಗರ ಜೈಲಿನಲ್ಲಿ ಕಂಡರಿಯದ ಮಾರಾಮಾರಿ ನಡೆಯಿತು. ಇಪ್ಪತ್ತಕ್ಕೂ ಹೆಚ್ಚು ಮಂದಿಯಿದ್ದ ಅಪ್ಪಾ ಮಾದೇಶನ ಗ್ಯಾಂಗ್ ಹೇಮಂತನನ್ನು ಮುತ್ತಿಕೊಂಡಿದ್ದೇ ಹೀನಾಮಾನ ಥಳಿಸಿದೆ. ಏಕಾಂಗಿಯಾಗಿಯೇ ಬಡಿದಾಡಿದ ಹೇಮಂತನ ಕೈಕಾಲು ಮುಖಕ್ಕೆಲ್ಲ ಪೆಟ್ಟು

ಜೈಲಧಿಕಾರಿಗಳೇ ದಂಗುಬಡಿದಿದ್ದಾರೆ. ಇದು ಸೈಲೆಂಟ್ ಸುನೀಲನದೇ ಸ್ಕೆ

ಲೆಕ್ಕ ಹಾಕಿದ ಹೇಮಂತ ಸೇರಿಗೆ ಸವ್ವಾಸೇರು ಮಾಡಲು ಖತರ್

ಐಡಿಯಾ ಮಾಡಿದ್ದಾನೆ.

ಅದು ಎಂಥಾ ನಾಟಕವೆಂದರೆ ಡಿಸೆಂಬರ್ 11 ರ ಗುರುವಾರ ಬಿಡುಗಡೆಯಾಗುತ್ತೇನೆಂದು ಇದ್ದಕ್ಕಿದ್ದಂತೆ ಪುಕಾರೆಬ್ಬಿಸಿದ ಹೇಮಂತನ ಲೆಕ್ಕಾಚಾ ಬೇರೆಯಿತ್ತು, ತಾನು ಬಿಡುಗಡೆಯಾಗುವ ಸುದ್ದಿ ಹೇಗಿದ್ದರೂ ಅಪ್ಪಾ ಮಾದ ಮೂಲಕ ಸುನೀಲನ ಕಿವಿ ಮುಟ್ಟುತ್ತದೆ. ತನ್ನನ್ನು ಮುಗಿಸಲೆಂದು ಆ ಸಮೇತವಾಗಿ ರಾಮನಗರದತ್ತ ಬಂದೇಬರುತ್ತಾನೆ. ಅದನ್ನು ಉಪಾಯ ಪೊಲೀಸರಿಗೆ ಮುಟ್ಟಿಸಿಬಿಟ್ಟರೆ?

ಇಡೀ ಸುನೀಲನ ಗ್ಯಾಂಗ್ ನಿರಾಯಾಸವಾಗಿ ಪೊಲೀಸರ ಕೈಗೆ ಸಿಕ್ಕಿಬೀಳು ಜೊತೆಗೆ ಆತನ ಬಳಿಯಿರುವ, ರಿವಾಲ್ವರ್‌ಗಳೂ ಜಪ್ತಾಗುತ್ತವೆ!

ಇದು ಹೇಮಂತನ ಹುನ್ನಾರ. ಗುರುವಾರ ಅಂದರೆ ಡಿಸೆಂಬರ್ ಹನ್ನೊ ತಾನು ಜೈಲಿಂದ ರಿಲೀಜಾಗುತ್ತೇನೆಂದು ಸೋಮವಾರದಿಂದಲೇ ಪುಕಾರೆಬ್ಬಿಸಿ ಯಾವತ್ತು ಬುಧವಾರ ರಾತ್ರಿ ತನ್ನೆಲ್ಲಾ ಬಟ್ಟೆ ಬರೆಗಳನ್ನು ಹೇಮಂತ ಮಾಡಿಕೊಂಡನೋ ಸುದ್ದಿ ಅಪ್ಪಾ ಮಾದೇಶನ ಕಿವಿಗೆ ಬಿದ್ದಿದೆ. ರಾತ್ರಿ ತನ್ನ ಮೊಬೈಲಿನಿಂದ ಸುನೀಲನಿಗೆ ಸುದ್ದಿ ಮುಟ್ಟಿಸಿದ್ದಾನೆ. ಯಾಮಾ ಸುನೀಲನಿಗೆ ಅದರ ಸತ್ಯಾಸತ್ಯತೆಯಾದರೂ ಹೇಗೆ ಗೊತ್ತಾಗಬೇಕು?

ಹೇಮಂತ ಬಿಡುಗಡೆಯಾಗುತ್ತಾನೆಂದರೆ ಆತನ ಜೊತೆ ಕೋಳಿ ರಮೇ ಬಿಡುಗಡೆಯಾಗಲೇಬೇಕು. ಹೇಮಂತನನ್ನು ರಾಮನಗರದಿಂದ ಸೇ ಬೆಂಗಳೂರಿಗೆ ಮುಟ್ಟಿಸಲೆಂದು ಆತನ ಬಲಗೈ ಬಂಟ ಮಾಗಡಿ ರ ರಘು ಬಂದೇಬರುತ್ತಾನೆ. ಹಾಗೊಮ್ಮೆ ಬ್ರೇಕ್ ಜಗ್ಗಿಯೇನಾದರೂ ಹೇಮಂತ ಬರಮಾಡಿಕೊಳ್ಳಲು ರಾಮನಗರಕ್ಕೆ ಬಂದನೆಂದರೆ ಒಂದೇ ಏಟಿಗೆ ದುಷ್ಮನ್‌ಗಳ ಹಿಂಡನ್ನೇ ಮುಗಿಸಿಬಿಡಬಹುದು. ಅದಕ್ಕೆಂದು ರಾತ್ರಿಯಿಂದ ತಯಾರಿ ನಡೆಸಿದ್ದಾನೆ ಸುನೀಲ. ಬೆಳಿಗ್ಗೆಯಾಗುತ್ತಿದ್ದಂತೆ ಮೂರು ಇನ್ನೋ ಗಾಡಿಗಳಲ್ಲಿ ಹಂತಕ ಪಡೆ ಸಜ್ಜಾಗಿದೆ. ಅಗತ್ಯಕ್ಕೂ ಹೆಚ್ಚಿನ ಲಾಂಗುಗ ಹಾಕಿಕೊಂಡಿದ್ದಾರೆ. ಸಂಜೆಯಾಗುತ್ತಿದ್ದಂತೆ ಬಿಡದಿ ಸಮೀಪ ಸುನೀಲನ ಗ್ಯಾಂಗ್ ಇನ್ನೇನು ಬಿಡದಿ ದಾಟಿ ರಾಮನಗರ ಪ್ರವೇಶಿಸಬೇಕೆನ್ನುವಷ್ಟರಲ್ಲಿ ಬಿಡದಿ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಸತ್ಯನಾರಾಯಣರ ತಂಡ ಸಜ್ಜಾಗಿದ


ಸುನೀಲ

ಯಥಾಪ್ರಕಾರ ಬಿಡದಿ ಮತ್ತು ರಾಮನಗರದ ನಾಕಾಬಂದಿಯಿದ್ದೇ ಇರುತ್ತದೆ. ಮುಂಬಯಿ ಟೆರರಿಸ್ಟ್ ಅಟ ನಂತರವಂತೂ ಪ್ರತಿ ವಾಹನವನ್ನೂ ತಲಾಶು ಮಾಡಿ ಪೊಲೀಸರು ಪರೀಕ್ಷಿಸುತ್ತಾರೆ. ಇದರ ಲೆಕ್ಕಾ ವಿಲ್ಲದ ಸುನೀಲ ನಾಕಾಬಂಧಿಯ ಸಮೀಪಿಸುತ್ತಿದ್ದಂತೆಯೇ ಪೊಲೀ ಸುತ್ತುವರಿದಿದ್ದಾರೆ. ಗಾಡಿಯ ತಲಾಶು ಮಾಡುತ್ತಿದ್ದ ಒಂದೊಂದೇ ಲಾಂಗ್ ಹ ಬಿದ್ದಿದೆ. ತಪ್ಪಿಸಿಕೊಳ್ಳಲು ದೊಂದು ಅವಕಾಶವೂ ಇಲ್ಲದ ಬೋನಿಗೆ ಬಿದ್ದಿದ್ದಾನೆ ಸುನೀಲ

ಪೊಲೀಸರಿಗಷ್ಟೇ ಅ ಎಂಥವರಿಗೂ ಅಚ್ಚರಿಯಾಗುವ ಸುನೀಲ ತನ್ನ ಗೆಟಪ್ಪನ್ನೇ ಬದಲಿ ಹಿಂದೆ ಚಿಕನ್ ಕಣ್ ರಾಜೇಂದ್ರ ಕೊಂದು ಬಂಧಿತನಾಗಿದ್ದಾಗ ಸಣ್ಣಗೆ ಹುಡುಗನಂತಿದ್ದು ಫ್ರೆಂಚ್ ಗಡ್ಡ ಬಿಟ್ಟ ಈಗ ಅದರ ತದ್ವಿರುದ್ಧ ರೂಪ. ಜಿಮ್ ಹೋಗಿ ಮಸ್ತಾಗಿ ದೇಹ ಬೆಳೆಸಿದ ಹಿಂದಿಗಿಂತಲೂ ಸ್ಟೈಲಿಷ್ ಆಗಿ ಗುರು ಸಿಗಲಾರದಷ್ಟು ಬದಲಾಗಿದ್ದಾನೆ. ಬಹು ಸಿಕ್ಕಿಬೀಳದೇ ಹೋಗಿದ್ದರೆ ಸುನೀಲನ ಪೊಲೀಸರಿರಲಿ, ಆತನ ದುಷ್ಮನ್‌ಗ ಪತ್ತೆ ಹಚ್ಚುವುದು ಕಷ್ಟವಾಗುತ್ತಿ ಸುನೀಲನ ಲೇಟೆಸ್ಟ್ ಗೆಟಪ್ಪನ್ನೂ ದಂತಾಯ್ತು. ಆತನ ಇಡೀ ಗ್ಯಾಂಗ್ ಜೈ ಪಾಲಾದಂತಾಯ್ತು. ಪೊಲೀಸರಿಗೆ ಭಾಪ್‌ಗಿರಿಯೂ ಸಿಕ್ಕಂತಾಯ್ತು. ಹೇಗೆ ಸೀರ್ಝುರ್ ಹೇಮಂತನ ಐಡಿಯಾ?

■ ರಾ. ಸೋಮನಾಥ

ರಾಮನಗರದ ಜೈಲಲ್ಲಿ ಅಪ್ಪಾ ಮಾದೇಶನ ಗ್ಯಾಂಗ್ ಜೊತೆ ಹೇಮಂತ ಏಕಾಂಗಿಯಾಗಿ ಬಡಿದಾಡುತ್ತಿದ್ದರೆ ಅದನ್ನು ನೋಡುತ್ತಾ ನಿಂತಿದ್ದ ಅರಸಯ್ಯ ನೆಪಕ್ಕೂ ಹೇಮಂತನ ನೆರವಿಗೆ ಬರಲಿಲ್ಲ, ಬಹುಶಃ ಅರಸಯ್ಯ ಜೊತೆಗಿದ್ದಾನೆಂಬ ಧೈರ್ಯದಿಂದಲೇ ಹೇಮಂತ ಮಾದೇಶನ ಪಡೆಯನ್ನು ಕೆಣಕಿದನೋ ಏನೋ!

ಆದರೆ ಅರಸಯ್ಯನ ಪ್ರಾಣಸಂಕಟ ಬಲ್ಲವರ್ಯಾರು? ಇದ್ದೊಬ್ಬ ತಮ್ಮನನ್ನೇ ಕಳಕೊಂಡಿದ್ದಾಯ್ತು, ಅದರ ರಿವೇಂಜೂ ಮುಗಿದಾಯ್ತು, ತಮ್ಮನ ಹತ್ಯೆಗೆ ಪ್ರತೀಕಾರವಾಗಿ ಜೈಲಲ್ಲೇ ಕೂತು ಅಲ್ಯುಮಿನಿಯಂ ಟಾಬುವನ್ನು ಛೂಬಿಟ್ಟು ಜಲ್ಲಿ ವೆಂಕಟೇಶನನ್ನು ನಿಕಾಲಿ ಮಾಡಿಸಿದ ಮೇಲೆ ಅರಸಯ್ಯನಿಗೆ ಅಂಡರ್‌ವರ್ಲ್ಡ್ ಸಹವಾಸವೇ ಸಾಕಾಗಿ ಹೋಗಿದೆ. ಜೈಲಿಂದ ಹೊರಬಿದ್ದರೆ ಒಂದಲ್ಲಾ ಒಂದು ಕೇಸು ಹಾಕಿ ಮತ್ತೆ ಮತ್ತೆ ಜೈಲಿಗೆ ದಬ್ಬುವ ಪೊಲೀಸರು, ವಿನಾಕಾರಣ ತನ್ನ ಹೆಸರು ಬಳಸಿ ಹಾವಳಿಯಿಡುವ ಗೆಳೆಯರು, ಜೊತೆಗೆ ದುಷ್ಮನ್‌ಗಳದ್ದೂ ಕಾಟ; ಇದೆಲ್ಲದರಿಂದ ಬಚಾವಾಗಬೇಕೆಂದರೆ ತೆಪ್ಪಗೆ ಜೈಲಲ್ಲಿದ್ದು ಬಿಡುವುದೇ ಸೂಕ್ತ ಎಂಬುದು ಅರಸಯ್ಯನ ನಂಬಿಕೆಯಾಗಿತ್ತು,

ತಂಟೆ ತಕರಾರೇ ಬೇಡವೆಂದು ಸದ್ದಿಲ್ಲದೇ ಮಂಡ್ಯ ಜೈಲು ಸೇರಿಕೊಂಡರೆ ಅಲ್ಲಿಗಾಗಲೇ ಕಡಬಗೆರೆಯ ಪಾಯ್ಸನ್ ರಾಮನ ಎಂಟ್ರಿಯಾಯಿತು. ರಾಮನಿಂದ ದೂರವಿರಲೆಂದೇ ಜೈಲಧಿಕಾರಿಗಳ ಕಾಲಿಗೆ ಬಿದ್ದು ಪ್ರತ್ಯೇಕ ಸೆಲ್ಲಿಗೆ ಹಾಕಿಸಿಕೊಂಡ. ಅದೇ ಹೊತ್ತಿಗೆ ಮದ್ಯ ವಿರೋಧಿ ಹೋರಾಟಗರ ಎ.ಟಿ. ಬಾಬು ಹತ್ಯೆ ಕೇಸಿನಿಂದ ಬಚಾವಾಗಲು ಪಾಯ್ಸನ್ ರಾಮ ಕಣ್ಮರೆಯಾಗುತ್ತಿದ್ದಂತೆ ಜಡೇಜಾ ರವಿಯ ಹಂತಕ ಅಶೋಕ್ ಪೈ ಮಂಡ್ಯ ಜೈಲಿಗೆ ಕಾಲಿಟ್ಟಿದ್ದ.

ಪೈ ಮಂಡ್ಯ ಜೈಲಿಗೆ ಎಂಟ್ರಿಯಾಗುತ್ತಿದ್ದಂತೆ ಕೋತಿರಾಮನ ತಂಡದ ಒಬ್ಬೊಬ್ಬರೇ ಬಂಧಿಗಳು ಮಂಡ್ಯ ಜೈಲು ಸೇರಲಾರಂಭಿಸಿದ್ದರು. ತನಗಿನ್ನು ಮಂಡ್ಯ ಜೈಲು ಸುರಕ್ಷಿತವಲ್ಲ ಎಂದು ಲೆಕ್ಕಹಾಕಿದ ಅರಸಯ್ಯ ಇಲ್ಲಿಗೆ ಎರಡು ತಿಂಗಳ ಹಿಂದೆ ರಾಮನಗರ ಜೈಲಿಗೆ ಬಂದರೆ ಅಲ್ಲಾಗಲೇ ಹೇಮಂತನ ಪ್ರವೇಶವಾಗಿ ಹೋಗಿತ್ತು, ಜೊತೆಗೆ ತನ್ನ ವಿರೋಧಿ ಬಣದ ಅಪ್ಪಾ ಮಾದೇಶನೂ ಅಲ್ಲೇ ತಳವೂರಿದ್ದ. ಇನ್ನು ಬೆಂಗಳೂರು ಜೈಲಿಗೆ ಬರೋಣವೆಂದರೆ ಅಲ್ಲಾಗಲೇ ಸುನೀಲನ ಗ್ಯಾಂಗ್ ಜಮಾಯಿಸಿಬಿಟ್ಟಿದೆ.

ಅರಸಯ್ಯನ ಪೀಕಲಾಟ

ಅಪ್ಪಾ ಮಾದೇಶನನ್ನು ಮಾತಾಡಿಸಿದರೆ ಹೇಮಂತನಿಗೆ ಸಿಟ್ಟು ಹೇಮಂತನನ್ನು ಹಚ್ಚಿಕೊಂಡರೆ ಅಪ್ಪಾ ಮಾದೇಶ ಸಹಿಸಲಾರ. ಅಷ್ಟಕ್ಕೂ ತಾನೇ ರೌಡಿಜಮ್ಮಿಗೆ ವಿದಾಯ ಹೇಳುತ್ತಿರುವಾಗ ಯಾರನ್ನು ಕಟ್ಟಿಕೊಂಡು ತನಗೇನಾಗಬೇಕು? ಅರಸಯ್ಯನ ಪೀಕಲಾಟ ಯಾರಿಗೆ ಅರ್ಥವಾಗಬೇಕು?



ಡಾಕ್ಟರೇಟಿಗೆ ರೇಟ್ ಎಷ್ಟು?

ಯಡಿಯೂರಪ್ಪನವರನ್ನು ನೋಡಿದರೆ ಕನಿಕರ ಅನ್ನಿಸುತ್ತದೆ. ಈತ ತನ್ನ ಜೀವಮಾನದ ಕನಸಾಗಿದ್ದ ಮುಖ್ಯಮಂತ್ರಿ ಕುರ್ಚಿ ಏರಿ ಮೂರು ತಿಂಗಳಾಗಿದೆ. ಅಲ್ಲಿಂದಾಚೆಗೆ ಹೇಳಿಕೊಳ್ಳಲಿಕ್ಕೆ ಒಂದೇ ಒಂದು ಸಾಧನೆಯಿಲ್ಲ. ಓಟು ಕೊಟ್ಟು ಗೆಲ್ಲಿಸಿದ ಜನ ಮೆಚ್ಚುವಂತಾ ಯಾವ ಕೆಲಸವನ್ನೂ ಮಾಡಿಲ್ಲ. ...ವೀ ಕರೆಂಟ್‌ಗೆ ಬಡತನ, ರೈತರಿಗೇ ಅನ್ನವಿರದ ಪರಿಸ್ಥಿತಿ.

...ಹೀಗಿರುವಾಗ ಯಡಿಯೂರಪ್ಪನಿಗೆ ಸನ್ಮಾನಗಳ ಕನಸು ಬೀಳುತ್ತಿದೆ. ಫಾರಿನ್ ...ನ ಚಟ ಹುಟಿದೇಳುತ್ತಿದೆ. ಈಗ ಇನ್ನೊಂದು ಹೆಜ್ಜೆ ಮುಂದಿಟ್ಟು ...ರಿಕಾದ ಸಾಜಿನಾವ್ ಯೂನಿವರ್ಸಿಟಿಯ ಗೋಡೌನಿನಿಂದ ಒಂದು ...ಲು ಡಾಕ್ಟರಿಕೆ ಪುಸ್ತ್ರಿ ಎತ್ತಿಕೊಂಡು ಬಂದಿದ್ದಾರೆ.

ಅಪ್ಪಟ ಎರೆವಿ ಪ್ರಶಸ್ತಿ ಇದು!


...ಜನ ಇದನ್ನು ನೋಡಿ ಗೇಲಿ ಮಾಡಿ ನಗುತ್ತಿದ್ದಾರೆ. ವಿರೋಧಿಗಳಾದ ...ಸ್, ದಳದವರಿರಲಿ ಸ್ವತಃ ಬಿಜೆಪಿಗಳೇ ಯಡ್ಡಿಯ ಈ ತಿಕ್ಕಲುತನ ...ದ ಅಪಹಾಸ್ಯ ಮಾಡುತ್ತಿದ್ದಾರೆ. ಆದರೇನು ಮೂರೂ ಬಿಟ್ಟೋರು ...ಗೆ ದೊಡ್ಡೋರು ಅನ್ನುವಂತೆ ಯಡ್ಡಿ ನಾಚಿಕೆ, ಮಾನ ಮರ್ಯಾದೆ ...ನೂ ಬಿಟ್ಟು ಈಗ ಡಾಕ್ಟರ್ ಯಡಿಯೂರಪ್ಪ ಆಗಿದ್ದಾರೆ.

...ನು ಕಡಿದು ಕಟ್ಟೆ ಹಾಕಿದ್ದಕ್ಕೋ ಈ ಪ್ರಶಸ್ತಿ ಭಗವಂತನೇ ಬಲ್ಲ. ನಿಜ ...ಬೇಕೆಂದರೆ ಕರ್ನಾಟಕದಲ್ಲಿ ಇವತ್ತು ಹಂಪೆ ಯೂನಿವರ್ಸಿಟಿಯವರು ...ವ ಡಾಕ್ಟರೇಟ್ ಹಾಗೂ ನಾಡೋಜ ಪ್ರಶಸ್ತಿ ಬಿಟ್ಟರೆ ಉಳಿದ ಯಾರ ...ಕೆಗಳಿಗೂ ಕಿಮ್ಮತ್ತಿಲ್ಲ.

...ಹಗಲು ಕುಡುಕ ವಿಜಯ ಮಲ್ಯ, ಕಳ್ಳ ಗುರು ರವಿಶಂಕರ, ಕಳಪೆ ... ಆಟಗಾರ್ತಿ ಸಾನಿಯಾ ಮಿರ್ಜಾರಿಗೆಲ್ಲಾ ಈ ದೇಶದ ವಿವಿಗಳು ...ರೇಟ್ ಅನ್ನು ಕಡಲೆ ಪುರಿಯಂತೆ ಹಂಚಿಬಿಟ್ಟಿವೆ. ಇನ್ನೇನು ಕೆಲವೇ ...ಗಳಲ್ಲಿ ಮಾಫಿಯಾ ಡಾನ್‌ಗಳಿಗೆ, ಚಿಲ್ರೆ ಹೋರಾಟಗಾರರಿಗೆ, ಕಟ್ಟಾ ...ವಾದಿ ಪ್ರಮೋದ್ ಮುತಾಲಿಕ್‌ನಂತವರಿಗೂ ಡಾಕ್ಟರಿಕೆ ಸಿಕ್ಕರೂ ಆಶ್ಚರ್ಯವಿಲ್ಲ. ... ಪ್ರಭಾವಗಳು ಇದರಲ್ಲಿ ಕೆಲಸ ಮಾಡುತ್ತವೆ. ಒಂದು ವಾಸ್ತವ ...ಯೆಂದರೆ ಕೆಲವು ಅಮೆರಿಕದ ವಿಶ್ವವಿದ್ಯಾಲಯಗಳೂ ಇದೇ ಕೆಟಗರಿಗೆ ...ತ್ತವೆ. ನಮ್ಮಲ್ಲಿನ ಮೈಸೂರು, ಶಿವಮೊಗ್ಗ ವಿವಿಗಳಂತೆಯೇ ತಮಿಳುನಾಡಿನ ... ಮಲ್ಲೈ, ಎಂಜಿಆರ್ ವಿವಿಗಳಂತಹವೇ ದುಡ್ಡಿಗಾಗಿ, ಲಾಭಕ್ಕಾಗಿ ಏನು ...ದರೂ ಮಾಡಬಲ್ಲ ವಿವಿಗಳು ಅಮೆರಿಕಾದಲ್ಲೂ ಇವೆ.

...ಯಡ್ಡಿಗೆ ಈಗ ಡಾಕ್ಟರಿಕೆ ಕೊಟ್ಟಿರುವ ಸಾಜಿನಾವ್ ವ್ಯಾಲಿ ಸ್ಟೇಟ್ ...ನಿವರ್ಸಿಟಿಯ ಯೋಗ್ಯತೆಯೂ ಅಷ್ಟೇ. ಅಲ್ಲಿ ಮಹೇಂದ್ರ ಕಂಠಿ ಎಂಬ ... ಕನ್ನಡಿಗ ಅರ್ಥಶಾಸ್ತ್ರ ಪ್ರೊಫೆಸರ್ ಆಗಿ ಕೆಲಸ ಮಾಡಿಕೊಂಡಿದ್ದ. ... ಆದ ಮೇಲೆ ಕರ್ನಾಟಕ ಬಿಜೆಪಿ ಸೇರಿಕೊಂಡಿರುವ ಮಹೇಂದ್ರ ...ಗೆ ಅರ್ಜೆಂಟಾಗಿ ಅಧಿಕಾರ ಬೇಕಿದೆ. ಹಾಗಾಗಿ ಯಡ್ಡಿಗೆ ಮಸಾಜ್ ...ಕೊಂಡಿದ್ದರೆ ಏನಾದರೂ ಕುರ್ಚಿ ಮಂಜೂರಾಗಬಹುದೆಂದು ಈತ ...ತ್ತಾನೆ.

...ಯಡ್ಡಿಗೆ ಡಾಕ್ಟರೇಟ್ ಕೊಡಿಸಿದ್ದು ಇದೇ ಮಹೇಂದ್ರ ಕಂಠಿ! ಕರ್ನಾಟಕದ ... ಮೂಲೆಯಿಂದಲೂ ಮೆಚ್ಚುಗೆ ಹೊಗಳಿಕೆಯ ಮಾತು ಕಿವಿಗೆ ಬೀಳದ ... ಈ ಮಹೇಂದ್ರ ಕಂಠಿಯ ಗಾಳಕ್ಕೆ ಬಿದ್ದು ಪ್ರಪಂಚದಲ್ಲೇ ಯಾರೂ ...ದ, ಬೆಂಗಳೂರಿನಿಂದ ಹತ್ತು ಸಾವಿರ ಕಿಲೋಮೀಟರ್ ದೂರದಲ್ಲಿರುವ ...ನ್ ರಾಜ್ಯದ ಸಾಜಿನಾವ್ ವಿವಿ ತನಕ ಹೋಗಿ ...ಟ್ ತಗೊಂಡು ಬಂದಿದ್ದಾರೆ.



ಗಿಲ್ಬರ್ಟ್‌ಸನ್

...ದನ್ನು ನೋಡಿದರೆ ಕನಿಕರ ಹುಟ್ಟಬೇಕೋ ಬೇಡವೋ ... ಕರ್ನಾಟಕದ ಯಾವ ಪ್ರಜೆಗೂ ಕಾಣಸಿಗದ ದಕ್ಷತೆ, ...ದ ಆಡಳಿತ ಸಾಜಿನಾವ್ ವಿವಿಯ ಮುಖ್ಯಸ್ಥ ...ಸನ್ ಕಣ್ಣಿಗೆ ಹೇಗೆ ಬತ್ತು? ಇದನ್ನು ತಲಾಶ್ ಮಾಡುತ್ತಾ ...ರೆ ಅದೇ ಒಂದು ಹಗರಣವಾಗಬಲ್ಲದು. ಸಿಂಪಲ್ಲಾಗಿ ...ಕೆಂದರೆ ಇದೊಂತರಾ **Give and take** ದಂಧೆ! ...ಗಿದ್ದರೆ ನಾ ನಿನಗೆ ಅನ್ನುವ ತರಾ.

ಕಂಠಿ ಕೊಡಿಸಿದ ತಗಡು ಪ್ರಶಸ್ತಿ

ಮಹೇಂದ್ರ ಹಳೇ ರಾಜಕಾರಣಿ ಎಸ್.ಆರ್. ಕಂಠಿ ಮಗ. ರಾಜ್ಯದ ಮುಖ್ಯಮಂತ್ರಿಯಾಗಿ ಎಸ್.ಆರ್. ಕಂಠಿ ಮೂರು ತಿಂಗಳು ಅಧಿಕಾರದಲ್ಲಿದ್ದರು. 1962 ರ ಚುನಾವಣೆಯಲ್ಲಿ ನಿಜಲಿಂಗಪ್ಪ ಹೊಸದುರ್ಗದಲ್ಲಿ ಸೋತ ಕಾರಣ ಇನ್ನೊಬ್ಬ ಲಿಂಗಾಯತ ತಾತ್ಕಾಲಿಕವಾಗಿ ಸಿ.ಎಂ. ಆಗಲೆಂದು ಕಂಠಿಯನ್ನು ಸಿ.ಎಂ. ಆಗಿ 1962ರ ಮಾರ್ಚ್‌ನಿಂದ ಜೂನ್‌ತನಕ ಕೂರಿಸಲಾಗಿತ್ತು. ನಂತರ ನಿಜಲಿಂಗಪ್ಪ ಬಾಗಲಕೋಟೆ ಉಪಚುನಾವಣೆಯಲ್ಲಿ ಗೆದ್ದು ಬಂದ ನಂತರ ಕಂಠಿ ಸಿ.ಎಂ. ಜಾಗ ಬಿಟ್ಟುಕೊಟ್ಟಿದ್ದರು. ಈ ಎಸ್.ಆರ್. ಕಂಠಿ, ನಿಜಲಿಂಗಪ್ಪ ವೀರೇಂದ್ರ ಪಾಟೀಲ್ ತರಹದ ಮಹಾನ್ ನಾಯಕರೇನಲ್ಲ, ಒಂದು ರೀತಿ ಬಿ.ಡಿ. ಜತ್ತಿ ತರಹದ ಮಿಡಿಯೋಕರ್ ರಾಜಕಾರಣಿಯಾಗಿದ್ದಾತ. ಆ ಕಂಠಿಯ ಸುಪುತ್ರನೇ ಯಡ್ಡಿ ಡಾಕ್ಟರೇಟ್ ದಲ್ಲಾಳಿ ಮಹೇಂದ್ರ ಕುಮಾರ್ ಕಂಠಿ. ಈತ ತನ್ನನ್ನು ಆರ್ಥಿಕ ತಜ್ಞ ಎಂದೇ ಹೇಳಿಕೊಳ್ಳುತ್ತಾನಾದರೂ ಸಾಧನೆ ಮಾತ್ರ ಸೊನ್ನೆ. ಕೆಲ ದಿನ ಮಿಚಿಗನ್ ರಾಜ್ಯದ ಸಾಜಿನಾವ್ ವ್ಯಾಲಿ ಸ್ಟೇಟ್ ವಿವಿಯಲ್ಲಿ ಎಕನಾಮಿಕ್ಸ್ ಪಾಠ ಮಾಡಿಕೊಂಡಿದ್ದು ನಿವೃತ್ತನಾದ ಮೇಲೆ ತವರಿಗೆ ಮರಳಿ ಪುಢಾರಿ ಕೆಲಸ ಮಾಡಿಕೊಂಡಿದ್ದಾನೆ. ಕಿತ್ತೂರಿನ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಸಿಯಲ್ ಸ್ಕೂಲ್ ಎಂಬ ಅಂಗಡಿ ನಡೆಸುತ್ತಿದ್ದಾನೆ. ಅತೀ ಘೋರ ತಮಾಷೆ ಏನೆಂದರೆ, ಈ ಸಾಜಿನಾವ್ ವಿವಿ ಕಿತ್ತೂರಿನ ಕಂಠಿಯ ಆರ್ಡಿನರಿ ಸ್ಕೂಲಿಕೊಂದಿಗೂ ಶೈಕ್ಷಣಿಕ ವಿನಿಮಯ ಒಪ್ಪಂದ ಮಾಡಿಕೊಂಡಿದೆ.



ಕಂಠಿ

ಇದನ್ನು ನೋಡಿದರೆ ಸಾಕು ಸಾಜಿನಾವ್ ವಿವಿಯ ಮಟ್ಟ ಏನೆಂದು ಗೊತ್ತಾಗುತ್ತದೆ. ಈ ಮಹೇಂದ್ರ ಕಂಠಿ ಸಾಜಿನಾವ್ ವಿವಿಯೊಂದಿಗಿನ ತನ್ನ ಹಳೇ ಸಂಬಂಧ ಉಳಿಸಿಕೊಂಡು ಕರ್ನಾಟಕದಲ್ಲೂ ಅದರಿಗೆ ಸ್ವಲ್ಪ ವ್ಯಾಪಾರ ಕುದುರಿಸಿಕೊಡುವ ಕಮೀಷನ್ ಏಜೆಂಟ್ ತರದ ಕೆಲಸ ಮಾಡುತ್ತಿದ್ದಾನೆ.

ಜಾಗತೀಕರಣ, ಖಾಸಗೀಕರಣದ ಈ ಯುಗದಲ್ಲಿ ಶಿಕ್ಷಣ ಕ್ಷೇತ್ರದಲ್ಲೂ ಭಾರಿ ಬದಲಾವಣೆಗಳಾಗುತ್ತಿವೆ. ಖಾಸಗೀ ಶಿಕ್ಷಣ ಸಂಸ್ಥೆಗಳು ದುಡ್ಡು, ಜಾತಿ, ರಾಜಕೀಯ ಪ್ರಭಾವ ಬಳಸಿಕೊಂಡು ಡೀಮ್ಡ್ ವಿವಿ ಸ್ಥಾನಮಾನ ಪಡೆಯುತ್ತಿವೆ. ಇದೇ ಸೌಲಭ್ಯ ಬಳಸಿಕೊಂಡು ಮಣಿಪಾಲ ಪೈಗಳು ನೇಪಾಳ, ಅಮೆರಿಕ, ವೆಸ್ಟ್ ಇಂಡೀಸ್ ದೇಶಗಳಲ್ಲೂ ವ್ಯಾಪಾರ ಶುರುಮಾಡುತ್ತಿದ್ದಾರೆ.

ಅದೇ ರೀತಿ ಅಮೆರಿಕದ ಸಾಜಿನಾವ್ ವಿವಿಯವರು ಹಸಿದ ನಾಯಿಗಳಂತೆ ಇಲ್ಲಿಗೆ ಬರುತ್ತಿದ್ದಾರೆ. 90ರ ದಶಕದಲ್ಲೇ ಸಾಜಿನಾವ ವಿವಿಗೆ ಕರ್ನಾಟಕ ಗೊತ್ತಿತ್ತು. ಇದೇ ಮಹೇಂದ್ರ ಕಂಠಿ ಆಗಿನ ಮೈಸೂರು ವಿವಿಯ ವಿಸಿ ಮಾದಯ್ಯನ ತಲೆತಿಕ್ಕಿ ಗಿಲ್ಬರ್ಟ್‌ಸನ್‌ಗೆ ಡಾಕ್ಟರೇಟ್ ಗೌರವ ಕೊಡಿಸಿದ್ದ. ಅದಕ್ಕೆ ಪ್ರತ್ಯುಪಕಾರವೆಂಬಂತೆ ಸಾಜಿನಾವ್ ವಿವಿ 1995 ರಲ್ಲಿ ಅವಿವೇಕಿ ಮಾದಯ್ಯನಿಗೆ ಡಾಕ್ಟರೇಟ್ ಕೊಟ್ಟು ಋಣ ತೀರಿಸಿತ್ತು. ಆದರೆ ಈ ಡಾಕ್ಟರಿಕೆ ವಿನಿಮಯದಿಂದ ಇಬ್ಬರಿಗೂ ಅಂತಾ ಲಾಭ ಆಗಿರಲಿಲ್ಲ.

ಆದರೆ ಈ ಬಾರಿಯ ಯಡ್ಡಿ ಡಾಕ್ಟರಿಕೆ ಡೀಲ್‌ನಲ್ಲಿ ತ್ರಿಪಕ್ಷೀಯ ಲಾಭವಿದೆ. ಯಡ್ಡಿಗೊಂದು ಮರ್ಯಾದೆ, ಗೌರವ. ಇದನ್ನು ಕೊಡಿಸಿದ ಮಹೇಂದ್ರ ಕಂಠಿಗೊಂದು ಕುರ್ಚಿ. ಅಷ್ಟೇ ಅಲ್ಲ ಇದೇ ಯಡ್ಡಿಯ ಸುಪುತ್ರರು ಶಿವಮೊಗ್ಗ ಹಾಗೂ ಶಿಕಾರಿಪುರದಲ್ಲಿ ನರ್ಸಿಂಗ್, ಬಿಎಡ್ ಹಾಗೂ ಡಿಎಡ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಅಮೆರಿಕದ ಸಾಜಿನಾವ್ ವಿವಿ ಜೊತೆ **affiliation** ಮಾಡಿಕೊಂಡು ಹೊಸ ದಂಧೆ ಶುರುಮಾಡುವ ಯೋಜನೆ ಯಡ್ಡಿಗಿದೆ.

ಕಿತ್ತೂರು ಚೆನ್ನಮ್ಮ ಪ್ರತಿಮೆ ಕತೆ

ಸಾಜಿನಾವ್ ವಿವಿಯೊಳಗೆ ಕಿತ್ತೂರು ಚನ್ನಮ್ಮರ ಪ್ರತಿಮೆಯೊಂದನ್ನು ಡಾ. ಯಡ್ಡಿ ಅನಾವರಣ ಮಾಡಿ ಬಂದಿದ್ದಾರೆ. ಈ ಪ್ರತಿಮೆಯ ಅಸಲಿ ಕತೆ ಏನು ಗೊತ್ತೇ? ಅದನ್ನೂ ತಯಾರಿಸಿ ಸಾಗಿಸಿದ್ದು ಮಹೇಂದ್ರ ಕಂಠಿಯೇ ವಿನಃ ಸಾಜಿನಾವ್ ವಿವಿಯವರಲ್ಲ.

ಕಳೆದ ಜೂನ್‌ನಲ್ಲಿ ಕಂಠಿಯ ಕಿತ್ತೂರು ಚೆನ್ನಮ್ಮ ಸ್ಕೂಲಿಗೆ ಬಂದಿದ್ದ ಗಿಲ್ಬರ್ಟ್‌ಸನ್ ವಾಪಾಸ್ ಹೋಗುವಾಗ ಈ ಪ್ರತಿಮೆಯನ್ನು ಕಂಠಿ ಕೊಟ್ಟಿದ್ದ. ಅದನ್ನೇ ಯಡ್ಡಿ ಮೂಲಕ ಅನಾವರಣ ಮಾಡಿಸಿದ್ದಾರೆ. ಅಷ್ಟೇ ಅಲ್ಲ ಡಾಕ್ಟರೇಟ್ ಪಡೆದು ಭಾಷಣ ಮಾಡಿದ ಯಡ್ಡಿ, ಕರ್ನಾಟಕದ ರೈತರಿಗೆ ಈ ಪ್ರಶಸ್ತಿ ಸಲ್ಲಬೇಕು' ಅಂದಿದ್ದಾರೆ.

ಅಧಿಕಾರಕ್ಕೆ ಬಂದ ಕ್ಷಣವೇ ರೈತರ ಮೇಲೆ ಗೋಲಿಬಾರ್ ನಡೆಸಿ ಹತ್ಯೆ ನಡೆಸಿದ ಯಡ್ಡಿಗೆ ಸತ್ಯ-ಸುಳ್ಳುಗಳ ಗೊಡವೇ ಇರದಿರಬಹುದು. ಆದರೆ ಜನರಿಗೆ ವಿವೇಕವಿಲ್ಲವಾ? ಅವರು ಯಡ್ಡಿ ಮಾತನ್ನು ನಂಬುತ್ತಾರಾ?

ಯಡಿಯೂರಪ್ಪ ಇನ್ನು ಮೇಲಾದರೂ ಈ ರೀತಿಯ ಗಿಲೀಟು, ನಕಲಿ ಗೌರವ, ಹಾಸ್ಯಾಸ್ಪದ ಡಾಕ್ಟರೇಟುಗಳ ಗೊಡವೆ ಬಿಟ್ಟು ಆಡಳಿತದ ಕಡೆ ಗಮನ ಕೊಡಲಿ.

■ ಪಾರ್ವತೀಶ್

ಪಾಪರ್ ಸರ್ಕಾರ

ಎಸ್‌ವಿಎಸ್‌ಯು ಅಮೆರಿಕದ ಚಿಕ್ಕ ವಿವಿಗಳಲ್ಲಿ ಒಂದಾಗಿರುವುದರಿಂದ ಮಿಚಿಗನ್ ...ವನ್ನು ಹೊರತುಪಡಿಸಿ ಹೆಚ್ಚಿನ ಅಮೆರಿಕನ್ನರಿಗೆ ಈ ವಿವಿಯ ಹೆಸರೇ ಗೊತ್ತಿಲ್ಲ. ...ತ ವಿವಿಗಳ ಪಟ್ಟಿಯಲ್ಲಿ ಇದರ ಹೆಸರೂ ಇಲ್ಲ. ಈ ಚಿಕ್ಕ ವಿವಿಯ ಆಡಳಿತ ...ಷ್ಟು ದೂರದ ಕರ್ನಾಟಕದ ರಾಜಕಾರಣಿಯೊಬ್ಬ ಸಾರ್ವಜನಿಕ ಜೀವನದಲ್ಲಿ ...ರುವ ಸಾಧನೆಯನ್ನು ಪರಿಗಣಿಸಿ ಡಾಕ್ಟರೇಟ್ ಕೊಟ್ಟಿದೆ ಎಂದರೆ ಒಂದೋ ...ಕನ ಶ್ರಮ ಪ್ರಪಂಚದ ಗಮನ ಸೆಳೆದಿರಬೇಕು, ಇಲ್ಲವೇ ಇನ್ಯಾವುದೋ ರೀತಿಯ ...ಹಾರ ನಡೆದಿರಬೇಕು. ಈಗ ಯಡ್ಯಿಗೆ ಈ ಡಾಕ್ಟರೇಟ್ ಬಂದಿರುವುದು ಹೇಗೆ ...ಪ ನೀವೇ ಊಹಿಸಬಹುದು.

...ರಾಜ್ಯದ ಖಜಾನೆ ಖಾಲಿಯಾಗಿದೆ. ಬಜೆಟ್‌ನಲ್ಲಿ ಪ್ರಕಟಿಸಿದ ಒಂದೇ ಒಂದು ...ಜನೆ ಸರಿಯಾಗಿ ಜಾರಿಗೆ ಬಂದಿಲ್ಲ, ಜಾರಿಗೆ ತರಲೂ ಹಣವೂ ಇಲ್ಲ. ಹೋದಲ್ಲಿ ...ಲ್ಲಿ ಕೋಟಿ ಕೋಟಿರೂ ನೀಡುವುದಾಗಿ ಪ್ರಕಟಿಸುತ್ತಿರುವ ಯಡ್ಡಿ ಜನರನ್ನು ...ಸುತ್ತಿದ್ದಾರೆ. ಇದೂ ಸಾಲದೆಂಬಂತೆ ಮೂರು ಕಾಸಿನ ಬೆಲೆ ಇಲ್ಲದ ಡಾಕ್ಟರೇಟ್ ...ಸಲು ವಿದೇಶ ಯಾತ್ರೆ ನಡೆಸಿದ್ದಾರೆ.

...ಡಾಕ್ಟರೇಟ್ ಪಡೆಯಲು ಅಮೆರಿಕಕ್ಕೆ ಹಾರಿರುವ ಯಡ್ಡಿ ಅಲ್ಲಿ ಬಂಡವಾಳ ...ಕಿದಾರರ ಸಭೆ ನಡೆಸುವುದಾಗಿ ಹೇಳಿದ್ದಾರೆ. ಆರ್ಥಿಕ ಬಿಕ್ಕಟ್ಟಿನಿಂದ ಅಮೆರಿಕ ... ಹೋಗಿರುವಾಗ ಅಲ್ಲಿ ಇವರು ಬಂಡವಾಳ ಆಕರ್ಷಿಸಲು ಹೋಗುತ್ತಾರೆಂದರೆ ...ನ್ನು ಮೂರ್ಖರೆನ್ನದೆ ಇನ್ನೇನು ಅನ್ನಲು ಸಾಧ್ಯ?

ಸಾಜಿನಾವ್ ವಿವಿ ಹಗರಣಗಳು

ಸೆಕ್ಸ್ ಸ್ಕ್ಯಾಂಡಲ್‌ಗಳು, ಹಣ ಕದಿಯುವುದು, ದಮನ, ವರ್ಣಬೇಧ, ಸರ್ಕಾರಿ ಚೇಲಾಗಿರಿ..

ಯಡ್ಡಿಗೆ ಡಾಕ್ಟರೇಟ್ ಪೂರಿಕೊಂಡಿರುವ ಸಾಜಿನಾವ್ ವಿವಿಯ ಹಗರಣಗಳಿವು. ಇಂಡಿಯಾದ ಅನೇಕ ವಿವಿಗಳಂತೆಯೇ ಗಬ್ಬು ನಾರುತ್ತಿರುವ ಸಾಜಿನಾವ್ ವಿವಿಗೆ ಕಳೆದೆರಡು ದಶಕಗಳಿಂದಲೂ ಗಿಲ್ಬರ್ಟ್‌ಸನ್ ಎಂಬ ಲೋಭ ವ್ಯವಹಾರ ಚತುರನೇ ಚೇರ್‌ಮನ್. ಹತ್ತು ಸಾವಿರದಷ್ಟು ವಿದ್ಯಾರ್ಥಿಗಳಿರುವ ಈ ವಿವಿ ವ್ಯಾಪ್ತಿಯ 15 ಕಾಲೇಜುಗಳು ಕರಿಯ ಹಾಗೂ ಅಲ್ಪಸಂಖ್ಯಾತರ ಸಂಖ್ಯೆ ಕೇವಲ 4% ಮಾತ್ರ. ವರ್ಣಬೇಧ ಮಾಡುತ್ತಾರೆಂಬ ಆರೋಪ ಇವರ ಮೇಲಿದೆ. ಅಮೆರಿಕೆಯ ಬುಷ್ ಸರ್ಕಾರ ಇರಾಕ್ ಹಾಗೂ ಅಫಘಾನಿಸ್ತಾನದ ಮೇಲೆ ಯುದ್ಧ ಶುರುಮಾಡಿದಾಗ ಸಾಜಿನಾವ್ ವಿವಿಯ ಕೆಲ ಪ್ರೊಫೆಸರುಗಳು ಯುದ್ಧ ವಿರೋಧಿಸುವಂತೆ ತಮ್ಮ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರೆಂದು ಅವರ ಮೇಲೆ ವಿವಿ ಆಡಳಿತ ಮಂಡಳಿ ಕ್ರಮ ಕೈಗೊಂಡಿತ್ತು. ಅಲ್ಲದೆ ವಿದ್ಯಾರ್ಥಿಗಳ ಮೇಲೂ ದೌರ್ಜನ್ಯ ನಡೆಸಿತ್ತು. ಇದರಿಂದ ರೊಚ್ಚಿಗೆದ್ದಿದ್ದ ಹುಡುಗರು **SVSUTRUTH** ಎಂಬ ವೆಬ್‌ಸೈಟ್ ಚಾಲೂ ಮಾಡಿ ವಿವಿಯ ಕರಾಳ ವರ್ತನೆಯನ್ನು ಬಯಲಿಗೆಳೆದಿದ್ದರು. ವಾರ್ಷಿಕ 270 ಕೋಟಿ ರೂಪಾಯಿ ವ್ಯವಹಾರ ನಡೆಸುತ್ತಿರುವ ಸಾಜಿನಾವ್ ವಿವಿ ಈಗ ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿದೆ. ಖರ್ಚಿಗೆ ಸಾಕಷ್ಟು ಹಣವಿರದ ಕಾರಣದಿಂದ ಈ ಬಾರಿಯ ಬಜೆಟ್‌ನಲ್ಲಿ ಹತ್ತಾರು ಕೋಟಿ ರೂ ಖರ್ಚು ಕಡಿಮೆ ಮಾಡಿಕೊಂಡಿದೆ. ಆದರೂ ಶಿಕ್ಷಣ ವ್ಯಾಪಾರ ನಡೆಸಲು ಹಣ ಬೇಕೇ ಬೇಕಿಲ್ಲ. ಹಾಗಾಗಿ ವಿದ್ಯಾರ್ಥಿಗಳ ಫೀಜ್ ಜಾಸ್ತಿ ಮಾಡಿ, ಫೀಜು ಕಟ್ಟಲಾಗದವರಿಗೆ ತಾನೇ ಬ್ಯಾಂಕ್ ಸಾಲ ಕೊಡಿಸಿ ಹಣ ಕೀಳುತ್ತಿವೆ. ಜೊತೆಗೆ ಯಡ್ಡಿ ತರದ ಬಕಾಗಳನ್ನು ಹುಡುಕಿ ಡಾಕ್ಟರೇಟ್ ಪುಸ್ತ್ರಿ ಮಾರಿಕೊಂಡು ಇವರು ದುಡ್ಡು ಮಾಡುತ್ತಿದ್ದಾರೆ.

ಅಂದ ಹಾಗೆ ಯಡ್ಡಿಗೆ ಸಿಕ್ಕಿರುವ ಡಾಕ್ಟರೇಟ್ ಯಡ್ಡಿಯೇ ಹೇಳಿರುವಂತೆ ಕರ್ನಾಟಕದ ಜನರಿಗೇ ಸಲ್ಲಬೇಕು ಏಕೆ ಗೊತ್ತೇ? ಆ ಡಾಕ್ಟರೇಟ್ ಖರೀದಿ ಮಾಡಲು ಖರ್ಚಾಗಿರಬಹುದಾದ ದುಡ್ಡು ಯಡ್ಡಿ ಕಷ್ಟಪಟ್ಟು ದುಡಿದದ್ದೇನೂ ಅಲ್ಲವಲ್ಲ. ಆ ಹಣ ರಾಜ್ಯದ ಜನರದ್ದೇ ತಾನೆ?

ಕೋರ್ಟಿಗೇನು ತಲೆ ಇದೆಯಾ... ಜ್ಞಾನವಿದೆಯಾ?

"ಕೋರ್ಟಿಗೇನು ತಲೆಯಿದೆಯಾ? ಜ್ಞಾನವಿದೆಯಾ? ಸ್ವಲ್ಪ ವಿಚಾರ ಮಾಡಿ ತೀರ್ಪು ನೀಡುವುದನ್ನು ಕಲಿಯಬೇಕು. ನಮಗೆ ಆಜ್ಞೆ ಮಾಡುವ ಅವಶ್ಯಕತೆಯಿಲ್ಲ... ಇದು ಹಿಂದೂಸ್ತಾನದ ಕೋರ್ಟೋ? ಅರಬ್ಬಿಸ್ತಾನದ ಕೋರ್ಟೋ? ತೀರ್ಪು ಕೊಡುವುದಕ್ಕೆ ಯಾರನ್ನೋ ನೇಮಿಸುವುದು ಯಾವ ಕೋರ್ಟು? ಹಿಂದೂಗಳ ವಿರುದ್ಧ ಆಜ್ಞೆ ಮಾಡುವುದರ ಮೂಲಕ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳು ತಮ್ಮ ಮೂರ್ಖತನವನ್ನು ಸ್ಪಷ್ಟವಾಗಿ ತೋರ್ಪಡಿಸಿಕೊಂಡಿವೆ.... ಹಿಂದೂಸ್ತಾನದಲ್ಲಿ ಗುರುಗಳ ನಿರ್ಣಯವೇ ಅಂತಿಮ. ಅದನ್ನು ಸುಪ್ರೀಂ ಕೋರ್ಟ್ ಕೂಡ ಪಾಲಿಸಬೇಕು... ಹಾಗಾಗಿ ಅವುಗಳೇನಾದರೂ ನಿರ್ಣಯ ತೆಗೆದುಕೊಳ್ಳಬೇಕೆಂದರೆ ಧರ್ಮಚಾರಿಗಳಾದ ನಮ್ಮಂಥವರ ಆದೇಶದಂತೆ ನಡೆದರೆ ಕಾನೂನಿಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು" -ಬಾಬಾ ಬುಡನ್‌ಗಿರಿಯಲ್ಲಿ ನಡೆದ ದತ್ತ ಜಯಂತಿಯಲ್ಲಿ ಗೋಕರ್ಣದ ಆತ್ಮಾನಂದ ಸ್ವಾಮೀಜಿ ನೀಡಿದ ಸಂದೇಶ ಇದು.

ಕೇಸರಿಪಡೆ ಘೋಷಿತ ಮೂರು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ಜಾಗತಿಗಳಿಗೆ ಸೇರಿದ ಎಲ್ಲಾ ಸ್ವಾಮೀಜಿಗಳು ಒಬ್ಬರಿಗೊಬ್ಬರು ಸ್ಪರ್ಧೆಗೆ ಬಿದ್ದವರಂತೆ ಪ್ರಚೋದನಾಕಾರಿ ಭಾಷಣ ಮಾಡಿದರು. ಅವರೆಲ್ಲ ಅನ್ಯ ಕೋಮಿನ ವಿರುದ್ಧ ದ್ವೇಷವನ್ನು



ಸೃಷ್ಟಿಸುವಂತೆ ಸಂದೇಶ ನೀಡಿದರಲ್ಲದೆ, ಅವರು ಆಡಿದ ಪ್ರತೀ ಪದವೂ ನ್ಯಾಯಾಂಗ ನಿಂದನೆಯಿಂದ ಕೂಡಿದ್ದವು. ಅದರಲ್ಲೂ ಗೋಕರ್ಣದ ಸ್ವಾಮಿಗಳು ನ್ಯಾಯಾಂಗದ ಎಲ್ಲಾ ಆದೇಶಗಳನ್ನು ಧಿಕ್ಕರಿಸಿ ಬಾಬಾಬುಡನ್ ಗಿರಿಗೆ ದತ್ತಪೀಠವೆಂದು ಹೆಸರಿಸುವಂತೆ ನ್ಯಾಯಾಂಗಕ್ಕೆ ಆದೇಶ ನೀಡಿದರು!

ಇಡೀ ಮೂರು ದಿನದ ಕಾರ್ಯಕ್ರಮಗಳು ನ್ಯಾಯಾಂಗದ ಆದೇಶದ ಉಲ್ಲಂಘನೆಯಾಗಿದ್ದವು. ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿರುವ ಆದೇಶದಂತೆ ಬಾಬಾಬುಡನ್‌ಗಿರಿಯಲ್ಲಿ ಯಾವುದೇ ರೀತಿಯ ಹೋಮ-ಹವನಗಳನ್ನು ನೆರವೇರಿಸುವಂತಿಲ್ಲ. ಆದರೂ ದರ್ಗಾದ ಸಮೀಪದಲ್ಲೇ ಎರಡು ಹೋಮಗಳನ್ನು ಮಾಡಲಾಯಿತು. ಹಾಗೆಯೇ ಅದರ ಹಿಂದಿನ ದಿನ ನಡೆದ ಶೋಭಾ ಯಾತ್ರೆಗೆ ತಹಸೀಲ್ದಾರರು ಅನುಮತಿ ನೀಡಿರಲಿಲ್ಲ. ಆದರೂ ಅಂದು ಮುಂಜಾನೆ ಜಿಲ್ಲಾಡಳಿತ ಚೆಡ್ಡಿ ಪಡೆಗಳಿಗೆ ವಿಶೇಷವಾದ ಅನುಮತಿ ನೀಡಿತ್ತು.

ಶಾಸಕ ಸಿ.ಟಿ. ರವಿ ತಾನೇ ಜಿಲ್ಲಾಧಿಕಾರಿ ಎಂಬಂತೆ ಖುದ್ದು ನಿಂತು ಆದೇಶಗಳನ್ನು ನೀಡುತ್ತಿದ್ದ. ಇನ್ನು ಚೆಡ್ಡಿಗಳ ತ್ರಿಮೂರ್ತಿಗಳಲ್ಲಿ ಇನ್ನಿಬ್ಬರಾದ ಮಾಜಿ ಶಾಸಕ ಸುನೀಲ್‌ಕುಮಾರ್ ಮತ್ತು ಭಜರಂಗದಳದ 'ಮಾಜಿ' ಅಧ್ಯಕ್ಷ ಮಹೇಂದ್ರಕುಮಾರ್ ಹಾಜರಿದ್ದರೂ ಸಿ.ಟಿ. ರವಿ ಮುಂದೆ ಅವರು ಮಂಕಾಗಿದ್ದರು. ಭಜರಂಗದಳದ ಒಳಜಗಳದ ಕುರುಹು ಮೂವರ ಮುಖಗಳಲ್ಲೂ ಢಾಳಾಗಿ ಕಾಣುತ್ತಿತ್ತು. ಅಲ್ಲದೇ ಮೈಕಿನ ಮುಂದೆ ಸಿ.ಟಿ. ರವಿ ಒಬ್ಬನೇ ಬ್ಯಾಟಿಂಗ್ ಮಾಡಿದನೇ ಹೊರತು ಇನ್ನಿಬ್ಬರಿಗೆ ಮಾತನಾಡಲು ಅವಕಾಶವನ್ನು ನೀಡಲಿಲ್ಲ. ಮೆರವಣಿಗೆ ಸಂದರ್ಭದಲ್ಲಿ ಕಾರ್ಯಕರ್ತರಿಗೆ ಕಪಾಳಮೋಕ್ಷ ಮಾಡುವುದರ ಮೂಲಕ ಸಿ.ಟಿ. ರವಿ ಭಜರಂಗದಳದೊಂದಿಗೆ ಇರುವ ಆಕ್ರೋಶವನ್ನು ವ್ಯಕ್ತಪಡಿಸಿದ.

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿಯ ಎಲ್ಲ ಕಾರ್ಯಕ್ರಮಗಳೂ ಕಳೆಗುಂದಿದ್ದವು. ಜನಗಳೂ ಸಹ ಅಷ್ಟಾಗಿ ಭಾಗವಹಿಸಿರಲಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಒಂದು: ಚಿಕ್ಕಮಗಳೂರಿನ ಭಾಗದಲ್ಲಿ ಕಡಿಮೆಯಾಗಿರುವ ವಿಶ್ವಹಿಂದೂ ಪರಿಷತ್‌ನ ಪ್ರಾಬಲ್ಯ. ಎರಡು: ಸಿ.ಟಿ. ರವಿ ತರಹದ ರಾಜಕಾರಣಿಗಳ ಸ್ವಾರ್ಥಕ್ಕೆ ದತ್ತ ಜಯಂತಿ ಎಂಬ ಕಾರ್ಯಕ್ರಮಗಳು ಬೇಕಿದ್ದವು. ಆದರೆ ಈಗ ರವಿ ಗೆದ್ದಿರುವುದರಿಂದ ಅದರ ಅವಶ್ಯಕತೆ ಇಲ್ಲ. ಆದರೆ ಮುಂದೆ 'ಯಾವಾಗ ಬೇಕಾದರೂ ಮತ್ತೆ ಉಪಯೋಗಿಸುವುದಕ್ಕಾಗಿ ನೆಪಮಾತ್ರಕ್ಕೆ ಅನುಸೂಯ ಜಯಂತಿ-ಶೋಭಾಯಾತ್ರೆ-ದತ್ತ ಜಯಂತಿಯನ್ನು ಕೈಗೊಳ್ಳಲಾಯಿತು.

ಶಾಂತರಾಜು ಎಸ್.

■

ಸುರಪುರ ಶಾಸಕ ರಾಜುಗೌಡನ ತಮ್ಮನ ಮದುವೆ ಅದ್ವಾನಗಳು

ಪ್ರತಿ ಇಲಾಖೆಯಿಂದ ಹಣ ವಸೂಲಿ

ಸರಕಾರಿ ನೌಕರರೇ ಕೂಲಿಗಳು

ದೊಡ್ಡವರಿಗೆ ಮೃಷ್ಟಾನ್ನ, ಅನ್ನಕ್ಕೂ ಸಾಮಾನ್ಯರ ಪರದಾಟ

ಸಾಮೂಹಿಕ ಮದುವೆ ಹೆಸರಲ್ಲಿ ಎರಡುಕೋಟಿ ಲೂಟಿ

ಮಂತ್ರಿ, ಅಧಿಕಾರಿಗಳ ಸಮ್ಮುಖದಲ್ಲೇ ಬಾಲ್ಯವಿವಾಹ

ಸಾರ್ವಜನಿಕ ದುಡ್ಡಲ್ಲಿ ವೈಭವೋಪೇತ ಮದುವೆ

ಇವು ಸುರಪುರದ ಶಾಸಕ ರಾಜುಗೌಡನ ತಮ್ಮನ ಮದುವೆಯ ಹೈಲೈಟ್ಸ್.



ರಾಜುಗೌಡ

ಸ್ವಯಂಘೋಷಿತ ದೇಶಭಕ್ತರ ಪಕ್ಷ ಬಿಜೆಪಿಯ ಶಾಸಕನಾಗಿರುವ ಈ ರಾಜುಗೌಡ ತಮ್ಮನ ಮದುವೆಯ ತಯಾರಿ ನಡೆಸಿದಾಗಲೇ ಇಂತಹ ಅದ್ವಾನಗಳನ್ನು ಇಲ್ಲಿನ ಜನ ನಿರೀಕ್ಷಿಸಿದ್ದರು. ಕೈಯಿಂದ ಕವಡೆ ಕಾಸನ್ನು ಖರ್ಚು ಮಾಡಿ ಗೊತ್ತಿರದ ವಸೂಲಿವೀರ ರಾಜುಗೌಡ ತಮ್ಮನ ಮದುವೆಯನ್ನು ಅದು ಹೇಗೆ ಮಾಡುತ್ತಾನೆಂಬ ಕುತೂಹಲ ಇಲ್ಲಿನ ಜನರಲ್ಲಿ ಇದ್ದೇ ಇತ್ತು. ಈಗ ಅವರ ನಿರೀಕ್ಷೆ ನಿಜವಾಗಿದೆ. ಸ್ವಂತ ಕೈಯಿಂದ ಬಿಡಿಗಾಸನ್ನೂ ಬಿಚ್ಚದೆ ತಾಲೂಕಿನ ಜನ ದಂಗಾಗುವಂತೆ ತಮ್ಮ ಬಬ್ಲೂನ ಮದುವೆಯನ್ನು ಮಾಡಿದ್ದಾನೆ. ಅದಕ್ಕೆ ಈತ ಆರಿಸಿಕೊಂಡ ಮಾರ್ಗವೇ ಸಾಮೂಹಿಕ ಮದುವೆ.

ಎರಡು ಕೋಟಿ ರೂ. ವಸೂಲಿ

ಕೆಲವೇ ವರ್ಷಗಳ ಹಿಂದೆ ಮಾಜಿ ಶಾಸಕ ವೆಂಕಟಪ್ಪ ನಾಯಕನ ಹಿಂದೆ ಓಡಾಡಿಕೊಂಡಿದ್ದ ಈ ರಾಜುಗೌಡ ಈಗ ಕೋಟಿ ಕೋಟಿಗಳ ಸರದಾರ. ವಸೂಲಿ ಕಲೆಯಲ್ಲಿ ಚಾಣಾಕ್ಷನಾಗಿರುವ ಈತ ಬಡವರ ಮಕ್ಕಳ ಸಾಮೂಹಿಕ ಮದುವೆ ಮಾಡುತ್ತೇನೆಂದು ಡಂಗೂರ ಸಾರಿದ್ದ. ಆದರೆ, ಮಾಡಿದ್ದು ಮಾತ್ರ ತಮ್ಮ ಬಬ್ಲೂನ ಮದುವೆಯನ್ನು. ಈ ಮದುವೆ ಸರಕಾರದ ಅಧಿಕೃತ ಸಮಾರಂಭವೇನೋ ಎನ್ನುವಂತೆ ಕಂದಾಯ, ಪಿಡಬ್ಲ್ಯೂಡಿ, ಯುಂಕೆಪಿ ಮುಂತಾದ ಹುಲ್ಲುಗಾವಲಿನಂತಹ ಇಲಾಖೆಗಳಿಂದ ಸುಮಾರು ಎರಡು ಕೋಟಿಗೂ ಹೆಚ್ಚು ಹಣ ಎತ್ತಿದ್ದಾನೆ. ಯಾವಾಗಲೂ ರೌಡಿಗಳ ಪಟಾಲವೊಂದನ್ನು ಬೆನ್ನಹಿಂದೆಯೇ ಇಟ್ಟುಕೊಂಡು ತಿರುಗುವ ಈ ರೌಡಿ ಶಾಸಕನ ಆದೇಶವನ್ನು ನಿರಾಕರಿಸಲಾಗದ ಇಲ್ಲಿನ ಅಧಿಕಾರಿಗಳು ಈತ ಹೇಳಿದಾಕ್ಷಣ ಹಣವನ್ನು ಸಿಕ್ಕಸಿಕ್ಕಲ್ಲೆಲ್ಲ ವಸೂಲಿ ಮಾಡಿ ತಂದು ಅರ್ಪಿಸಿದ್ದಾರೆ. ಇದೇ ಪಾಪದ ದುಡ್ಡಲ್ಲಿ ಧಾಮ್, ಧೂಂ, ಎನ್ನುವಂತೆ ಬಬ್ಲೂನ ಮದುವೆ ನಡೆದಿದೆ.

ಹೋಗಿಬಂದಲ್ಲೆಲ್ಲ ತಾನು ಬಡವರ ಮಕ್ಕಳಿಗೋಸ್ಕರ ಸಾಮೂಹಿಕ ವಿವಾಹ ನಡೆಸಿಕೊಡುವುದಾಗಿ ಹೇಳಿಕೊಂಡು ತಿರುಗಿದ್ದ ರಾಜುಗೌಡನ ನಿಜ ಬಣ್ಣ ಈಗ ಬಯಲಾಗಿದೆ. ಬಡವರ ಸಾಮೂಹಿಕ ವಿವಾಹದ ಹೆಸರಲ್ಲಿ ಎತ್ತಿ ತಂದ ಹಣದಲ್ಲಿ ಮಾಡಿದ ಮದುವೆಯಲ್ಲಿ ಬಡ ಜೋಡಿಗಳು ಲೆಕ್ಕಕ್ಕೇ ಇರಲಿಲ್ಲ. ಇಲ್ಲಿ ಮಿಂಚಿದ್ದು ರಾಜುಗೌಡನ ತಮ್ಮ ಬಬ್ಲೂ ಮಾತ್ರ. ಸಮಾನತೆ ಗೌರವ ಎಂದರೇನು ಎಂದು ಗೊತ್ತಿರದ ರಾಜುಗೌಡ ನಡೆಸಿದ ಮದುವೆಯಲ್ಲಿ ಸ್ಟೇಜಿನ ಮೇಲಿದ್ದ ಆಸನದಲ್ಲಿ ಗಣ್ಯರೊಂದಿಗೆ ಬಬ್ಲೂ ಜೋಡಿ ರಾರಾಜಿಸುತ್ತಿದ್ದರೆ, ಸಾಮಾನ್ಯ ವಧು-ವರರಿಗೆ, ಮದುವೆಗೆ ಬಂದ ಜನತೆಗೆ ಕುಳಿತುಕೊಳ್ಳಲು ಕುರ್ಚಿ ಕೂಡ ಇರದೆ ಪರದಾಡಿದರು.

ಖರ್ಚಾದ ಎರಡು ಕೋಟಿಯಲ್ಲಿ ಮದುವೆ
ದೊಡ್ಡ ದೊಡ್ಡ ಕುಳಗಳ ಸತ್ಕಾರಕ್ಕೆ ಬಹುಪಾಲು
ಕರಗಿದೆ. ಒಂದೆಡೆ ಕಾರು, ಹೆಲಿಕಾಪ್ಟರ್‌ಗಳಲ್ಲಿ ಬಂದ
ರಾಜಮರ್ಯಾದೆ ಸಿಕ್ಕರೆ, ಸಾಮೂಹಿಕವಾಗಿ ವಿವಾ
ಜೋಡಿಗಳ ಸಂಬಂಧಿಕರಿಗೆ ತಿನ್ನಲು ಅನ್ನ ಬಿಡಿ
ಕೂಡ ಸಿಕ್ಕಿಲ್ಲ. ಊಟಕ್ಕಾಗಿ ತಾಸುಗಟ್ಟಲೆ ಕಾದು
ಹೊಟ್ಟೆಯಲ್ಲೆ ಮರಳಿ ಹೋದ ಜನರಿಗೆ ಲೆಕ್ಕ

ರಾಜುಗೌಡನ ಪುಢಾರಿ ರಾಜಕ

2004 ಚುನಾವಣೆಯಲ್ಲಿ ಕನ್ನಡ ನಾಡು ಪ
ಗೆದ್ದು ಬಂದ ಏಕೈಕ ಅಭ್ಯರ್ಥಿ ರಾಜುಗೌಡ. ಈ
ಮೊದಲು ಸುರಪುರ ಕ್ಷೇತ್ರದ ಜನತೆ ಕೇಳಿರಲೇ
ಈತ ಮಾಜಿ ಶಾಸಕ ವೆಂಕಟಪ್ಪ ನಾಯಕನ
ಗೂಂಡಾಗಿರಿ ಮಾಡಿಕೊಂಡು ಸುತ್ತುತ್ತಿದ್ದ. ಚುನಾವ
ಪ್ರಾಕ್ಸಿ ಮತಗಳನ್ನು ಹಾಕಿಸುತ್ತ ವೆಂಕಟಪ್ಪ ನಾ
ಗೆಲುವಿಗೆ ಶ್ರಮಿಸುತ್ತಿದ್ದ. ಆ ಕಾರಣಕ್ಕಾಗಿಯೇ ನಾ
ನಂಬಿಗಸ್ಥ ಬಂಟನೆನಿಸಿಕೊಂಡಿದ್ದ. ಚೂರುಪಾರು ತಿಂ
ಇರಲೆಂದುಕೊಂಡ ವೆಂಕಟಪ್ಪ ನಾಯಕ ಗೂ
ತಿರುಗುತ್ತಿದ್ದ ಇವನನ್ನು ರಾಜಕೀಯಕ್ಕೆ ಕರೆತಂದು
ಪಂಚಾಯತ್ ಸದಸ್ಯನನ್ನಾಗಿ ಮಾಡಿದ. ಮೇಯ
ಮೇಯಿಸಿದವನಿಗೆ ಎದುರು ನಿಲ್ಲುವಂತೆ ಈ ರಾ
ವೆಂಕಟಪ್ಪ ನಾಯಕನ ವಿರುದ್ಧವೇ ಸ್ಪರ್ಧಿಸಿ ಆರಿಸಿ
ಶಾಸಕನಾದ. ಮಾಜಿ ಶಾಸಕ ವೆಂಕಟಪ್ಪ ನಾಯಕನ ಧ
ದಬ್ಬಾಳಿಕೆಗೆ ಬೇಸತ್ತಿದ್ದ ಜನ, ಕಾಕ, ಕಾಕ ಮಾವ, ಅತ್ತೆ
ಹೆಗಲ ಮೇಲೆ ಕೈ ಇಟ್ಟು ಮತ ಬೇಡಿದ ರಾಜು
ವೆಂಕಟಪ್ಪ ನಾಯಕನಿಗಿಂತ ವಾಸಿಯೆನಿಸಿ ವೆ
ನಾಯಕನ ವಿರುದ್ಧ ಸೆಡ್ಡು ಹೊಡೆದರು.

ವೆಂಕಟಪ್ಪ ನಾಯಕನ ಸೋಲಿನಿಂದ ಇಲ್ಲಿ
ಬಹಳಷ್ಟು ಬದಲಾವಣೆಯನ್ನು ನಿರೀಕ್ಷಿಸಿದ್ದರು.
ಶಾಸಕನಾದ ಮೇಲೆ ರಾಜುಗೌಡ ಮಾಡಿದ್ದಾದರೂ
ಮೊದಲ ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿ
ಅಪ್ಪ ಮಾಡಿದ ಆಸ್ತಿ ಕರಗಿ 8 ಲಕ್ಷ ಸಾಲ ಮಾಡಿಕ
ರಾಜೂಗೌಡ ಈಗ 450 ಎಕರೆ ಭೂಮಿ, 8 ಸ್ಕಾಪಿ
ಹಾದಿಬೀದಿಗೊಂದರಂತಿರುವ ಫ್ಲಾಟು, ಸೈಟುಗಳ
ಸುರಪುರದ ಹಾದಿ, ಬೀದಿ, ಜನರ ಬದುಕು ಯಾ
ಬದಲಾವಣೆ ಕಾಣದಿದ್ದರೂ ಈ ರಾಜುಗೌಡ
ನೋಡುನೋಡುತ್ತಿದ್ದಂತೆ ಕುಬೇರನಾಗಿದ್ದಾನೆ.

ಲೋಕಸಭಾ ಚುನಾವಣೆಗೆ ಚೆಡ್ಡಿ ತಾಲೀಮ



ಚುನಾವಣೆ ಹತ್ತಿರವಾಗುತ್ತಿದ್ದಂತೆ ಎಲ್ಲಾ ರಾಜಕೀಯ ಪಕ್ಷಗಳ ರಂಗತಾಲೀಮು ಶುರುವಾಗುವುದು ಸಹಜ. ಕಾಂಗ್ರೆಸ್, ಜನತಾದಳದಂತಹ ಪಕ್ಷಗಳಾದರೆ ಪಕ್ಷ ಸಂಘಟನೆಯಲ್ಲಿ ತೊಡಗುವುದು, ಜಿಲ್ಲಾ, ತಾಲ್ಲೂಕು, ಗ್ರಾಮ ಮಟ್ಟದ ಪಕ್ಷ ಸಮಿತಿಗಳನ್ನು ಪುನರ್ರಚಿಸುವುದು, ಬೂತ್ ಕಮಿಟಿಗಳನ್ನು ಮಾಡುವುದು – ಹೀಗೇ ಏನೇನೋ ಕಸರತ್ತು ಮಾಡುತ್ತಿರುತ್ತಾರೆ. ಆದರೆ, ಬಿಜೆಪಿಯ ಚುನಾವಣಾ ತಯಾರಿ ಹಾಗಲ್ಲ, ಭಜರಂಗದಳ, ವಿಎಚ್‌ಪಿಗಳಂಥ ತನ್ನ ಚೆಡ್ಡಿ ಪಟಾಲಂ ಮೂಲಕ ಸೂಕ್ಷ್ಮ ಜಾಗಗಳನ್ನು ಹುಡುಕಿ ಹಿಂದೂ-ಮುಸ್ಲಿಮರ ನಡುವೆ ಬೆಂಕಿ ಹಚ್ಚುವುದು; ಕೋಮು ಗಲಭೆಗಳನ್ನೆಬ್ಬಿಸಿ ತನ್ನ ಹಿಂದೂ ಓಟ್ ಬ್ಯಾಂಕನ್ನು ಭದ್ರಪಡಿಸಿಕೊಳ್ಳುವುದು – ಇದು ಅದರ ವಿಶೇಷ ಕಾರ್ಯವೈಖರಿ.

ಈಗ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದೆ. ಬಿಜೆಪಿಯ ಇಂಥ ರಂಗತಾಲೀಮೂ ಶುರುವಾಗಿದೆ.

ಹುಬ್ಬಳ್ಳಿಯ ಒಂದು ಘಟನೆಯನ್ನೇ ನೋಡಿ. ಮೊನ್ನೆ ಮುಂಬಯಿ ಮೇಲೆ ಉಗ್ರರ ದಾಳಿಯಾಯಿತಲ್ಲ? ಹಿಂದೂತ್ವ ಮೂಲಭೂತವಾದಿ ಸಂಘಟನೆಗಳೇ ಅದರ ಹಿಂದಿರುವ ಶಕ್ತಿಗಳು ಎಂದು 'ಹುಬ್ಬಳ್ಳಿ-ಧಾರವಾಡ ಮುಸ್ಲಿಮ್ ಏಕೀಕರಣ ಸಮಿತಿಯ ದಾದಾಪೀರ್ ನದಾಫ್ ಎಂಬುವವರು ಅವಸರವಸರವಾಗಿ ಹೇಳಿಕೆ ಕೊಟ್ಟರು. ಎಲ್ಲಾದರೂ ಬಾಂಬ್ ಸ್ಫೋಟವಾದರೆ ಅದನ್ನು ಮುಸ್ಲಿಮ್ ಮತಾಂಧ ಭಯೋತ್ಪಾದಕರೇ ಮಾಡಿದ್ದಾರೆಂದು ಹೇಳುವ ಕಾಲ ಈಗಿಲ್ಲ, ಹಿಂದೂ ಮತಾಂಧ ಭಯೋತ್ಪಾದಕರೂ ಕಂಡಕಂಡಲ್ಲಿ ಬಾಂಬ್ ಸ್ಫೋಟಿಸುವ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವುದು ಬೆಳಕಿಗೆ ಬಂದಿದೆ. ಹಾಗಾಗಿ ಎಲ್ಲಾದರೂ ಭಯೋತ್ಪಾದಕ ದಾಳಿಯಾಗಿದೆಯೆಂದರೆ ಅದನ್ನು ನಿರ್ದಿಷ್ಟ ಸಮುದಾಯದವರೇ ಮಾಡಿದ್ದಾರೆಂದು ತನಿಖೆ ನಡೆಸದೇ ಹೇಳುವುದು ಕಷ್ಟ. ಇಂತಹ ಸಂದರ್ಭದಲ್ಲಿ ಮುಂಬಯಿ ದಾಳಿಯನ್ನು ಹಿಂದೂ ಮತಾಂಧರೆ ಮಾಡಿದ್ದಾರೆಂದು ಅವಸರವಸರವಾಗಿ ಹೇಳಿದ್ದು ಅವರ ದುಡುಕು ಬುದ್ಧಿಗೆ ಒಂದು ನಿದರ್ಶನವಾಯಿತಷ್ಟೇ



ಜಬ್ಬಾರ್ [illegible]



ನದಾಫ್



ಇನ್ನು ಭಜರಂಗದಳ, ವಿಎಚ್‌ಪಿ, ಶ್ರೀರಾಮಸೇನೆ, ಎಬಿವಿಪಿ, ಬಿಜೆಪಿಯಂಥ ಸಂಘಪರಿವಾರದ ಮಂಗಗಳು ಸುಮ್ಮನಿರಬೇಕೆ? ಅದೂ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಹೊತ್ತಿನಲ್ಲಿ? ಅವರಿಗೆ ದೇಶಭಕ್ತರೆನಿಸಿಕೊಳ್ಳಲು, ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟಲು ಒಂದು ಒಳ್ಳೆಯ ಅವಕಾಶ ಸಿಕ್ಕಂತಾಯಿತು. ತಕ್ಷಣ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ

ಮುಸ್ಲಿಂ ಏಕೀಕರಣ ಸಮಿತಿಯ ಪದಾಧಿಕಾರಿಗ
ಬಂಧಿಸಬೇಕು, ಇಲ್ಲವಾದರೆ ಹುಬ್ಬಳ್ಳಿ-ಧಾರವಾ
ಬಂದ್ ಮಾಡುವುದಾಗಿ ಬೆದರಿಕೆ ಹಾಕಿದರು.
ಡಿಸೆಂಬರ್ ಏಳರಂದು ಪೊಲೀಸ್ ಕಮೀಷನರ
ತಮ್ಮ ಕಚೇರಿಯಲ್ಲಿ ಎರಡೂ ಸಮುದಾಯಗಳ
ಮುಖಂಡರ ಸಭೆ ಕರೆದು ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಪ್ರಯತ್ನಿಸಿದರು. ಆದರೆ ಸಮಸ್ಯೆ ಬಗೆಹರಿದರೆ ಸಂಘಪರಿವಾರಿಗಳಿಗೆ ಕೂಗಾಡುವುದಕ್ಕೆ ಬೇರೆಯೇನಿರುತ್ತದೆ
ಅದಕ್ಕಾಗಿ ಅವರು ಸಭೆಗೆ ಹೋಗಲೆ
ಇಲ್ಲ. ಅದೂಅಲ್ಲದೇ ಹೇಳಿಕೆ ಕೊಟ
ತಮ್ಮ ಹೇಳಿಕೆ ವಾಪಸ್ಸು ಪಡೆದು ಕ್ಷಮೆಯಾಚಿಸುವುದಾಗಿ ಹೇಳಿದರೂ ಅದಕ್ಕೂ ಅವರು ಮಣಿಯಲಿಲ್ಲ. ಅಂತೂಇಂತೂ ಪೊಲೀಸರ ಮೇಲೆ ತಂದು ಮೂವರು ಮುಸ್ಲಿಂ ಮುಖಂಡರನ್ನು ಜೈಲಿಗಟ್ಟುವಲ್ಲಿ ಸಂಘಪರಿವಾರಿಗಳು ಯಶಸ್ವಿಯಾಗಿದ
ಪೊಲೀಸರೂ ಕೂಡ ಕೋಮು ಸೌ
ಕಾಪಾಡುವುದಕ್ಕೆ ಈ ಬಂಧನ ಅವಶ್ಯಕವಾಗಿತ್ತು ಎಂದು ಸಮರ್ಥಿಸಿಕೊಂಡಿದ್ದಾರೆ.

ಇನ್ನೊಂದೆಡೆ ನೋಡಿ. ಇದೇ ಭಜರಂಗಿಗಳು 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಬಾಬ್ರಿ ಮ
ಕೆಡವಿದ ದಿನದ ನೆನಪಿನಲ್ಲಿ ಇದೇ ಡಿಸೆಂಬರ್ 6ನ್ನು ಶೌರ್ಯ ದಿನವನ್ನಾ
ಆಚರಿಸಿದರು. ಮುಸ್ಲಿಮರನ್ನು ಕೆರಳಿ
ಕೋಮು ಸೌಹಾರ್ದವನ್ನು ಕದಡುವ
ಪ್ರಚೋದನಾಕಾರಿ ಫೋಟೋಗಳನ್ನು
ಕರಪತ್ರಗಳನ್ನು ಬಹಿರಂಗವಾಗಿ ಹಂಚ
ಭಾಷಣ ಮಾಡಿದರು. ಇದಕ್ಕೆ ಯಾವ

ಎಡಬಿಡಂಗಿ ರಾಜಕಾರಣಿ

ಯಾವುದೇ ಸಿದ್ಧಾಂತಗಳ, ನೈತಿಕತೆಯ ಗೀಳಿಲ್ಲದ ... ತಕ್ಕಡಿಯ ಮೇಲೆ ಕಳ್ಳೆಯನ್ನಿಟ್ಟು ತೂಗಿದಂತೆ. ... ಪಕ್ಷವಾದ ಕನ್ನಡ ನಾಡುವಿನಿಂದ ಮೊದಲು ... ಎಬಿಪಿಜೆಡಿ, ಜನತಾದಳ, ಕಾಂಗ್ರೆಸ್ ಮೊದಲಾದ ...ಮುಖ ಪಕ್ಷಗಳಲೆಲ್ಲಾ ಸುತ್ತಾಡಿಕೊಂಡಿದ್ದ ಈತ ...ಕಾಲದಲ್ಲಿ ಖಾಕಿ ಚಡ್ಡಿ ತೊಟ್ಟು ಬಿಜೆಪಿ ಪಾಲಾಗಿದ್ದಾನೆ. ...ಟಕದಲ್ಲಿ ಅಸ್ತಿತ್ವದಲ್ಲಿರುವ ಯಾವ ಪಕ್ಷಗಳು ಇವನು ...ವುದಕ್ಕಾಗಿಯಾಗಲಿ ಹೊರಬರುವುದಕ್ಕಾಗಿಯಾಗಲಿ ...ವಿಲ್ಲ. ಇಂಥ ಎಡಬಿಡಂಗಿಯಾದ ಈತ ಚಡ್ಡಿಗಿಂತ ...ಗಳ ಸಹವಾಸಕ್ಕೆ ಪ್ರಾಮುಖ್ಯತೆ ನೀಡಿ ರೆಡ್ಡಿಗಳಿಗೆ ...ರ್ಣವಾಗುಳಿದ ಸಂಪತ್ತನ್ನು ನೆಕ್ಕುತ್ತಿ...ನೆ. ಅವರೊಂದಿಗಿನ ಸಂಬಂಧವನ್ನು ...ಪಡಿಸಿಕೊಳ್ಳಲೆಂದೇ ಸಹೋದರನ ...ದುವೆಗೆ ಅದ್ದೂರಿ ಖರ್ಚು ಮಾಡಿ ...ದಿ ರೌಡಿ ಕಂ ಆರೋಗ್ಯ ಸಚಿವ ...ರಾಮುಲು, ಆನಂದ್‌ಸಿಂಗ್ ಮೊದ...ದವರನ್ನು ಕರೆಸಿಕೊಂಡು ಸತ್ಕರಿಸಿದ್ದಾನೆ.

ಬಬ್ಲೂನ ಮೂಲ ಕಸಬು ಬೇಟೆ!?

ಗೇಣುದ್ದ ಕೂದಲು ಬಿಟ್ಟುಕೊಂಡು ...ಟ್ ಕಾಡುಪ್ರಾಣಿಯಂತಿರುವ ಬಬ್ಲೂಗೆ ...ದಿ, ಮೊಲ, ಗುಬ್ಬಿ, ಗೌಜುಗ, ಉಡ ...ಬಂತಾದ ಅಮಾಯಕ ಕಾಡು ...ಣಿಗಳನ್ನು ಬೇಟೆಯಾಡುವುದೇ ಮೂಲ ...ಸಬು. ನಾಲಿಗೆ ರುಚಿ ತೀರಿಸಿಕೊಳ್ಳಲು ...ಪಕ್ಷಿ ಪ್ರಾಣಿಗಳನ್ನು ಕೊಲ್ಲುವ ಈ ...ಬಡಾಡಿ ಗುಂಡನ ತೊಗಲಿನ ತೀಟೆಗೆ ...ಯಾದ ಮುಗ್ಧ ಮಹಿಳೆಯರಿಗೆ ...ವಿಲ್ಲ. ಹಿಂದೊಮ್ಮೆ ಅಲೆಮಾರಿ ಜನಾಂಗಕ್ಕೆ ಸೇರಿದ ...ಚುಟಗರ ರೂಪವಂತ ಮಹಿಳೆಯನ್ನು ಬಲಾತ್ಕರಿಸಲು ...ೋಗಿ ಸಖತ್ತಾಗಿ ಗೂಸಾ ತಿಂದಿದ್ದ. ಇಷ್ಟಾದರೂ ತನ್ನ ...ೆ ಚಾಳಿಯನ್ನು ಮುಂದುವರೆಸಿದ್ದ ಬಬ್ಲೂ ಗೂಂಡಾಗಿರಿ ...ಡಿಕೊಂಡು ತಿರುಗುವ ಇಂಥ ಲಫಂಗ ಸಹೋದರನಿಗೆ ...ರೋಗ್ಯ ಸಚಿವ ಶ್ರೀರಾಮುಲು ಸಹಾಯದಿಂದ ಆಂಧ್ರ ...ಮೂಲದ ಶ್ರೀಮಂತ ಮನೆಯ ಮುಗ್ಧ ಹುಡುಗಿಯನ್ನು ...ದು ಕಟ್ಟಿ ಬಲಿ ಕೊಡಲಾಗಿದೆ.



ಹನುಮಂತ ನಾಯ್ಕ

ಭಿಕ್ಷೆ ಬೇಡಿದ ಶಾಸಕ

ಮದುವೆಗೆ ಬಂದ ರಾಜಕಾರಣಿಗಳು, ಶ್ರೀಮಂತರು ಬಂಗಾರದ ಕಡಗಗಳಿಂದ ಬಬ್ಲೂನ ಕೈತುಂಬಿಸಿದ್ದಾರೆ. ಇದಕ್ಕಿಂತ ಮೊದಲು ಶಾಸಕ ರಾಜುಗೌಡ ವಿವಿಧ ಇಲಾಖೆಗಳಿಂದ, ಕಂಟ್ರಾಕ್ಟರುಗಳಿಂದ, ಊಟ ಮಾಡಿದವರಿಂದ ಮುಡಿಗಾಸಿನ ಭಿಕ್ಷೆ ಪಡೆಯಲು ನಾಲ್ಕೈದು ಕೌಂಟರ್‌ಗಳನ್ನು ಮಾಡಿ ಡಬ್ಬಿಯಿಟ್ಟು ಹಣ ಸಂಗ್ರಹಣೆಗೆ ಶಿಕ್ಷಕರನ್ನು ಕೂರಿಸಿದ್ದ.

ಮದುವೆಯ ಹಿಂದಿನ ದಿನದಿಂದ ಹಿಡಿದು ಮದುವೆ ಮುಗಿಯುವವರೆಗೆ ಎಲ್ಲಾ ಕೆಲಸಗಳನ್ನು ಮಾಡಿದವರು ಶಿಕ್ಷಕರು, ಕೆಇಬಿ ನೌಕರರು, ಪಂಚಾಯತಿ ನೌಕರರು. ಗುರುದೇವೋಭವ ಎಂದು ಭಾಷಣ ಬಿಗಿಯುವ ಈ ಶಾಸಕ ಊಟ ನೀಡಲು, ಕುರ್ಚಿ ಹಾಕಲು, ಕಸ ಬಳಿಯಲು ಹಣದ ಹುಂಡಿ ತುಂಬಿಸಲು ಶಿಕ್ಷಕರನ್ನೇ ಬಳಸಿಕೊಂಡಿದ್ದಾನೆ. ತನಗೆ ಪಾಠ ಕಲಿಸಿದ ಗುರು ಸಮೂಹವನ್ನೇ ಕೂಲಿಯಾಳುಗಳಂತೆ ನಡೆಸಿಕೊಂಡ ರಾಜುಗೌಡನ ಈ ವರ್ತನೆ ಅವನ ಸಂಸ್ಕೃತಿಗೆ ಕೈಗನ್ನಡಿ. ಸರ್ಕಾರಿ ನೌಕರರನ್ನು ತನ್ನ ವೈಯಕ್ತಿಕ ಕೆಲಸಗಳಿಗೆ ಬಳಸಿಕೊಳ್ಳಬಾರದೆಂಬ ಕನಿಷ್ಠ ಜ್ಞಾನವಿಲ್ಲದ ರಾಜುಗೌಡನಿಗೆ ಏನನ್ನಬೇಕು.

ಎಲ್ಲರೆದುರೇ ಬಾಲ್ಯವಿವಾಹ

ಕಾನೂನನ್ನು ರಕ್ಷಿಸಿ, ಗೌರವಿಸಬೇಕಾದ ಪೊಲೀಸರು, ಜನ ಪ್ರತಿನಿಧಿಗಳ ಸಮ್ಮುಖದಲ್ಲೇ ಬಾಲ್ಯ ವಿವಾಹಗಳು ನಡೆದವು. 401 ಜೋಡಿಗಳ ಸಾಮೂಹಿಕ ವಿವಾಹದಲ್ಲಿ 15 ರಿಂದ 20 ಜೋಡಿಗಳು 18 ವರ್ಷಕ್ಕಿಂತ ಕೆಳಗಿನವರು. ಇಷ್ಟೆಲ್ಲಾ ಅವಘಡಗಳು ನಡೆದರೂ ವಿರೋಧಿಸಬೇಕಾದ ಪ್ರತಿಪಕ್ಷದವರು ಬಾಯಿಮುಚ್ಚಿಕೊಂಡು ಕೂತಿದ್ದರೆ, ಈ ಶಾಸಕನನ್ನು ಎಚ್ಚರಿಸಬೇಕಾದ ಮಾಧ್ಯಮಗಳು ಅವನನ್ನೇ ಹಾಡಿ ಹೊಗಳಿದವು. ಸುರಪುರದ ಜನರನ್ನು ಈ ದಬ್ಬಾಳಿಕೆಗಳಿಂದ ಕಾಪಾಡುವವರಾರು?

■ ಮಹಾಲಿಂಗಪ್ಪ ಆಲಬಾಳ

...ಲೀಸ್ ...ಕಾರಿಯೂ ಆಕ್ಷೇಪ ...ಪಡಿಸಲಿಲ್ಲ, ಇದು ...ತಿ, ಕೋಮು ...ಹಾರ್ದ ಕದಡುವ ...ಯತ್ನ ಎಂದು ...ಲೀಸ್ ...ಮೀಷನರ್ ...ಕುಮಾರ್‌ಗೆ ...ನ್ನಿಸಲೇ ಇಲ್ಲ. ...ಹಾಗಿ ಯಾವ ಭಜರಂಗಿ ನಾಯಕನನ್ನೂ ಅವರು ...ಧಿಸಲಿಲ್ಲ.


...ಆ ಶೌರ್ಯ ದಿನದ ರಾತ್ರಿಯೇ ...ಶಿವಿಹಕ್ಕಲದಲ್ಲಿರುವ 'ಹಜರತ್ ಬಂದೇಶಹಾ ...ದ್ರಿ' ಎಂಬ ದರ್ಗಾ ಮೇಲೆ ದಾಳಿ ನಡೆದಿದೆ; ...ಮೂವತ್ತೈ ಪೆಟ್ರೋಲ್ ಬಾಂಬುಗಳನ್ನು ತಯಾರಿಸಿ ...ದ ಮೇಲೆ ಎಸೆಯಲಾಗಿದೆ. ಪರಿಣಾಮವಾಗಿ ...ರಿಗಳ ಮೇಲೆ ಹೊದಿಸಲಾಗಿದ್ದ ಹಸಿರು ...ಗಳಿಗೆ ಬೆಂಕಿಹೊತ್ತಿಕೊಂಡಿದೆ. ಅಲ್ಲಿ ಮಲಗಿದ್ದ ...ಸಿದು ...ರಿಗೊಂಡು ಬೆಂಕಿ ...ಸಿದ್ದಾರೆ. ತಕ್ಷಣ ...ಕು ...ಕ್ಕದವರಿಗೂ ... ...ಕೋಪತುಂಡವಾಗಿ ... ...ರಂಭಿಸಿದ್ದಾರೆ. ...ಯು ...ಸೆಟ್ಟಿ ಪೊಲೀಸ್ ...ಗ ಕೂಗಳತೆಯಲ್ಲಿ ಈ ದರ್ಗಾವಿದ್ದರೂ ... ಪೊಲೀಸರೂ ಬರಲಿಲ್ಲ. ಯಾವಾಗ ...ದು ಕೋಮುಗಲಭೆಯಾಗಿ ...ಸಿಗೊಳ್ಳುವ ಕಡೆ ಹೊರಟಿತೋ ಆಗ ...ರಿಗೆ ಎಚ್ಚರವಾಗಿದೆ. ತಕ್ಷಣ ದರ್ಗಾಕ್ಕೆ ಬಂದು ... ಮುಖಂಡರನ್ನು ಸಮಾಧಾನಪಡಿಸಿ, ...ಗೆ ರಾತ್ರಿ ಅರ್ಧ ಸುಟ್ಟಿದ್ದ ಗೋರಿಯ



ಬೆಂಕಿಗಾಹುತಿಯಾದ ಗೋರಿ

ಬಟ್ಟೆಗಳನ್ನು ಬದಲಾಯಿಸಿ, ಹೂವಿನ ಮಾಲೆಗಳಿಂದ ಮುಚ್ಚಿ ಶೃಂಗರಿಸಿದ್ದಾರೆ. ದರ್ಗಾದ ಮೇಲೆ ಪೆಟ್ರೋಲ್ ಬಾಂಬುಗಳನ್ನು ಎಸೆದಿದ್ದು ಕೋಮುಸೌಹಾರ್ದ ಕದಡುವ ಕೆಲಸ ಎಂದು ಪೊಲೀಸ್ ಕಮೀಷನರ್ ಶಿವಕುಮಾರ್‌ಗೆ ಅನ್ನಿಸಲೇ ಇಲ್ಲ. ಹಾಗಾಗಿ ಯಾರನ್ನೂ ಅವರು ಬಂಧಿಸಲೇ ಇಲ್ಲ.

ಈ ಕೃತ್ಯ ಎಸಗಿದವರು ದುಷ್ಕರ್ಮಿಗಳು ಎಂಬ ಮಾಮೂಲಿ ಹಾರಿಕೆಯ ಉತ್ತರವನ್ನು ಪೊಲೀಸರು ಕೊಟ್ಟಿದ್ದಾರೆ. ಪೊಲೀಸರಿಗಾಗಲೀ, ಜನರಿಗಾಗಲೀ ಅದನ್ನು ಮಾಡಿದ್ದು ಯಾರು ಎಂಬ ಬಗ್ಗೆ ಅನುಮಾನವಿಲ್ಲ. 2007ರಲ್ಲೂ ಈ ದರ್ಗಾದ ಮೇಲೆ ಇದೇ ಮಾದರಿಯ ದಾಳಿ ನಡೆದಿತ್ತು, ಆಗ ಜಬ್ಬಾರ್ ಖಾನ್ ಹೊನ್ನಳ್ಳಿಯವರು ಶಾಸಕರಾಗಿದ್ದರು. ಈ ದರ್ಗಾವಿರುವ ಜಾಗ ತಮಗೆ ಸೇರಿದ್ದೆಂದು ಅದರ ಪಕ್ಕದಲ್ಲಿರುವ ಪೆಟ್ರೋಲ್ ಬಂಕ್ ಮಾಲಿಕರು ಕೋರ್ಟ್ ಮೆಟ್ಟಿಲೇರಿದ್ದರು. ಆಗ ಒಂದಿಷ್ಟು ಜಾಗವನ್ನು ಪೆಟ್ರೋಲ್ ಬಂಕ್ ಮಾಲಿಕರಿಗೆ ಕೊಡಿಸುವ ಮೂಲಕ ಈ ವಿವಾದವನ್ನು ರಾಜಿಯಲ್ಲಿ ಕೊನೆಗೊಳಿಸಿದವರೇ



ಹೊನ್ನಳ್ಳಿಯವರು. ಈ ಹೊತ್ತು ದರ್ಗಾದ ಮೇಲೆ ದಾಳಿ ನಡೆದಾಗ ಹೊನ್ನಳ್ಳಿಯವರು ಅಡ್ರೆಸ್‌ಗೆ ಇಲ್ಲ.

ಇದೆಲ್ಲಾ ಲೋಕಸಭಾ ಚುನಾವಣೆಗಾಗಿ ಸಂಘಪರಿವಾರಿಗಳು ಶುರುಹಚ್ಚಿಕೊಂಡಿರುವ ತಾಲೀಮು ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ.

■ ಹುಬ್ಬಳ್ಳಿಯಾಂವ

ಚನ್ನಪಟ್ಟಣ: ದಲಿತಪರ ಹೋರಾಟಗಾರ್ತಿಯ ಮೇಲೆಯೇ ಅಟ್ರಾಸಿಟಿ ಕೇಸು!

ದಲಿತರ ಮೇಲೆ ದಿನನಿತ್ಯ ನಡೆಯುವ ಹತ್ತಾರು ರೂಪದ ದೌರ್ಜನ್ಯಗಳು, ಜಾತಿನಿಂದನೆ ಪ್ರಕರಣಗಳು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತುವುದೇ ಇಲ್ಲ. ನಿಜವಾಗಲೂ ಜಾತಿನಿಂದನೆ ನಡೆದ ದೂರನ್ನು ಠಾಣೆಯವರೆಗೆ ತೆಗೆದುಕೊಂಡು ಹೋದರೂ, ಎರಡೂ ಪಾರ್ಟಿಗಳನ್ನು ಅಲ್ಲಿಗೆ ಕರೆಸಿ ಬಯ್ದು ರಾಜಿ ಮಾಡಿಸಿ ಕಳಿಸುವ ಸನ್ನಿವೇಶಗಳೇ ಹೆಚ್ಚು. ಆದರೆ ಚನ್ನಪಟ್ಟಣದಲ್ಲಿ ಇದಕ್ಕಿಂತ ಭಿನ್ನವಾದ ಪ್ರಕರಣವೊಂದು ನಡೆದಿದೆ. ಪೊಲೀಸರೇ ಖುದ್ದು ಆಸಕ್ತಿ ವಹಿಸಿ ಜಾತಿನಿಂದನೆ ಪ್ರಕರಣವನ್ನು ದಾಖಲಿಸಿಕೊಂಡಿದ್ದಲ್ಲದೆ, ಬೆಳಗಿನ ಜಾವವೇ ಮಹಿಳೆಯೊಬ್ಬರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಅಂದರೆ ಚನ್ನಪಟ್ಟಣದಲ್ಲಿ ಜಾತಿದೌರ್ಜನ್ಯಗಳನ್ನು ಪೊಲೀಸರು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ ಎಂದು ನೀವು ಅರ್ಥ ಮಾಡಿಕೊಂಡರೆ ಮೋಸ ಹೋಗುತ್ತೀರಿ. ಇಲ್ಲಿ ಆಗಿರುವುದೇ ಬೇರೆ.

ಇಲ್ಲಿ ಕೇಸು ದಾಖಲಿಸಿ ಬಂಧಿಸಿರುವುದು ಯಾರನ್ನು ಗೊತ್ತೇ? ನಿರಂತರವಾಗಿ ದಲಿತ ಪರ ಕೆಲಸ ಮಾಡಿಕೊಂಡು ಬರುತ್ತಿರುವ, ಅದೇ ಕಾರಣಕ್ಕೆ ಇಲ್ಲಿನ ಪಟ್ಟಭದ್ರ ಹಿತಾಸಕ್ತಿಗಳ ವಿರೋಧ ಕಟ್ಟಿಕೊಂಡಿರುವ ಸ್ಪಂದನ ಸಂಘಟನೆಯ ಮಾಲಿನಿಯವರನ್ನು. ಬೆಂಗಳೂರು ಸುತ್ತಮುತ್ತ ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಬಹುತೇಕರಿಗೆ ಚನ್ನಪಟ್ಟಣದ ಸ್ಪಂದನ ಸಂಘಟನೆ ಮತ್ತು ಮಾಲಿನಿಯವರ ಪರಿಚಯ ಇದೆ. ಹಲವಾರು ವರ್ಷಗಳಿಂದ ಚನ್ನಪಟ್ಟಣದಲ್ಲಿ ನಿರಂತರವಾಗಿ ಮಹಿಳೆಯರ ಅದರಲ್ಲೂ ದಲಿತ ಮಹಿಳೆಯರ ಜೊತೆಗೂಡಿ ಸ್ಪಂದನ ಹತ್ತು ಹಲವು ರೀತಿಯ ಚಟುವಟಿಕೆಗಳನ್ನು ಮಾಡುತ್ತಾ ಬಂದಿದೆ. ಬೇರೆಲ್ಲೂ ಪರಿಹಾರ ಕಾಣದ ಅಸಹಾಯಕ ಹೆಣ್ಣು ಮಕ್ಕಳು ಅಂತಿಮ ಆಸರೆಯಾಗಿ ಸ್ಪಂದನದ ಬಾಗಿಲು ತಟ್ಟಿದವರಿಗೆ ನೆರವಾಗಿ ಈ ಸಂಘಟನೆ ಕೆಲಸ ಮಾಡುತ್ತಾ ಬಂದಿದೆ. ಹಾಗಾಗಿಯೇ ಇಂದು ಜಾತಿ ದೌರ್ಜನ್ಯಕ್ಕೆ, ಕೌಟುಂಬಿಕ ಹಿಂಸೆಗೆ ಗುರಿಯಾದ ಬಹುತೇಕರು ಸ್ಪಂದನದವರನ್ನೇ ಮೊದಲು ಸಂಪರ್ಕಿಸುತ್ತಾರೆ. ಇದರಿಂದ ತೊಂದರೆಗೊಳಗಾಗಿರುವವರು ಯಾರು? ಯಾರು ಇಂತಹ ದೌರ್ಜನ್ಯಕ್ಕೆ ತಾವೇ ನೇರವಾಗಿ ಕಾರಣರಾಗಿರುತ್ತಾರೋ ಅಂತಹವರು ಮತ್ತು ಇಂತಹ ಪ್ರಕರಣಗಳಲ್ಲಿ ಮಧ್ಯವರ್ತಿಗಳಾಗಿ ತಾವೂ ಹಣ ಮಾಡಿಕೊಳ್ಳುವ ಪುಢಾರಿಗಳು ಮಾತ್ರ.

ಅಂತಹ ಪುಢಾರಿಗಳೆಲ್ಲರ ನಾಯಕಿಯಾಗುವಷ್ಟು ಸಾಮರ್ಥ್ಯ ಮತ್ತು ಅಡ್ಡಕಸುಬಿತನ ಇರುವ ಒಬ್ಬಳು ಇದೇ ಚನ್ನಪಟ್ಟಣ ತಾಲೂಕಿನಲ್ಲೇ ಇರುವುದು ಇಲ್ಲಿನ ದುರಂತವಾಗಿದೆ. ಅವಳೇ ಕುಮಾರಿ. ಹಾಲಿ ಬಿಜೆಪಿ ಮಹಿಳಾ ಮೋರ್ಚಾದ ನಾಯಕಿಯಾಗಿರುವ ಈಕೆಯ ಚಟುವಟಿಕೆಗಳು ಯಾವ ರೀತಿಯಿವೆ ಎಂದರೆ ಸ್ವತಃ ಬಿಜೆಪಿಯವರೇ ಇವಳನ್ನು ನೋಡಿ ಅಸಹ್ಯ ಪಟ್ಟುಕೊಳ್ಳುವಂತಾಗಿದೆ. ಹಾಗಲಕಾಯಿಗೊಂದು ಬೇವಿನಕಾಯಿ ಸಾಕ್ಷಿ ಎಂಬಂತೆ ಇವಳ ಜೊತೆ ಸುಕನ್ಯಾ ಎಂಬ ಇನ್ನೊಂದು ಐನಾತಿ ಸಿಕ್ಕಿದೆ. ಈ ಸುಕನ್ಯಾ ಹಿಂದೆ ಒಂದು ಬಾರಿ ನೇಣು ಹಾಕಿಕೊಂಡು ಸಾಯಲು ಹೊರಟಾಗ ಮಾಲಿನಿಯವರೇ ಅವಳನ್ನು ಉಳಿಸಿ ಅವಳು ಬದುಕು ಕಂಡುಕೊಳ್ಳಲು ನೆರವಾಗಿದ್ದರು. ಆದರೆ ಯಾವ ಕೃತಜ್ಞತೆಯೂ ಇಲ್ಲದ ಈಕೆ ಸ್ಪಂದನದ ಹೆಸರಿನಲ್ಲೇ ಹಣ ವಸೂಲಿಗಿಳಿದಾಗ ಸ್ಪಂದನದ ಹುಡುಗಿಯರೆಲ್ಲ ಸೇರಿ ಈಕೆಗೆ ಗೇಟ್‌ಪಾಸ್ ಕೊಟ್ಟಿದ್ದರು. ಬೇರೇನೂ ಉದ್ಯೋಗವಿಲ್ಲದ ಈ ಐನಾತಿ ಜೋಡಿ ಈಗ ಅಲ್ಲಿ ಇಲ್ಲಿ ಹಣ ವಸೂಲಿಯಾಗುವ ಪ್ರಕರಣಗಳನ್ನು ಹುಡುಕುವುದೇ ತಮ್ಮ ಉದ್ಯೋಗ ಮಾಡಿಕೊಂಡಿದ್ದಾರೆ. ಇದೂ ಸೇರಿದಂತೆ ಇವರು ನಡೆಸುವ ಭಾನಗಡಿಗಳೇನೇ ಇರಲಿ, ಮಾಡಿಕೊಂಡು ಹಾಳಾಗಲಿ. ಆದರೆ ಇಲ್ಲಿನ ಜನಪರ ಸಂಘಟನೆಯೊಂದರ ವಿರುದ್ಧ ಕತ್ತಿ ಮಸೆಯದೆ ತಮ್ಮ ಪಾಡಿಗಿದ್ದಿದ್ದರೆ ಸಮಸ್ಯೆಯಿರಲಿಲ್ಲ. ಆದರೆ ಕುಮಾರಿಗೂ ಚನ್ನಪಟ್ಟಣದ ಪೊಲೀಸರಿಗೂ ಏನೋ ನಂಟು ಮೊದಲಿಂದಲೂ ಇದ್ದೇ ಇದೆ. ಆದ್ದರಿಂದಲೇ ಈ ಹಿಂದೆ ಸಹ ಸ್ಪಂದನದ 'ಸಮಾನತಾ ಸಮಾವೇಶ'ದಲ್ಲೂ ಕುಮಾರಿಗೆ ಪೊಲೀಸರೇ ಹಚ್ಚಿಕೊಟ್ಟು ಜಗಳ ಮಾಡಲು ಕಳಿಸಿದ್ದರು.

ದಿನೇದಿನೇ ಜನಪ್ರಿಯವಾಗುತ್ತಾ ಸಾಗಿದ್ದ ಸ್ಪಂದನ ಸಂಘಟನೆಯ ವಿರುದ್ಧ ಏನಾದರೂ ಸರಿಯಾದ್ದು ಮಾಡಲೇ ಬೇಕೆಂದು ಹೊಂಚು ಹಾಕುತ್ತಾ ಕುಳಿತಿದ್ದ ಇವರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ ಇತ್ತೀಚೆಗೆ ಒಂದು ಕೇಸ್ ಸಿಕ್ಕಿದೆ.

ಬೆಂಗಳೂರಿನ ವಿಜಯನಗರದ ಪಿ ಅಂಡ್ ಟಿಯ ಉದ್ಯೋಗಿ ಮರಿಜೋಗಯ್ಯ ಮತ್ತು ವಸಂತಮ್ಮ ಎಂಬಿಬ್ಬರು ಮೋಸಗಾರ ದಂಪತಿಗಳ ವಿರುದ್ಧದ ಒಂದು ಕೇಸ್ ಸ್ಪಂದನದ ಹತ್ತಿರ ಬಂದಿತ್ತು. ಇದೇ ವಸಂತಮ್ಮನ ತಂಗಿಯರಾದ ಶೋಭಾ ಮತ್ತು ಶಕುಂತಲಮ್ಮ ಎಂಬ ಚನ್ನಪಟ್ಟಣ ತಾಲೂಕಿನ ಎಲೇಕೇರಿಯ ಹೆಣ್ಣುಮಕ್ಕಳಿಬ್ಬರ ಸ್ವಂತದ ಹಣ 50 ಸಾವಿರವನ್ನು ಈ ಗಂಡ ಹೆಂಡತಿ ಜೋಡಿ ನುಂಗಿ ನೀರು ಕುಡಿದಿತ್ತು. ಸಹೋದರಿಯರು ಪೊಲೀಸರಿಗೆ ದೂರು ನೀಡಿದರೂ ಏನೂ ಪ್ರಯೋಜನವಾಗದ್ದರಿಂದ ಅವರುಗಳು ಸ್ಪಂದನದ ಮೊರೆ ಹೊಕ್ಕರು. ಈ ದಲಿತ ಹೆಣ್ಣುಮಕ್ಕಳ ಅಸಹಾಯಕ ಪರಿಸ್ಥಿತಿಯನ್ನು ನೋಡಿ ಸ್ಪಂದನದವರು ಮರಿಜೋಗಯ್ಯ ಮತ್ತು ವಸಂತಮ್ಮನನ್ನು ಕರೆಸಿ ಕೇಳಿದಾಗ ಹಣ ನೀಡಬೇಕಿರುವುದನ್ನು ಒಪ್ಪಿಕೊಂಡು ಪತ್ರ ಸಹ ಬರೆದುಕೊಟ್ಟರು.

ಆದರೆ ಪೊಲೀಸರಿಗೆ 10 ಸಾವಿರ ಬೇಕಾದರೆ ಹೋಗಲಿ, ನಿನ್ನ ದುಡ್ಡು ಮಾತ್ರ ಕೊಡಲ್ಲ ಎಂದು ಧಮಕಿ ಹಾಕಿದ್ದ ಮರಿಜೋಗಯ್ಯ ಪತ್ರ ಬರೆದುಕೊಟ್ಟು ಸುಮ್ಮನಾಗಲಿಲ್ಲ. ಆತನೇ ಕುಮಾರಿಯ ಗ್ಯಾಂಗ್‌ಅನ್ನು ಸಂಪರ್ಕಿಸಿದನೋ ಹೇಗೋ ಒಟ್ಟಿನಲ್ಲಿ ಸರಿಯಾಗಿ ಪ್ಲಾನ್ ಮಾಡಿದರು. ಸ್ಪಂದನ ಸಂಘಟನೆಯಲ್ಲಿ ಕೆಲಸ ಮಾಡುವ ಬಹುತೇಕ ಎಲ್ಲರೂ ದಲಿತ ಹೆಣ್ಣುಮಕ್ಕಳೇ ಆಗಿರುವುದರಿಂದ ಮಾಲಿನಿಯವರ ಮೇಲೆ ಮಾತ್ರ ಜಾತಿನಿಂದನೆ, ಕೊಲೆಬೆದರಿಕೆ ಇತ್ಯಾದಿ ಕೇಸು ಕೊಟ್ಟರು. ಇಲ್ಲಿ ಪೊಲೀಸರೂ ತಮ್ಮ ಬುದ್ಧಿ ತೋರಿಸಿ, ಗುರುವಾರ ರಾತ್ರಿ ಕೇಸು ಬರೆಸಿಕೊಂಡರು. ಶುಕ್ರವಾರ ಕೋರ್ಟಿಗೆ ಹಾಜರುಪಡಿಸಿ ಜೈಲಿಗೆ ಕಳಿಸಿದರೆ ಎರಡನೇ ಶನಿವಾರ ಮತ್ತು ಭಾನುವಾರ ಹೇಗೂ ಜಾಮೀನು ಸಿಗದೆ ಮಾಲಿನಿಯವರನ್ನು ಜೈಲಿನಲ್ಲೇ ಇರಿಸಬಹುದು, ಆ ಮೂಲಕ ತಮ್ಮ ಮೀಸೆ ತಿರುಗಿಸಬಹುದೆಂದುಕೊಂಡು ಶುಕ್ರವಾರ ಬೆಳಿಗ್ಗೆ 6.30ಕ್ಕೆ ಮಾಲಿನಿಯವರ ಮನೆ ಮುಂದೆ ಜೀಪು ನಿಲ್ಲಿಸಿದರು.

ಇನ್ನೂ ಮುಖ ತೊಳೆಯದಿದ್ದ, ಬೆಳಿಗ್ಗೆ ತಾವು ತೆಗೆದುಕೊಳ್ಳಬೇಕಿದ್ದ ಮಾತ್ರೆಗಳನ್ನೂ ತೆಗೆದುಕೊಂಡಿರದ ಮಾಲಿನಿಯವರನ್ನು ಬಂಧಿಸಿದ ಚನ್ನಪಟ್ಟಣದ ಪೊಲೀಸರು 9.30ಗಾಗಲೇ ರಾಮನಗರದ ಕೋರ್ಟಿನ ಬಳಿ ಕರೆದುಕೊಂಡು ಹೋದರು. ಆದರೆ ಇಷ್ಟು ವರ್ಷಗಳ ಕಾಲ ಇಲ್ಲಿ ಜನಪರ ಕೆಲಸ ಮಾಡಿರುವ ಇವರು ಗಳಿಸಿರುವ ಜನಬೆಂಬಲ ಹಾಗೂ ಸೆಷನ್ಸ್ ಕೋರ್ಟ್ ನ್ಯಾಯಾಧೀಶರ ಪ್ರಬುದ್ಧ ತೀರ್ಮಾನದಿಂದಾಗಿ ಅಂದೇ ಸಂಜೆ ಜಾಮೀನೂ ಸಿಕ್ಕಿ ಬಿಡುಗಡೆಯಾದರು.

ಚನ್ನಪಟ್ಟಣದ ದಲಿತ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳು ಈಗ ಮುಂದಿನ ಹೋರಾಟಕ್ಕೆ ಅಣಿಯಾಗುತ್ತಿದ್ದರೆ, ಇಲ್ಲಿನ ಕುಮಾರಿಯ ಗ್ಯಾಂಗ್‌ಗೆ ಎಲ್ಲೆಲ್ಲೋ ಮೆಣಸಿನಕಾಯಿ ಇಟ್ಟುಕೊಂಡಂತಾಗಿದೆ. ಇಲ್ಲಿನ ದಲಿತ ಸಂಘಟನೆಗಳು ಕೇಳುತ್ತಿರುವುದು ಒಂದೇ ಪ್ರಶ್ನೆ. ನಿಜವಾಗಲೂ ಜಾತಿದೌರ್ಜನ್ಯ ನಡೆದ ಯಾವ ಪ್ರಕರಣವಲ್ಲಿ ಪೊಲೀಸರು ಇಷ್ಟು ಕಾಳಜಿ ವಹಿಸಿ ಕೆಲಸ ಮಾಡಿದ್ದಾರೆ? ಸ್ಪಂದನ ಸಂಘಟನೆ ಮಾಡುತ್ತಿರುವ ಕೆಲಸದಿಂದ ಪೊಲೀಸರಿಗೆ ಸಿಗುವ ಸಣ್ಣಪುಟ್ಟ ಲಂಚ ತಪ್ಪಿ ಹೋಗಿದ್ದರಿಂದಲೇ ಈ ರೀತಿ ಮಾಡುತ್ತಿದ್ದಾರೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಎಸ್.ಐ ರಾಜಶೇಖರ್, ಡಿವೈಎಸ್‌ಪಿ ಪ್ರಕಾಶ್‌ಗೌಡ ಅವರು ಇದಕ್ಕೆ ಉತ್ತರ ಹೇಳಬೇಕಾಗಿದೆ. ಈಗಲಾದರೂ ಕುಮಾರಿಯನ್ನು ಕರೆಸಿ ಛೀಮಾರಿ ಹಾಕಿ ಇಂತಹ ಸುಳ್ಳು ಪ್ರಕರಣಗಳನ್ನು ಕೊನೆಗೊಳಿಸುವ ಮೂಲಕ ಈ ಅಧಿಕಾರಿಗಳು ಜನಪರ ಸಂಘಟನೆಯ ಬೆಂಬಲಕ್ಕೆ ನಿಲ್ಲುತ್ತಾರೆಯೇ ನೋಡಬೇಕು.

■ ■ ವರದಿಗಾರ



ದಿನವೂ ಓಡಾಡುವ ರಸ್ತೆ, ಆದರೂ ಆ ತಿರುವಲ್ಲಿ ಇರುವ ಹೊಂಡ, ಈ ತಿರುವಿನ ಮುಂದೆ ಬರುವ ಹಂಪ್ಸ್, ಅದೋ! ರಸ್ತೆ ಬದಿ ಜಗಳಾಡುತ್ತಿರುವ ನಾಯಿ, ರಸ್ತೆಗೆ ಮುಖಮಾಡಿ ನಿಂತಿರುವ ದನ... -ಹೀಗೆ ಎಷ್ಟೋ ದೂರದಿಂದಲೇ ಅವುಗಳ ಅಸ್ತಿತ್ವದ ಕುರಿತ ಎಚ್ಚರದ ಫಲವಾಗಿ, ಕಾರಿನ ವೇಗ ಗಂಟೆಗೆ ನಲವತ್ತೂ ಮೀರಿರಲಿಲ್ಲ! ಡ್ರೈವಿಂಗ್‌ನಲ್ಲಿ ಸ್ತ್ರೀ ಸಂವೇದನೆಯ ಪ್ರಾಬಲ್ಯ ಅರಿವಾದದ್ದೇ ಆಗ...

ತಾಳೆಯಾಗದ ಲೆಕ್ಕ

ಕೆಲವು ಲೆಕ್ಕಗಳು ಎಷ್ಟು ಸರಳವಾಗಿರುತ್ತವೆ ಎಂದರೆ ಅವುಗಳ ಸರಳತೆಯನ್ನು ಕಂಡು ಲೆಕ್ಕ ಬಿಡಿಸುವ ನಾವೇ, 'ಏ... ಇದು ಹೀಗಿರಲಾರದು. ಇಷ್ಟು ಸರಳ ಲೆಕ್ಕವನ್ನು ಬಿಡಿಸಲು ಯಾರಾದರೂ ಕೊಟ್ಟಾರೇ?' ಎನ್ನುತ್ತ ಅದನ್ನು ಬಿಡಿಸುವ ಗೂಢ, ನಿಗೂಢ ಲೆಕ್ಕಾಚಾರದ ಹುಡುಕಾಟಕ್ಕೆ ತೊಡಗುವುದೂ ಇದೆ. ನಿಮಗೆ ಹೇಗೋ ಗೊತ್ತಿಲ್ಲ, ನನಗಂತೂ ಇದು ಆಗಾಗ ಅನುಭವಕ್ಕೆ ಬಂದ ಸತ್ಯ. ಚಿಕ್ಕವಳಿದ್ದಾಗ, ಲೆಕ್ಕದ ಮೇಷ್ಟ್ರು ಕೊಟ್ಟ ಲೆಕ್ಕವನ್ನು ಅಪರೂಪಕ್ಕೆ ಎಲ್ಲರಿಗಿಂತ ಮೊದಲೇ ನಾನು ಬಿಡಿಸಿದಾಗ, ಇಂಥ ಅನುಮಾನಗಳು ಹಲವು ಬಾರಿ ನನ್ನನ್ನು ಕಾಡಿದ್ದಿದೆ. ಆ ಲೆಕ್ಕವನ್ನು ಬಿಡಿಸಲು ಉಳಿದವರು ಮಾಡುತ್ತಿದ್ದ ತಿಣುಕಾಟವನ್ನು ನೋಡಿ, ಆ ಕ್ಷಣಕ್ಕೆ ನನ್ನ ಉತ್ತರದ ಬಗೆಗೇ ಅನುಮಾನಗಳು ಕಾಡಿ, ಕ್ಲಾಸಿಗೆ ಮೊದಲಿಗಳಾಗುವ ಸಂಭ್ರಮದಿಂದ ಆಗ ನಾನು ವಂಚಿತಳಾಗುತ್ತಿದ್ದೆ. ಅಂದು ನೋವಾಗಿ ಕಾಡಿದ್ದ ಲೆಕ್ಕಾಚಾರದ ಸಂದರ್ಭ ಇಂದು ನಗು ತರಿಸುತ್ತದೆ.

ಇರಲಿ, ಲೆಕ್ಕಾಚಾರದ ಮಾತು ನೆನಪಾಗುವುದಕ್ಕೂ ಹಿನ್ನೆಲೆಯಿದೆ. ನಾನು ವಾಹನ ಚಾಲನೆ ಕಲಿಯಲೇಬೇಕಾದ ಪ್ರಸಂಗವನ್ನು ಮೊದಲು ನಿಮಗೆ ಹೇಳಬೇಕು. ಅದೊಂದು ದಿನ ಇದ್ದಕ್ಕಿದ್ದಂತೆ,

"ಇಷ್ಟು ವರ್ಷ ಸರ್ವೀಸ್ ಆಯ್ತು, ಇನ್ನೂ ಕಾರು ತಗೊಳ್ಳಿಕ್ಕೆ ಆಗ್ಲಿಲ್ಲ ಅಂದ್ರೆ ನಾಚಿಕೆಗೇಡು" ಎಂದ ಸಾಥಿ.

"ಕಾರು ನಮ್ಗೆ ನೆಸೆಸಿಟಿ ಅಲ್ಲ, ಲಕ್ಸುರಿ" ಎಂದೆ.

"ಈಗ ಕಾರೆಲ್ಲ ಲಕ್ಸುರಿ ಅಲ್ಲ, ಬೈಕಲ್ಲಿ ಇನ್ನೂ ಎಷ್ಟು ದಿನ?... ಇನ್ನು ನನ್ನಿಂದ ಸಾಧ್ಯವಿಲ್ಲ, ಕಾರು ಅಗತ್ಯದ ವಸ್ತು"

"ಸರಿ, ನಿನಗೆ ಅಷ್ಟು ಆಸೆ ಇದ್ರೆ ತಗೋ"

"ತಗೊಳ್ಳಿಕ್ಕೆ ನಾನು ಈಗ್ಲೂ ಸಿದ್ಧ. ನೀನು ಡ್ರೈವಿಂಗ್ ಕಲ್ತ ದಿನವೇ ಮನೆಗೆ ಕಾರು ತರ್‍ತೀನಿ" ಎಂದ.

ನಮ್ಮ ಮಾತುಕತೆ ಹೀಗೊಂದು ಅಂತ್ಯವನ್ನು ಕಂಡೀತು ಎಂದು ಊಹಿಸಿರದ ನಾನು ಸಾಥಿಯ ಮಾತು ಕೇಳಿ ಬೆಚ್ಚಿಬಿದ್ದೆ "ನಾನು! ನಾನು... ಡ್ರೈವ್ ಮಾಡೋದಾ? ಅದೆಲ್ಲ ಬಿಟ್‌ಬಿಡು. ನಿನಗೆ ಆಸೆ ಇದ್ರೆ ಕಾರ್ ತಗೋ. ನಾನು ಪಕ್ಕದಲ್ಲಿ ಕೂತಿರ್‍ತೀನಿ. ಅದ್ಕಿಂತ ಹೆಚ್ಚು ಏನೂ ಕೇಳ್ಬೇಡ" ಎಂದು ನಿಷ್ಠುರವಾಗಿ ನುಡಿದೆ. ಆದರೆ ಜಪ್ಪಯ್ಯ ಎಂದರೂ ನನ್ನ ಮಾತಿಗೆ ಕವಡೆ ಕಾಸಿನ ಕಿಮ್ಮತ್ತೂ ಸಿಗಲಿಲ್ಲ.

ಅಂತೂ ಮೀನ ಮೇಷ ಎಣಿಸಿ, ಹತ್ತಾರು ಕುಂಟುನೆಪ ಹೇಳಿ, ಡ್ರೈವಿಂಗ್ ಕುರಿತ ಮನದೊಳಗಿನ ನನ್ನ ಆತಂಕವನ್ನು ಅನಿವಾರ್ಯವಾಗಿ ಬಯಲಿಗಿಟ್ಟೆ. ಆ ಬಳಿಕವೂ ಡ್ರೈವಿಂಗ್ ಕಲಿಯುವ ಕಾಯಕದಿಂದ ಮುಕ್ತಳಾಗುವುದು ಅಸಾಧ್ಯವೆನಿಸಿದ ಒಂದು ದಿನ, ಕಾರ್ ಡ್ರೈವಿಂಗ್ ಕ್ಲಾಸಿಗೆ ಸೇರಿದೆ. ಕ್ಲಚ್, ಗೇರ್ ಅಂದರೆ ಏನೆಂದೇ ಗೊತ್ತಿಲ್ಲದ ನಾನು ಒಂದು ವಾರದಲ್ಲಿ ಎಡವುತ್ತಾ ಕಾರು ಚಲಾಯಿಸುವುದರಲ್ಲಿ ಯಶಸ್ವಿಯಾದಾಗ, ನನಗಾದ ಪುಳಕ, ಸಂಭ್ರಮ... ಬಿಡಿ, ನಿಮಗೆಲ್ಲಿ ತಿಳಿದೀತು? ಹಾಗೂಹೀಗೂ ತಿಂಗಳೊಪ್ಪತ್ತಿನಲ್ಲಿ ಡ್ರೈವಿಂಗ್ ಕಲಿತು ನಮ್ಮ ಮನೆಗೆ ಚತುಷ್ಪಾದಿಯ ಆಗಮನವೂ ಆದ ಮೇಲೆ ನಡೆದ ಕಥೆಯೇ ನನಗೆ ನನ್ನ ಚಿಕ್ಕಂದಿನ ಲೆಕ್ಕಾಚಾರವನ್ನು ನೆನಪಿಸಿತು.

"ನೋಡು, ಹಿಂದಿನಿಂದ ಬಸ್ಸೇ ಬರಲಿ, ಲಾರಿ, ರಿಕ್ಷಾ, ಕಾರು ಯಾವುದೇ ಬರಲಿ ನೀನು ಧೈರ್ಯಗೆಡಬೇಡ. ಹಿಂದಿನವ ಎಷ್ಟೇ ವೇಗವಾಗಿ ಬರಲಿ, ಎಷ್ಟೇ ಜೋರಾಗಿ ಹಾರ್ನ್ ಮಾಡಲಿ, ನೀನು ನಿನ್ನ ಸೈಡ್‌ನಲ್ಲಿ ಇರುವಷ್ಟು ಕಾಲ ಯಾವುದಕ್ಕೂ ಕಿವಿಗೊಡಬೇಡ. ಅವಸರ ಇದ್ದವ ಅವಕಾಶ ಸಿಕ್ಕಾಗ ಓವರ್‌ಟೇಕ್ ಮಾಡ್ತಾನೆ. ಇದೇ ನೀನು ನೆನಪಿಟ್ಟುಕೊಳ್ಳಬೇಕಾದ ಡ್ರೈವಿಂಗ್‌ನ ಮೊದಲ ಪಾಠ" ಎಂದ ಸಖನ ಮಾತಿಗೆ ಬೆರಗಾಗಿ ಅವನತ್ತ ನೋಡಿದೆ. ಅವನು ತಮಾಷೆ ಮಾಡುತ್ತಿಲ್ಲ ಎಂಬುದು ಅರಿವಾದಾಗ ಇದ್ದಕ್ಕಿದ್ದಂತೆ ಸಣ್ಣಗೆ ನಗು ಬಂದಿತು. ಹೀಗೂ ಸಾಧ್ಯವೇ ಎಂಬ ಪ್ರಶ್ನೆ ಎದುರಾದದ್ದೇ ಆಗ. ನಾನು ನನ್ನ ಪಕ್ಕದಲ್ಲಿ ಎಂದರೆ ನನ್ನ ಭಾಗದ ದಾರಿಯಲ್ಲಿ ಇರುವಷ್ಟು ಕಾಲ ಹಿಂದಿನಿಂದ, ಮುಂದಿನಿಂದ ಎಂಥವರು ಬಂದರೂ ಅಳುಕಬೇಕಿಲ್ಲ, ಜಗ್ಗಬೇಕಿಲ್ಲ, ಬಗ್ಗಬೇಕಿಲ್ಲ ಎಂದರೆ ಅದೇನು ಸಣ್ಣ ಸಂಗತಿಯೇ? ಇಂದಿನ ಹುಡುಗಿಯರಿಗೆ ಹೇಗೋ ಏನೋ? ಆದರೆ, ಆಗಲೇ ನಾಲ್ಕು ದಶಕಗಳ ಅಂಚಿನತ್ತ ಜಾರುತ್ತಿರುವ ನನಗಂತೂ ಈ ಮಾತು ಒಮ್ಮೆಲೇ ರೋಮಾಂಚನವನ್ನುಂಟುಮಾಡಿತು.

ಗಂಡಸರು ಹಾಲ್‌ನಲ್ಲಿ ಇದ್ದರೆ, ಗಟ್ಟಿಯಾಗಿ ಮಾತಾಡಬಾರದು, ಅವರ ಮುಂದಿನಿಂದ ಸುಳಿದಾಡಬಾರದು, ದೊಡ್ಡವರು ಬಂದರೆ ಎದ್ದು ನಿಲ್ಲಬೇಕು, ಜಾಗ ಬಿಟ್ಟುಕೊಡಬೇಕು, ಅಪ್ಪ ಅಣ್ಣ ಗಂಡ, ಮಾವ.... ಯಾರಿಗೂ ಎದುರಾಡಬಾರದು, ನಿನ್ನ ವಿಚಾರ ಸರಿಯೇ ಆಗಿದ್ದರೂ, ಅವರು ಸಿಟ್ಟುಗೊಂಡಿದ್ದರೆ, ತಗ್ಗಿಬಗ್ಗಿ ನಡೆಯಬೇಕು. ನೀನೇನು ಹೇಳಬೇಕಿದ್ದರೂ ಅವರ ಮನಸ್ಸು ತಿಳಿಯಾದಾಗ ಹೇಳಬೇಕು, ಅದುವೇ ಹೆಣ್ಣು ಇರಬೇಕಾದ ರೀತಿ. . . .ಇಂತಹ ನೂರಾರು ಸಲಹೆ-ಸೂಚನೆ, ಆದೇಶ-ಅಣತಿಗಳ ಭಾರದಿಂದ ನಲುಗಿದ್ದ ಮನಸ್ಸಿಗೆ, ಡ್ರೈವಿಂಗ್ ಬೋಧಿಸಿದ ಮೊದಲ ಪಾಠವೇ ಸಮಾನತೆ! ದಾರಿಯಲ್ಲಿ ಎಲ್ಲರೂ ಸಮಾನರು! ಕಾರು, ಲಾರಿ, ಬಸ್, ಟ್ರಕ್ ಯಾರೇ ಹಿಂದಿನಿಂದ ಬಂದು ದಬಾಯಿಸಿದರೂ ನಾನು ಅಳುಕಬೇಕಿಲ್ಲ ಎಂಬುದೇನು ಸಣ್ಣ ಮಾತೇ?

"ಎದುರಿಂದ ವಾಹನ ಬಂದಾಗ ಹೆದರದಿರು. ನಿನ್ನ ಜಾಗದತ್ತ ಗಮನ ಇರಲಿ. ಒಂದೊಮ್ಮೆ ಹೆದರಿ ಕಾರನ್ನು ರಸ್ತೆಯಿಂದ ಕೆಳಗೆ ಇಳಿಸಿದೆಯಾದರೆ, ಮುಂದಿನವ ಇನ್ನಷ್ಟು ಹೆದರಿಸಿಯಾನು. ರಸ್ತೆ ಅವನದೆಷ್ಟೋ ಅಷ್ಟೇ ನಿನ್ನದೂ! ಇದು ಎರಡನೆಯ ಪಾಠ, ನೆನಪಿರಲಿ ಸದಾ" ಎಂಬ ಸಾಥಿಯ ಮಾತು ಇನ್ನಷ್ಟು ಅಚ್ಚರಿ ಮೂಡಿಸಿತು. ಇದು ಯಾವ ಪಾಠ ಎನಿಸಿತು. 'ರಸ್ತೆ ಅವನದೆಷ್ಟೋ ಅಷ್ಟೇ ನನ್ನದೂ! ಈ ಬದುಕು ಅವನದೆಷ್ಟೋ ಅಷ್ಟೇ ನನ್ನದೂ! ಬದುಕುವ ಹಕ್ಕು ಅವನದೆಷ್ಟೋ ಅಷ್ಟೇ ನನ್ನದೂ!'. ಹೆದರುವವರನ್ನು ಕಂಡರೆ ಹೆದರಿಸುವವರಿಗೂ ಹುಮ್ಮಸ್ಸು ಬರುತ್ತದೆ. ಬರೀ ರಸ್ತೆಯ ಮೇಲೇಕೆ? ಬದುಕಿನ ಉದ್ದಕ್ಕೂ ನಾವು ಕಾಣುತ್ತಿಲ್ಲವೇ? ಈತ ತನಗೆ ಕಲಿಸುತ್ತಿರುವುದು ಡ್ರೈವಿಂಗ್ ಪಾಠವೋ? ಬದುಕಿನ ಪಾಠವೋ? ಇವು ಎರಡೂ ಬೇರೆ ಬೇರೆಯೋ? ಅಥವಾ ಒಂದೆಯೋ? ಒಂದರ ಪಾಠ ಇನ್ನೊಂದಕ್ಕೆ ಅನ್ವಯವಾಗುತ್ತದೆಯೋ? ಅನ್ವಯಿಸಬೇಕೋ? ಬಾರದೋ? ಇಂಥ ಸರಳ ಪಾಠಗಳನ್ನು ನಮ್ಮ ಬದುಕಲ್ಲಿ ಕಲಿಸುವವರು ಈ ಮೊದಲೇ ಸಿಗಬಾರದಿತ್ತೇ? ಅಥವಾ ನಾವೇ ಕಲಿಯಬಾರದಿತ್ತೇ? ಪ್ರಶ್ನೆಗಳಿಗೇನು ಬರವೇ?- ಒಂದರ ಹಿಂದೆ ಮತ್ತೊಂದು ಎಂಬಂತೆ ಅವು ಮುನ್ನುಗ್ಗಿ ಬರತೊಡಗಿದವು.

'ಅಲ್ಲ.... ಒಂದು ವೇಳೆ ಇದನ್ನೇ ಬದುಕಿನಲ್ಲಿ ಅಳವಡಿಸಿಕೊಂಡರೆ.... ? ಏನಾದೀತು? ನಾನು ನಂಬಿದ ವಿಚಾರಕ್ಕೆ ಬದ್ಧಳಾಗಿ, ನನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದಲ್ಲಿ ಏನಾಗಬಹುದು....? ಆಗಲೂ ಇದು ಒಪ್ಪಿತವೇ? ಅಥವಾ ರಸ್ತೆ ನಿಯಮ ಬೇರೆ, ಬದುಕಿನ ನಿಯಮ ಬೇರೆ ಎಂದು ಯಾರಾದರೂ ಮೊಟಕಿಯಾರೇ? ಮೊಟಕುವುದು ಅಸಾಧ್ಯ ಎಂದಾದಲ್ಲಿ ದಾರಿ ಮಧ್ಯೆ ಗುದ್ದಿಯಾರೇ? ಆಗ ಏನಾದೀತು? ಅಥವಾ ನನ್ನ ಮನಸ್ಸೇ ಬದಲಾದೀತೇ? ರಸ್ತೆಯಲ್ಲಿ ಸಮಾನತೆಯ ರುಚಿ ಕಂಡ ನಾನು ಬದುಕಿನಲ್ಲೂ ಹೆಜ್ಜೆಹೆಜ್ಜೆಗೆ ಅದನ್ನು ಬಯಸಿ, ಅದು ಮರೀಚಿಕೆ ಎನಿಸಿದಾಗ, ಇಲ್ಲವೇ ಅದು ಸಾಂದರ್ಭಿಕವಾಗಿ ಎಟುಕುವ ವಾಸ್ತವ ಎನಿಸಿದಾಗ, ಬಂಡೆದ್ದರೆ ಏನಾದೀತು? ಅದರಿಂದ ಈಗಿರುವ ಮಧುರ ಸಂಬಂಧಗಳ ನಡುವೆ ಹೊಸ ಗೋಜಲುಗಳ ಸೃಷ್ಟಿ ಆಗಲಾರದೇ?' ಎಂದುಕೊಂಡೆ.

ಮೊದಲ ಬಾರಿಗೆ ಒಬ್ಬಳೇ ಚತುಷ್ಪಾದಿಯ ಮೇಲೆ ಹೊರಟಿದ್ದೆ. ಬೆಟ್ಟವನ್ನೇ ತಲೆಮೇಲೆ ಹೊತ್ತವಳಂತೆ ಇತ್ತು ಮುಖಭಾವ. ಒಂದಷ್ಟು ದೂರ ಹೋಗುವಷ್ಟರಲ್ಲಿ ನಿಧಾನವಾಗಿ ಮೈಚಳಿ ಕಳೆಯುತ್ತಾ ಬಂತು. ಸುಖದ, ಖುಷಿಯ ಲಹರಿ ಹಿತಮಿತವಾಗಿ ನನ್ನನ್ನು ಆವರಿಸತೊಡಗಿತ್ತು, ಅಷ್ಟರಲ್ಲಿ ಎದುರಿನಿಂದ ದ್ವಿಚಕ್ರಿಯೊಬ್ಬ ರಭಸದಿಂದ ಬರುವುದು ಕಂಡದ್ದೇ ಕಾಲು ಗಕ್ಕನೆ ಬ್ರೇಕು ಒತ್ತಿ ಕಾರು ರಸ್ತೆಯ ಅಂಚಿಗೆ ಸರಿಯಿತು. ದ್ವಿಚಕ್ರ ಅತ್ತ ಸರಿದ ಮರುಗಳಿಗೆಯಲ್ಲಿ ಆತನಿಗೆ ನಾನು ಬಸ್ ಬಂದಾಗ ಬಿಡಬೇಕಾದಷ್ಟು ಜಾಗ ಬಿಟ್ಟದ್ದನ್ನು ವಿವೇಕ ಎಚ್ಚರಿಸಿತು. 'ಇಲ್ಲ, ಇನ್ನು ಹೀಗಾಗಲು ಬಿಡುವುದಿಲ್ಲ' ಎಂದುಕೊಳ್ಳುತ್ತ ಮುಂದೆ ಸಾಗಿದೆ. ಇನ್ನೊಮ್ಮೆ ಎದುರಿನಿಂದ ಬರುವಾತ ಜಂಗಮವಾಣಿಯೊಂದಿಗೆ ಸರಸವಾಡುತ್ತ ವಾಹನ ಚಲಾಯಿಸುತ್ತಿದ್ದ, ಆಗಲೂ ಅಗತ್ಯಕ್ಕಿಂತ ಹೆಚ್ಚು ಎಡಬದಿಗೆ ಚಲಿಸಿದ್ದೆ. ಹಿಂದಿನಿಂದ ಬಸ್ಸೊಂದು ಬರುವುದು ಕಂಡದ್ದೇ ಮತ್ತೆ-ಬ್ರೇಕ್ ಜೊತೆಗೆ ನಂಟು ಆರಂಭಗೊಂಡಿತು.

"ಅವರು ಎಚ್ಚರದಲ್ಲಿ ಇರದಿದ್ದರೇನು? ನೀನು ನಿನ್ನ ಎಚ್ಚರದಲ್ಲಿರು. ಬಂಡೆಗಲ್ಲಿಗೆ ಹಣೆ ಚಚ್ಚಿಕೊಳ್ಳುವ ಸಾಹಸ ಬೇಡ. ಅಪಾಯಕಾರಿಗಳ ಸಹವಾಸ ಬೇಡ; ಮುನ್ನುಗ್ಗುವುದಕ್ಕಿಂತ ನಿನ್ನ ಜಾಗೃತೆ ನಿನಗಿರಲಿ." ಯಾರ ಮಾತುಗಳವು? ಎಂದು ಕೇಳಿದ ಮಾತುಗಳು? ಉಹೂಂ, ನೆನಪಿಲ್ಲ, ಆದರೆ ಕಿವಿಯೊಳಗೆ ಅವುಗಳ ಗುಂಜರ ಕೇಳುತ್ತಲೇ ಇತ್ತು, ಹೀಗಾಗಿ ಸಾಥಿಯ ಎಚ್ಚರಿಕೆಯ ಪಾಠ ಎಲ್ಲೋ ಮೂಲೆಗೆ ಹೋಗಿತ್ತು; ಬದುಕು ಕಲಿಸಿದ ಪಾಠ ನನ್ನನ್ನು ನಿಯಂತ್ರಿಸಿತ್ತು.

ವಿಶೇಷ ಲೇಖನ

■ ಡಾ.ಸಬಿಹಾ ಭೂಮೀಗೌಡ

ದಿನವೂ ಓಡಾಡುವ ರಸ್ತೆ, ಆದರೂ ಆ ತಿರುವಲ್ಲಿ ಇರುವ ಹೊಂಡ, ಈ ತಿರುವಿನ ಮುಂದೆ ಬರುವ ಹಂಪ್ಸ್, ಅದೋ! ರಸ್ತೆ ಬದಿ ಜಗಳಾಡುತ್ತಿರುವ ನಾಯಿ, ರಸ್ತೆಗೆ ಮುಖಮಾಡಿ ನಿಂತಿರುವ ದನ. . . -ಹೀಗೆ ಎಷ್ಟೋ ದೂರದಿಂದಲೇ ಅವುಗಳ ಅಸ್ತಿತ್ವದ ಕುರಿತ ಎಚ್ಚರದ ಫಲವಾಗಿ, ಕಾರಿನ ವೇಗ ಗಂಟೆಗೆ ನಲವತ್ತೂ ಮೀರಿರಲಿಲ್ಲ! ಡ್ರೈವಿಂಗ್‌ನಲ್ಲಿ ಸ್ತ್ರೀಸಂವೇದನೆಯ ಪ್ರಾಬಲ್ಯ ಅರಿವಾದದ್ದೇ ಆಗ.

ಮತ್ತೊಂದು ಸಂದರ್ಭ. ಎದುರಲ್ಲಿ ಗಾಡಿಯೊಂದು ಕೆಟ್ಟು ನಿಂತಿತ್ತು, ನನ್ನ ಬದಿಯ ಜಾಗವೇನೋ ಕ್ಲಿಯರ್ ಇತ್ತು, ಆದರೆ ಮುಂದಿನಿಂದ ಬಸ್ಸೊಂದು ವಂಯ್‌ಗುಟ್ಟುತ್ತ ರಭಸವಾಗಿ ಬರುತ್ತಿತ್ತು, ಆಗಲೂ ಅರಿವಿಲ್ಲದೆ ನಾನು ಬ್ರೇಕ್ ತುಳಿದಿದ್ದೆ, ಯಾಕೆಂದು ನೋಡಿದ ಸಾಥಿ, "ಅಲ್ಲಾ, ಆ ಬಸ್‌ನವನಿಗೆ ದಾರಿ. . . ."

"ಅದು ಅವನ ಹಣೆಬರಹ. ಅವನು ಕಾಯ್ತಾನೆ. ನಿನ್ ಸೈಡ್ ಖುಲ್ಲಾ ಇರೂವಾಗ ನೀನ್ಯಾಕೆ ನಿಂತೆ?"

"ಅವನು ಬರಲಿ ಅಂತ."

"ಆಯ್ತು ಬಿಡು, ಎಲ್ರಿಗೂ ಜಾಗ ಬಿಟ್ಟು ನಿ... ಊರು ಮುಟ್ಟೋದು ಎಂದಿಗೆ?" ಎನ್ನುತ್ತಿದ್ದರೆ, ಆ... ಮಾತಿನ ಸತ್ಯಾಂಶ ಅರಿವಿಗೆ ಬಂದರೂ, ಮನದೊಳ... ಗಂಟೆ ರಿಂಗುಡುತ್ತಾ ಇತ್ತು. ನೆನಪು ಹಾರಿತ್ತು ಕೆ... ದಶಕಗಳಷ್ಟು ಹಿಂದೆ.... ಏನದು ಸದ್ದು? ಹಾಂ... ಗಂ... ಸರಿಪಡಿಸಿಕೊಳ್ಳುವ ಸದ್ದು!

ಆ ಮನೆಯಲ್ಲಿ ಅಪ್ಪನ ಮಾತು ಬೇಡ, ಗಂಟ... ಸರಿಪಡಿಸಿಕೊಂಡ ಸದ್ದೇ ನಮ್ಮನ್ನು ಹಲವು ರೀತಿ... ಆಳುತ್ತಿತ್ತು, ಬೆಳಗ್ಗೆಯೋ, ಅಪರೂಪಕ್ಕೆ ಮಧ್ಯಾಹ್ನ... ನಾವು ಇನ್ನೂ ಮಲಗಿದ್ದರೆ, ಅದು ನಮ್ಮ ಅಲಾ... ಆಗಿ ಕಾರ್ಯನಿರ್ವಹಿಸುತ್ತಿತ್ತು, ಗೆಳತಿಯರು ಬಂ... ಹರಟೆಯಲ್ಲಿ ನಮ್ಮ ದನಿ ಜೋರಾಗಿದ್ದಾಗ, ಆ ಸ... ಕೇಳಿಬಂದರೆ, ಅದು ನಮ್ಮ ಗಂಟಲಿಗೆ ಸೈಲೆ... ಅಳವಡಿಸಿದ ರೀತಿಯಲ್ಲಿ ಕೆಲಸ ಮಾಡುತ್ತಿತ್ತು. ... ಬೇತಾಳ ಎಷ್ಟು ಬೆನ್ನು ಬಿದ್ದಿತ್ತು ಎಂದರೆ, ಕಾಲೇ... ಓದುವಾಗ ಮಾತ್ರವಲ್ಲ ಉದ್ಯೋಗಕ್ಕೆ ಸೇರಿದ ಬಳಿಕ... ಬಸ್ಸಲ್ಲಿ ಯಾರಾದರೂ ಗಂಟಲು ಕೆರೆದುಕೊಂಡ ಸದ್ದಾ... ಅಪ್ಪನದೇ ಇರಬೇಕು ಎನ್ನಿಸಿ, ಕೆಲವೊಮ್ಮೆ ಓರೆಗ... ಅತ್ತಿತ್ತ ನೋಡುತ್ತಿದ್ದೆ. ಕಾಣದಾಗ, ಅವರು ಇರಲಾ... ಎಂದು ಧೈರ್ಯ ಬಂದರೂ, ಅನುಮಾನ ಪರಿಹ... ಆಗದೆ, ಯಾವುದೋ ನೆಪ ಹುಡುಕಿ ಹಿಂ... ಸೀಟುಗಳಲ್ಲಿ ಹುಡುಕಾಟ ನಡೆಸುತ್ತಿದ್ದೆ.

ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಸೇರಿದ ಆರಂ... ವರ್ಷಗಳಲ್ಲಿ ಪ್ರಾಂಶುಪಾಲರು ರೌಂಡ್ಸ್ ಹೊರ... ನನ್ನ ತರಗತಿಯ ಹೊರಗೆ ನಿಂತಿದ್ದಾರೆ ಎಂದು ... ವಾದಾಗ, ಗಂಟಲಿನಿಂದ ಹೊರಡುತ್ತಿದ್ದ ದನಿ ಇದ್ದಕ್ಕಿದ್ದ... ನಿಂತುಬಿಡುತ್ತಿತ್ತು; ಮತ್ತೆ ಅವರು ಅತ್ತ ಹೋದ ಬಳಿಕ... ಸ್ವರ ಮೂಲಸ್ತರಕ್ಕೆ ಏರುತ್ತಿತ್ತು. ನನಗೆ ಕಲಿಸಿದ ಅಧ್ಯಾಪ... ನಾನು ಗೌರವಿಸುವ ವ್ಯಕ್ತಿಗಳು, ಸಾಹಿತ್ಯ ಜಗತ್ತಿನ ದಿಗ್ಗಜ... ಯಾರೇ ಎದುರು ಇದ್ದಾರೆ ಎಂದ ತಕ್ಷಣ ಮಾ... ಮಾತಿನ ವರಸೆ, ದನಿಯ ಎತ್ತರ ಎಲ್ಲವೂ ಗೋಜಲಾಗ... ಕುಗ್ಗುವ, ಕುಸಿಯುವ ಸ್ಥಿತಿಯನ್ನು ತಲುಪುತ್ತಿತ್ತು. ... ರೋಗದಿಂದ ಬಿಡುಗಡೆ ಸುಲಭಸಾಧ್ಯವಾಗಲಿಲ್ಲ. ಮೈ... ಚರ್ಮವನ್ನೇ ಕಿತ್ತು ಕೆತ್ತಿಟ್ಟಂತೆ ಪ್ರಯಾಸದಾಯಕವಾಗಿ...

"ಇಷ್ಟು ಹೇಳಿದ್ದಕ್ಕೆ, ಮೌನಗೌರಿಯ ಹ... ಕೂತೆಯಾ?" ಎಂಬ ಸಾಥಿಯ ಮಾತು ನನ್ನ... ತಿವಿದಾಗಲೇ, ಲೆಕ್ಕದ ಗೋಜಲಿನಿಂದ ಹೊರಜಗ... ಬಂದೆ.

ಡ್ರೈವಿಂಗ್ ಎಷ್ಟೊಂದು ಪುರುಷಪ್ರಧಾನ ಚಿಂ... ಯಿಂದ ಕೂಡಿದೆ ಎಂಬುದು ಮೊನ್ನೆ ನನ್ನ ಅರಿ... ಬಂತು. ಮಹಾನಗರಿಯ ಮುಖ್ಯ ರಸ್ತೆಯಲ್ಲಿ ಮೊ... ಬಾರಿಗೆ ಕಾರು ಚಲಾಯಿಸುತ್ತಿದ್ದೆ. ರಸ್ತೆ ಸಾಕ... ವಿಶಾಲವಾಗಿತ್ತು, ನಾನು ಮಾತ್ರ ಎಡಬದಿಯ ಅಂಚಿನ... ಹೋಗುತ್ತಿದ್ದೆ. ಒಂದಷ್ಟು ದೂರ ಸುಮ್ಮನೆ ಕುಳಿ... ಸಾಥಿ, ಬಳಿಕ ಗುರುಗುಟ್ಟತೊಡಗಿದ.

"ಅಷ್ಟೆಲ್ಲ ವಿಶಾಲವಾಗಿ ಬಿದ್ದಿರುವ ರಸ್ತೆ ಬಿ... ಅಂಚಿಗೇಕೆ ಹೋಗುತ್ತೀ?"

"ಅರೇ, ಅದರಲ್ಲಿ ತಪ್ಪೇನಿದೆ?"

"ಇದು ಡ್ರೈವಿಂಗ್‌ನ ಪದ್ಧತಿ ಅಲ್ಲ, ನಿನಗಿ... ಆತ್ಮವಿಶ್ವಾಸ ಇಲ್ಲ ಎಂಬುದನ್ನು ಅದು ತಿಳಿಸುತ್ತ...

'ಆತ್ಮವಿಶ್ವಾಸವಿಲ್ಲ! ಆತ್ಮವಿಶ್ವಾಸಕ್ಕೂ ನಾ... ರಸ್ತೆಯ ಎಡಬದಿಯ ಅಂಚಿನಲ್ಲಿ ಹೋಗುವುದ... ಎಲ್ಲಿಂದೆಲ್ಲಿಯ ಸಂಬಂಧ? ಅಷ್ಟಕ್ಕೂ ನನ್ನ ದಾರಿ... ನಾನು ಸಾಗಿದ್ದೇನಲ್ಲ, ಮತ್ತೂ ಯಾಕೆ ಈ ಮಾತ... ಎಂದು ಒಂದುಕ್ಷಣ ಪೆಚ್ಚಾದೆ. ಅಷ್ಟರಲ್ಲಿ ಕಚ್ಚಾ... ಎದುರಾಯಿತು. ಒಂದು ಹೊಂಡ ತಪ್ಪಿಸಹೋ... ಇನ್ನೊಂದಕ್ಕೆ ಕಾರು ಬಿದ್ದಿತು. ತಕ್ಷಣ ಪಕ್ಕದಿ... ಲೊಚಗುಟ್ಟಿದ ಸದ್ದು ಕೇಳಿ ಒಳಗಿಂದ ಕಂ... ಶುರುವಾಯಿತು. ಅಷ್ಟರಲ್ಲಿ ಮತ್ತಷ್ಟು ಸಾಲುಸಾ... ಹೊಂಡಗಳು. ಒಂದೆಡೆ ಕಾರನ್ನು ನುಗ್ಗಿಸಿದ್ದೇ ತಡ, "ಇ... ಆ ಕಡೆಯಿಂದ ಬರಬೇಕಿತ್ತು" ಎಂಬ ಸಲಹೆ ... ಬಂತು. ಇನ್ನಷ್ಟು ದೂರ ಹೋಗುತ್ತಲೇ ಮತ್ತೆ ಎದುರ... ಹೊಂಡಗಳ ಸಾಲನ್ನು ಕಂಡು "ಎತ್ತ ನುಗ್ಗಿಸಲಿ... ಎಂದು ಮುಂದಾಗಿ ಕೇಳಿದೆ. "ನನ್ನನ್ನು ಕೇಳಬಾರ... ನೀನೇ ನಿರ್ಧರಿಸಬೇಕು" ಎಂದು ಹೇಳಿ ಸ... ಧ್ಯಾನಸ್ಥನಾದ.

ಇದೀಗ ಸರಳವೆನಿಸಿದ ಲೆಕ್ಕಾಚಾರದ ಗೋಜ... ಒಂದೊಂದಾಗಿ ಎದುರಾಗತೊಡಗಿದಂತೆ ಅನಿಸಿ... 'ನನ್ನನ್ನು ಕೇಳಬಾರದು, ನನ್ನನ್ನು ಅವಲಂಬಿಸಬಾರ... ಎಂದು ಆತ ಹೇಳಿದಾಗ ನನಗೆ ಸಂಭ್ರಮವಾಗಲಿ... ದುಃಖ ಒತ್ತರಿಸಿ ಬಂತು. ನಡುನೀರಿನವರೆಗೆ ಕರೆತಂ... ಇದ್ದಕ್ಕಿದ್ದಂತೆ ನನ್ನ ಕೈ ಬಿಟ್ಟಂತಾಯಿತು! ಯಾಕೆ ಹಿ... ದುಃಖವಾಗಬೇಕು? ಎಂದು ಮೊದಲು ನನ್ನ... ಕೇಳಿಕೊಂಡೆ. ಆ ಬಳಿಕ ನಾನು ಆತನ ಅಭಿಪ್ರಾ...

[illegible] ಯಾಕೆ? ಎಂದು ತಿರುಗಿ ಪ್ರಶ್ನಿಸಿಕೊಂಡೆ. ನನ್ನ [illegible]ಕ್ಕಿಂತ ಆತನದು ಸೂಕ್ತ ಎಂದೇ? ಅಥವಾ ನನ್ನ [illegible]ಯಲ್ಲಿ ಆತ ತಪ್ಪು ಕಂಡುಹಿಡಿದು ವ್ಯಂಗ್ಯಾನು[illegible]ದೇ? ವಿನಾಕಾರಣ ನಮ್ಮೊಳಗೆ ಮನಸ್ತಾಪಕ್ಕೆ ಯಾಕೆ [illegible] ನೀಡುವುದು ಎಂದೇ? ಅಥವಾ ಯಾವ [illegible]ಯೂ ನನಗೆ ಬೇಡ ಎಂಬುದಕ್ಕಾಗಿಯೇ? [illegible] ಯೋಚಿಸಿದಂತೆ, ಮುಂದಾಗಿ ಅವನ ಸಲಹೆಯನ್ನು [illegible]ವುದಕ್ಕೆ ಇವುಗಳಲ್ಲಿ ಯಾವುದೋ ಒಂದು ಕಾರಣ [illegible]ದೆ ಇವೆಲ್ಲವುಗಳೂ ವಿವಿಧ ಹಂತಗಳಲ್ಲಿ [illegible]ಗಳಾಗಿದ್ದುದು ಅರಿವಿಗೆ ಬಂತು.

"ನಿಮ್ಮಷ್ಟು ಸಹಜವಾಗಿ ಮತ್ತು ವೇಗವಾಗಿ [illegible]ಗೆ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ'' ಎಂದು [illegible]ಯಿಸಿಗೆ ಹೊರಟೆ.

"ಆದರೆ, ಡ್ರೈವಿಂಗ್‌ನಲ್ಲಿ ನಿರ್ಧಾರವನ್ನು ಸ್ವಂತವಾಗಿ [illegible] ಕ್ಷಿಪ್ರವಾಗಿ ತೆಗೆದುಕೊಳ್ಳಬೇಕಾದ್ದು ತುಂಬಾ ಅಗತ್ಯ'' [illegible]ಂದ ನಿಷ್ಠುರ ನುಡಿ.

"ನಿಷ್ಠ ಮಾತು ಒಪ್ಕೋತೀನಿ. ಆದ್ರೆ, ಸದಾ ಮನೆಯಲ್ಲಿ [illegible]ರಾದರೊಬ್ಬ ಗಂಡಸರ ಆಜ್ಞಾಪಾಲಕಿಯಾಗಿ [illegible]ಕುವ ಸತತ ನಿಯಂತ್ರಣಕ್ಕೆ ಒಳಗಾದ ಹೆಣ್ಣಿಗೆ, [illegible] ಮತ್ತು ಸಹಜತೆಗಳು ಪ್ರಜ್ಞಾಪೂರ್ವಕವಾಗಿ [illegible]ಸಿಕೊಳ್ಳಬೇಕಾದ ಗುಣಗಳು''.


"ಅದೂ ನಿಜ. ಹಾಗಂತ ಎಲ್ರೂ ನೀನ್ ಹೇಳಿದ [illegible]ನೇ ಇರ್ತಾರೆ ಅನ್ನೋಕೂ ಆಗಲ್ಲ, ನೆನಪಿರ್ಲಿ''.

ಹೀಗೇ ಮಾತಾಡ್ತಾ ಮಾತಾಡ್ತಾ ಹೊಸ ಅರ್ಥದ [illegible]ಥೆಗಳು ಹೊರಟವು. ಹೆಣ್ಣು ಕೇಳದೆಯೇ ಸಲಹೆ [illegible]ಡುವುದನ್ನು ಗಂಡಸು ತನ್ನ ಕರ್ತವ್ಯ ಎಂದೇ [illegible]ಸಿರುತ್ತಾನೆ. ಮತ್ತು ಅದನ್ನು ಆಕೆಯ ಯೋಗಕ್ಷೇಮ [illegible] ಮಾಡುತ್ತಿದ್ದೇನೆ ಎಂದೇ ಆತ ದೃಢವಾಗಿ ನಂಬಿರುತ್ತಾನೆ. [illegible]ಥ ಸಂದರ್ಭಗಳಲ್ಲಿ ತನ್ನ ಲೆಕ್ಕಾಚಾರಕ್ಕೆ ಪೂರಕವಾಗಿ [illegible] ಸಮಾನಾಂತರವಾಗಿ ಆಕೆಯ ಲೆಕ್ಕಾಚಾರವೂ [illegible]ಗ ಅದಕ್ಕೆ ಬೆಂಬಲ, ಪ್ರೋತ್ಸಾಹ ಸಹಜವಾಗಿಯೇ [illegible]ಯುತ್ತವೆ. ಅಕಸ್ಮಾತ್ ಆತನ ಲೆಕ್ಕಾಚಾರಕ್ಕಿಂತ [illegible]ವಾಗಿ ಅಥವಾ ವಿರುದ್ಧವಾಗಿ ಆಕೆಯದು ಇದ್ದಾಗ, [illegible] ಚಡಪಡಿಸತೊಡಗುತ್ತಾನೆ; ಸ್ವಲ್ಪ ಸಮಯದಲ್ಲಿಯೇ [illegible]ಮಾಧಾನದ ಹೊಗೆ ಏರತೊಡಗಿ, ರೇಗಿದರೆ [illegible]ಪಡುವಂಥದ್ದು ಏನೂ ಇಲ್ಲ, ಗಂಡಸರಿಗೆ ಈ [illegible]ಯ ಕಷ್ಟ ಇಲ್ಲ, ಅವರು ಯಾರಿಗೂ ಉತ್ತರ [illegible]ಬೇಕಾದ ನೆಲೆಯಲ್ಲಿ ನಿಂತಿರುವುದಿಲ್ಲ, ಒಂಟಿಸಲಗ[illegible] ಅವರು ಹಿಡಿದದ್ದೇ ದಾರಿ ಸಾಗಿದ್ದೇ ಹಾದಿ. [illegible]ಗೊಮ್ಮೆ ಇತರರಿಂದ ಮಧ್ಯೆ ಮಧ್ಯೆ ಹಾರಿ ಬರುವ [illegible]ಹೆ, ಪ್ರತಿಕ್ರಿಯೆ; ಕ್ರಿಯೆಗಳಿಗೆ ಕಿಮ್ಮತ್ತು ಅವರು [illegible]ರುಂಟು, ಇಲ್ಲದಿದ್ದರಿಲ್ಲ!

[illegible]ಧಾಡಸಿತನಕ್ಕೆ ಡ್ರೈವಿಂಗ್‌ನಲ್ಲಿ ಮೊದಲ ಆದ್ಯತೆ. [illegible]ದಿಷ್ಟು ಮೂತಿ ತೂರಿಸಲು ಹಿಂದಿನ ವಾಹನದವರಿಗೆ [illegible]ವು ಸಿಕ್ಕರೆ, ಅನಂತರ ಅವರದೇ ಸಾಮ್ರಾಜ್ಯ. ಕೊಟ್ಟವ [illegible]ಡಂಗಿ ಇಸಗೊಂಡವ ಈರಭದ್ರ ಎಂಬ ಗಾದೆ [illegible] ಸಂದರ್ಭದಲ್ಲಿ ಬೇಡವೆಂದರೂ ನನಗೆ ನೆನಪಾಗು[illegible] ಹೋಗಲಿ ಅಂತ ಹಿಂದಿನವರಿಗೆ ದಾರಿ ಬಿಟ್ಟು[illegible]ವೋ, ಅಲ್ಲಿಗೆ ಮುಗೀತು. ಅನಂತರ ಅವರ [illegible]ಯನ್ನು ನಾವು ಅನುಸರಿಸಬೇಕಾಗುತ್ತದೆ. ಕಾವೇರಿ [illegible] ಹಂಚಿಕೆಯಲ್ಲಿ ತಮಿಳುನಾಡಿನವರು ಮಾಡುವ [illegible]ಂಗಾರುಗುತ್ತಿಗೆ'ಯ ಧೋರಣೆಯು ಡ್ರೈವಿಂಗ್‌ನಲ್ಲಿ [illegible] ಅರ್ಥದಲ್ಲಿ ಅರಿವಿಗೆ ಬರುತ್ತದೆ. ವೇಗ, ರಭಸ, [illegible]ತನ, ಹಟಮಾರಿತನ, ಮುನ್ನುಗ್ಗುವಿಕೆ ಇಂದು [illegible]ಗರಿಯ ರಥಿಕರು ಆರೋಪಿಸಿಕೊಳ್ಳಬೇಕಾದ [illegible]ಗಳಾಗಿವೆ. ಇಲ್ಲಿನ ಮೈಕೈ ನಜ್ಜುಗುಜ್ಜಾಗಿಸಿಕೊಂಡ [illegible] ವಾಹನಗಳು ಡ್ರೈವಿಂಗ್ ಜಗತ್ತಿನ ಇನ್ನೊಂದು [illegible]ವನ್ನು ಅನಾವರಣ ಮಾಡುತ್ತವೆ. ಸಣ್ಣಪುಟ್ಟ ಗುದ್ದಾಟ, [illegible] ತರಚಾಟ, ಮೂತಿ, ಬೆನ್ನು, ಪಕ್ಕೆಗಳ ತಿವಿದಾಟಗಳಿಗೆ [illegible] ವಾಹನಗಳನ್ನು ನಿಲ್ಲಿಸುವಂತಿಲ್ಲವಂತೆ! ನಿಲ್ಲಿಸಿದರೆ [illegible] ಅಪಘಾತಗಳು ಹೆಚ್ಚುವ ಭಯ. ಹೀಗಾಗಿ [illegible] ಗುದ್ದಿ ಪರಾರಿಯಾದರೆ, ಗುದ್ದಿಸಿಕೊಂಡವ[illegible]ನಾಗುತ್ತಿರಬೇಕು! ಹೀಗಾಗಿ ವಿನಯ, ನಿಧಾನ, [illegible], ಸೌಮ್ಯ, ತಾಳ್ಮೆ ಮುಂತಾದ ಸ್ತ್ರೀತ್ವದ ಗುಣಗಳು [illegible] ಜಗತ್ತಿನಲ್ಲಿ ಅರ್ಥಹೀನ ಮೌಲ್ಯಗಳೆನಿಸುತ್ತ[illegible].

[illegible]ದಲ್ಲಿ, ಸರಳವೆನಿಸುವ ಲೆಕ್ಕಗಳು ಸಂಕೀರ್ಣ, [illegible]ವೆನಿಸುವ ಲೆಕ್ಕ ಕೆಲವೊಮ್ಮೆ ಸರಳ! ಡ್ರೈವಿಂಗ್ [illegible]ಕೊಟ್ಟ ವಿಸ್ಮಯ ಅಗಾಧ! ಡ್ರೈವಿಂಗ್ ಶಾಲೆ[illegible] [illegible]ದ ಗೈಡೆನ್ಸ್ ಇನ್ನೂ ವಿಶಿಷ್ಟ, ಕಷ್ಟವೆಂದು [illegible] ಕಲಿಯದೇ ಬಿಟ್ಟದ್ದರೆ, ಇಂಥ ಅನುಭವ[illegible] [illegible] ವಂಚಿತಳಾಗುತ್ತಿದ್ದೆ, ಅಂತೆಯೇ ನನಗೆ [illegible] ಕಣಾಯಿತು. ನಿಮಗೆ? ■

ಬುದ್ಧನ ಮೇಲೆ ಪೇಜಾವರರಿಗೇಕೆ ಅಸಹನೆ? ಇಲ್ಲಿದೆ ಉತ್ತರ



ಹಿಂದೂ ಧರ್ಮದ ಅಡಿಪಾಯವನ್ನೇ ಅಲುಗಾಡಿಸುತ್ತಿರುವ ಮತಾಂತರದ ಕುರಿತು ಪೇಜಾವರರು ಇತ್ತೀಚೆಗೆ ದಲಿತರನ್ನುದ್ದೇಶಿಸಿ "ದಲಿತರೇ, ನೀವು ಮತಾಂತರಗೊಂಡರೆ ಅಡ್ಡಿಯಿಲ್ಲ, ಆದರೆ ಬೌದ್ಧಧರ್ಮ ಬೇಡ. ಬದಲು ಹಿಂದೂಗಳ ಆರ್ಯ ಸಮಾಜವೇ ಅದಕ್ಕಿಂತ ಲಾಯಕ್ಕಿದೆ" ಎಂಬ ಪುಕ್ಕಟೆ ಸಲಹೆಯನ್ನು ನೀಡಿದ್ದಾರೆ. ಅಲ್ಲದೆ ಶೂನ್ಯತಾವಾದ ಮುಂತಾದುದರ ನೆಪದಲ್ಲಿ ಬೌದ್ಧ ಧರ್ಮವನ್ನೂ ಟೀಕಿಸಿದ್ದಾರೆ. ಆದರೆ ಇಲ್ಲಿ ಹಾಗು ನಂತರದ ಸಮರ್ಥನೆಗಳಲ್ಲಿ ಇದೇ ಪೇಜಾವರರು "ಬೌದ್ಧ ಧರ್ಮದ ಬಗ್ಗೆ ನಮಗೆ ದ್ವೇಷವಿಲ್ಲ, ವೈದಿಕರಾದ ನಾವು ಬುದ್ಧನನ್ನು ವಿಷ್ಣುವಿನ ಅವತಾರವೆಂದೇ ಗೌರವಿಸಿದ್ದೇವೆ" ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ. (ಭೈರಪ್ಪನಂತಹವರೂ ಕೂಡ ತಮ್ಮ ಮತಾಂತರ ಕುರಿತ ಲೇಖನಗಳಲ್ಲಿ ಮೇಲಿನ ಮಾತನ್ನೇ ಆಡಿದ್ದಾರೆ). ಆದರೆ ನಿಜಕ್ಕೂ ಈ ವೈದಿಕರು ಬುದ್ಧನನ್ನು ದೇವರೆಂದು, ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಪೂಜಿಸುತ್ತಿರುವುದು ಹೌದೇ? ಎಂಬ ಪ್ರಶ್ನೆಗೆ ಹೌದು ಮತ್ತು ಅಲ್ಲ ಎಂಬ ಎರಡೂ ಉತ್ತರಗಳಿವೆ. ಹೇಗೆಂದರೆ, ಅವರ ಪೇಜಾವರ-ಭೈರಪ್ಪಾದಿಗಳು ಹೇಳುವಂತೆ ವೈದಿಕರಿಗೆ ಬುದ್ಧ ದೇವನೇ ಆದರೂ ಅವರ ದಶಾವತಾರಿ ಬುದ್ಧನು ಬೌದ್ಧ ಧರ್ಮದ ಮೂಲಪುರುಷ ಗೌತಮ ಬುದ್ಧನಲ್ಲ ಎಂಬುದು ಕೂಡ ಅಷ್ಟೇ ಸತ್ಯ.

ಒಂದು ವೇಳೆ ಈ ಬುದ್ಧರಿಬ್ಬರು ಒಂದೇ, ಬೇರೆ ಬೇರೆ ಅಲ್ಲ ಎಂದು ಯಾರಾದರೂ ತಿಳಿಸಿದ್ದರೆ ಭಾವನೆ ನಿಮಗಿದ್ದರೆ ಅದು ಗಾಂಧಿ-ಗೋಡ್ಸೆ ಬೇರೆ ಅಲ್ಲ ಎಂಬ ವಾದಕ್ಕಿಂತ ಭಿನ್ನವಾಗಿರಧು. ನಿಜಕ್ಕೂ ಹಾಗು ಸಾಂಕೇತಿಕವಾಗಿಯೂ ಬೆತ್ತಲೆ ನಿಂತು ಮಾನ ಕಳೆದುಕೊಂಡ ದಶಾವತಾರಿ ಬುದ್ಧನ ಮಾನ ಕಾಪಾಡಲು ಈ ಗೌತಮ ಬುದ್ಧ ಬಳಕೆಯಾಗಿ ಇಲ್ಲೂ ಕೂಡ ಆತ ಉಪಕಾರಿಯಾಗಿದ್ದಾನೆಯೇ ವಿನಃ ಪೇಜಾವರ-ಭೈರಪ್ಪರು ಹೇಳುವಂತೆ ವೈದಿಕರೇ ಗೌತಮಬುದ್ಧನನ್ನು ಗೌರವಿಸಿದ್ದಾರೆನ್ನುವುದು ಅಪ್ಪಟ ಸುಳ್ಳು. ನಿಜಕ್ಕೂ ಸಿದ್ಧಾರ್ಥನನ್ನು ವಿಷ್ಣುವಿನ ಅವತಾರವೆಂದು ವೈದಿಕರು ಸ್ವೀಕರಿಸಿದ್ದೇ ಹೌದಾದರೆ, "ಭಜಗೋವಿಂದಂ" ಎಂದು ಹರಿಯನ್ನು ಕೊಂಡಾಡಿದ್ದ ಶಂಕರಾಚಾರ್ಯರಿಗೆ ಬೌದ್ಧರ ಮೇಲೆ ಕೋಪ ಉಕ್ಕಿ ಬಂದಿರಲು ಕಾರಣ ವೇನಿತ್ತು? ಅಷ್ಟೇ ಅಲ್ಲ ಸ್ವತಃ ಪೇಜಾವರರು ಪೂಜಿಸುವ ಮಧ್ವಾಚಾರ್ಯ ಕೂಡ ಬೌದ್ಧ ವಿರೋಧಿಯಾಗಿದ್ದರೆಂದು ಕನಕದಾಸರ ಕೀರ್ತನೆಯೊಂದು ಸಾರುತ್ತದೆ.

ಉದಾ: ಮಧ್ವಾಚಾರ್ಯರ ಪೂರ್ವ ಜನ್ಮವೆನ್ನಲಾದ ಭೀಮನನ್ನು ಸ್ತುತಿಸುವ-

ಮಧ್ಯಗೃಹದಾತನ ಸತಿಯಲ್ಲಿ ಉದಿಸಿದಗೆ
ಬೌದ್ಧ-ಚಾರ್ವಾಕ-ಮಾಯ್ಗಳ ಜರಿದಗೆ
ಮಧ್ವ-ಶಾಸ್ತ್ರವನೆಲ್ಲಿ ಸಜ್ಜನರಿಗೊರೆದಗೆ
ಮುದ್ದು ಶ್ರೀ ಆದಿಕೇಶವನ ಭಜಕಗೆ
ಜಯಮಂಗಲಂ ನಿತ್ಯ ಶುಭಮಂಗಲಂ

(ಕನಕದಾಸರ ಜನಪ್ರಿಯ ಕೀರ್ತನೆಗಳು-ಹೊ.ರಾ. ಸತ್ಯನಾರಾಯಣರಾವ್-ಅಂಕಿತ ಪುಸ್ತಕ). ಇದೆಲ್ಲ ಪೇಜಾವರ-ಭೈರಪ್ಪನಂಥವರಿಗೆ ಗೊತ್ತಿಲ್ಲವೆಂದಲ್ಲ. ಖಂಡಿತ ತಿಳಿದೇ ಇದೆ. ಯಾಕೆಂದರೆ ಮಾಧ್ವಗುರು ವಾದಿರಾಜರಿಂದ (ಶ್ರೀ ಪರಿಮಳ ಸಂಶೋಧನ ಪಬ್ಲಿಷಿಂಗ್ ಮಂದಿರ-ನಂಜನಗೂಡು ಪ್ರಕಟಿಸಿದ ಸಾಣೂರು ಭೀಮಭಟ್ಟರ ಸಂಸ್ಕೃತ ಮೂಲದ 'ಶ್ರೀವಾದಿರಾಜ ವಿರಚಿತ ಶ್ರೀದಶಾವತಾರ ಸ್ತುತಿ'ಯ ಕನ್ನಡಾನುವಾದ ನೋಡಬಹುದು) ಹಿಡಿದು ಮಾಧ್ವರ ನಿಕಟವರ್ತಿಗಳಾದ ಕನಕ-ಪುರಂದರರ ಹರಿಭಕ್ತಿ ಸಾರುವ ದಶಾವತಾರ ಸ್ತುತಿಸುವ ಅನೇಕ ಕೀರ್ತನೆಗಳಲ್ಲಿ ಬರುವ-ಸ್ಲಾಧಿಸಿ ತ್ರಿಪುರನ ಗೆಲಿದವಗೆ-ಬೆತ್ತಲೆ ನಿಂತವಗೆ ಎಂದು ಸೂಚಿಸುವ ಸನ್ನಿವೇಶಗಳೇ ದಶಾವತಾರ ಬುದ್ಧನ ಕತೆಯನ್ನು ಸಾರುತ್ತವೆಯೇ ವಿನಃ ಗೌತಮ ಬುದ್ಧನದ್ದಲ್ಲ, ಇದು ಮಾಧ್ವ ಮತಾನುಯಾಯಿ ಪೇಜಾವರರಿಗೆ ತಿಳಿದಿಲ್ಲವೆಂದು ಭಾವಿಸಿದರೆ ಅದಕ್ಕಿಂತ ದೊಡ್ಡ ಮೂರ್ಖತನ ಬೇರೊಂದಿಲ್ಲ.

ಈ ಗೌತಮ ಬುದ್ಧ ಹಿಂದೂ ಅಲ್ಲ, ಹಿಂದೂ ದೇವರಂತೂ ಮೊದಲೇ ಅಲ್ಲ, ಆತ ಹಿಂದೂ ವಿರೋಧಿ ಎಂಬ ಭಾವನೆಯೇ ಪೇಜಾವರರ ಬಹಿರಂಗ ಕರೆಯ ಮೂಲ ಉದ್ದೇಶವೇ ವಿನಃ ದಲಿತ ಕಾಳಜಿ ಖಂಡಿತ ಅಲ್ಲ, ಗೌತಮ ಬುದ್ಧ ಹಿಂದೂ ಅಲ್ಲ ಎಂಬ ಸಂಗತಿ ಕೇವಲ ಮಾಧ್ವರಿಗಷ್ಟೇ ಅಲ್ಲ ಎಲ್ಲಾ ವೈದಿಕರ ಅರಿವಿನಲ್ಲೂ ಇದೆ (ಅದು ನುಂಗಲೂ, ಉಗುಳಲೂ ಆಗದ ಬಿಸಿತುಪ್ಪ ಅಷ್ಟೆ) ಎಂಬ ಸಂಗತಿ ಒಮ್ಮೆ ನನ್ನ ಅರಿವಿಗೆ ಬಂದಿತು. ಆ ಅನುಭವ ಹೀಗಿದೆ:

ನಾಲ್ಕು ವರ್ಷಗಳ ಹಿಂದೆ (ನವೆಂಬರ್ 2004) ರಾಜ್ಯಾದ್ಯಂತ ಶಂಕರಾಚಾರ್ಯರ ತತ್ವ ಸಿದ್ಧಾಂತಗಳನ್ನು ಸಾರುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು (ನನ್ನ ನೆನಪಿನಂತೆ ರಾಘವೇಶ್ವರ ಸ್ವಾಮಿಗಳು ಈ ಕಾರ್ಯಕ್ರಮದ ಹಿಂದಿದ್ದರು). ಪ್ರಮುಖ ನಗರಗಳಲ್ಲಿ ಒಂದು ವಾರದ 'ಶಾಂಕರ ಸಪ್ತಾಹ' ಎಂಬ ಕಾರ್ಯಕ್ರಮ ಹಮ್ಮಿಕೊಂಡು ಪ್ರತಿ ನಗರಕ್ಕೂ ಒಬ್ಬ ಮುಖ್ಯ ಭಾಷಣಕಾರನನ್ನು ನೇಮಿಸಲಾಗಿತ್ತು, ಈ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಪ್ರಸಿದ್ಧ ದೇವಸ್ಥಾನ ಪ್ರಾಕಾರದೊಳಗೆ ನಡೆದ ಉದ್ಘಾಟನಾ ಕಾರ್ಯಕ್ರಮ ನೋಡಿ ನಿಜಕ್ಕೂ ನಾನು ದಂಗಾಗಿ ಹೋದೆ. ಯಾಕೆಂದರೆ ಆ ಕಾರ್ಯಕ್ರಮ ಆರಂಭವಾಗಿದ್ದೇ ನಿರೂಪಕ ಬುದ್ಧನನ್ನು ಬೈಯ್ಯುವ ಮೂಲಕ. ಆ ಕಾರ್ಯಕ್ರಮಕ್ಕೆ ಸ್ಥಳೀಯ ಸುತ್ತಮುತ್ತಲಿನ ದೇಗುಲಗಳಿಗೆ ಸಂಬಂಧಪಟ್ಟ 5-6 ಜನ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಒಬ್ಬನನ್ನೂ ಬಿಡದೇ ಎಲ್ಲರೂ ಬುದ್ಧನಿಗೆ ಉಗಿದದ್ದೇ ಉಗಿದದ್ದು, ಇದು ಎಷ್ಟೊಂದು ರೇಜಿಗೆ ಹುಟ್ಟಿಸಿತೆಂದರೆ ಕೊನೆಗೆ ಸಪ್ತಾಹದ ಭಾಷಣಕಾರರಾಗಿ ನೇಮಿತವಾಗಿದ್ದ [illegible] [illegible] ಸಂಸ್ಕೃತಿ-ಧರ್ಮಗಳ [illegible] ಮಾಡಿದರು [illegible] ಎಲ್ಲರನ್ನು [illegible] (ಅಥವಾ [illegible]?) ಎಲ್ಲಾ ಭಾಷಣಕಾರರ [illegible]. "[illegible] ಬರುವುದಿಲ್ಲ" ಎಂತಲೂ ಹೇಳಿದರು (ಯಾಕೋ?) [illegible] ಈ ಶಾಂಕರಸಪ್ತಾಹ ಬೌದ್ಧರ ವೈರಿ ಶಂಕರಾಚಾರ್ಯರ ಸಮರ್ಥನೆಯ ವೇದಿಕೆಯಾಗಿ ಅಸಹ್ಯ ರೀತಿಯಲ್ಲಿ ಆರಂಭಗೊಂಡಿತು, ಉಳಿದ ಸ್ಥಳಗಳ ಸಮಾರಂಭಗಳ ವಿಷಯ ನನಗೆ ತಿಳಿಯದಿದ್ದರೂ ಈ ಸಪ್ತಾಹದ ಮಧ್ಯದಲ್ಲೇ ಕಂಚಿ ಕೊಲೆಗಾರನ ಬಂಧನದ ಸುದ್ದಿ ಕೇಳಿ ಬಂದ ಕಾರಣ ಸಪ್ತಾಹ ಅರ್ಧದಲ್ಲೇ ಸಮಾಪ್ತ ಕೂಡ ಆಯಿತೆಂಬ ಸಂಗತಿ ಕೇಳಿಬಂತು.

ವಾಸ್ತವವಾಗಿ ಲಂಪಟ, ಕೊಲೆಗಾರ, ವಂಚಕನೆಂದು ಕರೆಯಬಹುದಾದ ದಶಾವತಾರದ ಬುದ್ಧನಿಗಿಂತ ಗೌತಮ ಬುದ್ಧನ ಕತೆಯೇ ಹೆಚ್ಚು ಸ್ವೀಕಾರಾರ್ಹ. ಅಲ್ಲದೇ ಬೌದ್ಧರ ಮೇಲೆ ರಾಕ್ಷಸ ಕೃತ್ಯ ನಡೆಸಿದ ಶಂಕರಾಚಾರ್ಯರ 'ಕುಕೃತ್ಯಕ್ಕೆ' ತೇಪೆ ಹಚ್ಚಲೂ ಕೂಡ ಇದು ನೆರವಾಗಬಹುದೆಂಬ ಕಾರಣಕ್ಕಾಗಿ ಗೌತಮಬುದ್ಧನ ದಶಾವತಾರ ಸೇರ್ಪಡೆಯನ್ನ ವೈದಿಕರು ಮೌನವಾಗಿ ಸಹಿಸಿಕೊಂಡಿದ್ದಾರೆಯೇ ವಿನಃ ಇದು ಧರ್ಮ ಸಹಿಷ್ಣುತೆಯ ಕಾರಣಕ್ಕಾಗಿಯಂತೂ ಖಂಡಿತ ಅಲ್ಲ.

ಭಾಗವತ ಪುರಾಣದಲ್ಲಿ ಬರುವ 'ತರುಣಿಯರ ವ್ರತಭಂಗ'ವೆಂದೇ ಉಲ್ಲೇಖಿಸಲ್ಪಡುವ ಅವತಾರಿ ಬುದ್ಧನ ಕತೆ ತುಳಸಿ-ಜಲಂಧರರ ಕತೆಯಂತೆಯೇ ಇದೆ. ತ್ರಿಪುರಾಸುರನೆಂಬ ರಾಕ್ಷಸನನ್ನು ಕೊಲ್ಲಲು ಈಶ್ವರನಿಗೆ ಆ ಅಸುರನ ಪತ್ನಿಯರ ಪಾತಿವ್ರತ್ಯವೇ ತಡೆಯಾಗಿ ನಿಲ್ಲುತ್ತಿರುವ ಕಾರಣ ಕೊನೆಗೆ ಸ್ವಯಂ ವಿಷ್ಣು ಸುಂದರಾಂಗ ಬುದ್ಧನಾಗಿ ತ್ರಿಪುರಾಸುರನ ಪತ್ನಿಯರ ಮುಂದೆ ಬೆತ್ತಲೆಯಾಗಿ ನಿಂತು ಅವರ ಚಿತ್ತಚಾಂಚಲ್ಯವನ್ನು ಕೆರಳಿಸುವ ಮೂಲಕ ಅವರ ವ್ರತಭಂಗಗೊಳಿಸಿ ಆ ಮೂಲಕ ಶಿವನ ಕೊಲೆಯ ಹಾದಿಯನ್ನು ಸಲೀಸುಗೊಳಿಸುವ ಮಹಾನ್ ಕತೆಯೇ ಈ ಅವತಾರಿ ಬುದ್ಧನದ್ದು. ಎಲ್ಲಿಯ ಅಹಿಂಸಾ-ಪ್ರೇಮ ಸಂದೇಶದ ಬುದ್ಧ? ಎಲ್ಲಿಯ ಕೊಲೆಗಾರ ವಂಚಕ ಬುದ್ಧ? (ಗಾಂಧಿ-ಗೋಡ್ಸೆ).

ಪಾತಿವ್ರತ್ಯಕ್ಕೆ ಮಹತ್ವ ಕೊಡುವ ಸನಾತನಿಗಳಿಗೆ ಆ ಕಾಲದಲ್ಲಿ ಈ ತುಳಸಿ-ಜಲಂಧರ, ಬುದ್ಧನಂತಹವರ ಕತೆ ಅಸಹ್ಯವೆನಿಸಿದ್ದರೂ ನಂತರದವರಿಗಿದು ಅಪಥ್ಯವೆನಿಸದ ಕಾರಣಕ್ಕಾಗಿ ಮೂಲ ಬುದ್ಧನ ಬದಲು ಗೌತಮ ಬುದ್ಧನನ್ನು 13-14 ನೇ ಶತಮಾನದ ಜಯದೇವನಂತಹವರು ತಮ್ಮ ಕಾವ್ಯದಲ್ಲಿ ಸೇರಿಸಿಕೊಂಡರು. ಈ ಕಾರಣಕ್ಕಾಗಿಯೇ ಉತ್ತರ ಭಾರತದ ಕೆಲ ಸಂಪ್ರದಾಯಗಳಲ್ಲಿ ಲಂಪಟ ಮೂಲ ಬುದ್ಧನ ಬದಲು ಕೃಷ್ಣನ ಅಣ್ಣ ಬಲರಾಮ (ಬಲದೇವ)ನನ್ನೇ ದಶಾವತಾರದಲ್ಲಿ ಬಳಸಿಕೊಂಡದ್ದೂ ಇದೆ. (ಒಟ್ಟಾರೆ ಆತ ಒಬ್ಬ ರಕ್ಕಸನನ್ನ ಕೊಂದರೆ ಸಾಕು ಅಷ್ಟೆ). ಆದರೆ ದಕ್ಷಿಣದ ಭಕ್ತಿ ಚಳವಳಿಯಲ್ಲಿ ಇದರ ಪ್ರಭಾವ ತಕ್ಷಣಕ್ಕೆ ಆಗಲಿಲ್ಲ.

ಉದಾಹರಣೆಗೆ ಕನಕದಾಸ-ತಾಳಲಾರೆನೋ ಮಾಸಾಳಲಾರೆನೋ ಕೀರ್ತನೆಯಲ್ಲಿ

ಪತಿವ್ರತೆಯರ ವ್ರತವಳಿಯ ಬೇಕೆನಿಸುತಲಿ
ಅತಿಶಯದಿ ತ್ರಿಪುರ ಸ್ತ್ರೀಯರ
ನುತ ಬೌದ್ಧರೂಪದಿ ಬಹುಭಂಗಪಡಿಸಿದ
ರತಿ ಪಿತನೆಂಬ ಮಾಸಾಳಮ್ಮ
ಪುರಂದರದಾಸರ ಮಂಗಳ ಹಾಡಿನಲ್ಲಿನ
ಭರದಲಿ ಸತಿಯರ ವ್ರತಗೆಡಿಸಿದಗೆ
ಧುರದಲಿ ತುರಗವೇರಿದಗೆ

-ಇತ್ಯಾದಿಗಳನ್ನು ನೋಡಬಹುದು.

ಸಾಮಾನ್ಯವಾಗಿ ಬೆತ್ತಲೆ ನಿಂತಿಹ ಬುದ್ಧನೆಂದಾಕ್ಷಣ ಹಿಂದೂಗಳಿಗೆ ಜೈನರ ಬಾಹುಬಲಿ ಹಾಗು ತೀರ್ಥಂಕರರ ಸಾಮ್ಯತೆಯ ನೆನಪಾಗುವ ಕಾರಣಕ್ಕೆ ಬುದ್ಧನ ಬೆತ್ತಲೆತನದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲಾರರು.



ದೇಶದಲ್ಲಿ ರಾಜಾಶ್ರಯ-ಜನರ ಪ್ರೀತಿ ಪಡೆದು ಕಣ್ಣು ಕುಕ್ಕುವಂತೆ ಹರಡಿ ಶಂಕರಾಚಾರ್ಯರಂಥವರ ನಿದ್ದೆಕೆಡಿಸಿದ ಬೌದ್ಧಧರ್ಮ; ಅಥವಾ ಬುದ್ಧನ ಸಮಕಾಲೀನನಾದ 24 ನೆಯ ತೀರ್ಥಂಕರ ಮಹಾವೀರನಂತಹವರ ಸಮರ್ಥ ಪ್ರಾಚೀನ ಗುರು (ತೀರ್ಥಂಕರ) ಪರಂಪರೆಯನ್ನು ಹೊಂದಿರುವ ಜೈನಧರ್ಮಗಳಿಗೆ ಹೋಲಿಸಿದಲ್ಲಿ ಕೇವಲ ಬ್ರಾಹ್ಮಣ ತತ್ವದಲ್ಲೇ ಮುಳುಗಿರುವ ಹಿಂದೂ ಧರ್ಮಕ್ಕೆ ಯಾವ ಅಡಿಪಾಯವೂ ಇದ್ದಿರಲಿಲ್ಲ, ಆದರೆ ಈ ಅಡಿಪಾಯ ಇಲ್ಲದ ಧರ್ಮವೇ ನೆರೆತರ ಭಾರತೀಯ ಶ್ರೇಷ್ಠ ಧರ್ಮಗಳಾದ ಬೌದ್ಧ ಜೈನ ಧರ್ಮವನ್ನ ಮೂಲೆಗುಂಪು ಮಾಡಿದ್ದು ಇತಿಹಾಸ. ಕ್ರಿಶ್ಚಿಯನ್, ಇಸ್ಲಾಂನ್ನು ಬೇಟೆಗಾರ ಮತ ಎಂದು ಟೀಕಿಸುವ ಭೈರಪ್ಪನ ಹಿಂದೂ ಧರ್ಮವನ್ನು ಆ ರೀತಿಯಲ್ಲಿ ನೋಡಿದರೆ [illegible] ಗಾರ ಎನ್ನುವುದಕ್ಕಿಂತ 'ಮೋಸಗಾರ' ಮತ ಎಂದೇ ಕರೆಯಬೇಕಾಗುತ್ತದೆ

[illegible]

"ನಾನು ಸತ್ತಮ್ಯಾಲೆ ಶವನ ಮೆಡಿಕಲ್ ಕಾಲೇಜಿಗೆ ಗಿಫ್ಟ್ ಕೊಡ್ತಿನಿ!

"ಅ ದ್ಯಾವೇಗೌಡ್ರ ತಮ್ಮ ತೀರೋದನಂತೆ. ಗೊತ್ತೇ ಆಗಲಿಲ್ಲ ಕಂಢ್ರ ಉಗ್ರಿ" ಎಂದ ಸೀರ.

"ಗೊತ್ತಾಗಕ್ಕೆ ನೀನೇನು ಅವುರ ಕಳ್ಳು ಬಳ್ಳಿಯೇನೊ?"

"ಹುಡಿಕ್ಕಂಡೋದ್ರೆ ಯಾವುದಾದ್ರು ಬಳ್ಳಿ ಸುತ್ತಿಗಂಡಿರದು ಸಿಕ್ಕೇ ಸಿಗತದೆ ಕಂಢ್ರ. ಏನು ಬ್ಯಾಡಪ್ಪ ಆ ರಾಮಯ್ಯನ ಮಗ ಮಾರುಕಂಡೇಗೌಡನಿಗೆ ವಳೆನರಸೀಪುರದಿಂದ ಹೆಣ್ಣು ತಂದವುರೆ. ರಾಮಯ್ಯ ನನಿಗೆ ಸಮಂದಾಗಬೇಕು. ಹಿಂಗೇ ಹೋದ್ರೆ ಸಿಗದಿಲವೆ?" ಎಂದ ಸೀರ.

ಬಯಲು ಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ನೀನೇಳದ ಯಂಗಾಯ್ತಪ್ಪ ಅಂದ್ರೆ, ಲಾಳಿನಕ್ಕರೆ ರಾಮೇಗೌಡನ ಹಿಟ್ಟಿನ ಮಿಷನ್ನಲ್ಲಿ ನಿಂಗಣ್ಣ ಅಂತ ವಬ್ಬದ್ನ ಅವುನು ರಾಜಕುಮಾರನ ಸಮಂಧಿ ಅಂತ ಹೇಳೋನು, ಅಂಗಾಯ್ತು ನಿನ್ನ ಕತೆ?" ಎಂದ ಉಗ್ರಿ ನಕ್ಕ.

"ನಾನು ದ್ಯಾವೇಗೌಡ್ರ ಸಮಂಧಿ ಅಂತ ಹೇಳಿಕಳೋ ಅಂತದ್ದೇನು ಬಂದಿಲ್ಲ ಕಂಢ್ರ. ದ್ಯಾವೇಗೌಡನ ತಮ್ಮ ಬಸವೇಗೌಡ ತೀರೋದನಂತೆ ಅಂದೆ ಅಷ್ಟೆ."

"ತೀರೋದ ಪಾಪ ಯಾರೇನಿಲ್ಲಿದ್ದರೆ, ಆದ್ರು ಯಣಿಗಿಬುಟ್ಟ."

"ಅದ್ಯಾಕೆಣಿಗಿದಾ?" ಎಂದ ಕಾಳಮಾವ.

"ಕ್ಯಾನ್ಸರಾಗಿತ್ತು ಕಣ ಮಾವ. ಜತಿಗೆ ವಳ್ಳೆ ಮಕ್ಕಳು ಹುಟ್ಟಲಿಲ್ಲ ಅವುನಿಗೆ. ಅದೇ ಕ್ವರಗಿನಲ್ಲಿ ಹೋಗಿಬುಟ್ಟ."

"ಒಂದುದುಗ ಜೈಲಲ್ಲಿರಬೇಕಲ್ಲವೇ?" ಎಂದ ಸೀರ.

"ಇರಬೇಕೇನಪ್ಪ,"

"ಅದ್ಯಾಕ್ ಜೈಲಲ್ಲಿದ್ದನ್ಲ?" ಎಂದಳು ಜುಮ್ಮಿ.

"ಇದೇನೆ ಹಿಂಕೇಳ್ತಿ? ಬಸವೇಗೌಡನಿಗೆ ಈ ನಮ್ಮ ನಾಳಿನ ಕ್ಕರೆ ರಾಮೇಗೌಡನಿಗೆ ಒಂದುದುಗಿತ್ತಲ್ಲ, ಲೋಕೇಶ ಅಂತ, ನೋಡಿದ್ಯಾ?"

"ಅವುನ್ಯಾರ್ಲ?"

"ಏ, ಗಂಗಾಧರಮೂರ್ತಿ ಕ್ವಲೆ ಮಾಡಿರಲಿಲ್ವೆ. ಅಂತದೊಂದುದುಗ ಬಸವೇಗೌನಿಗೂ ಇತ್ತು. ಅದೇನು ಮಾಡ್ತನ್ನ ಅಂದ್ರೇ ದ್ಯಾವೇಗೌಡನೆಡ್ತಿ ಚೆನ್ನಮ್ಮ ಸ್ವಸೆ ಕರಕಂಡು ಈಸ್ಪುರನ ಗುಡಿಗೆ ಬಂದು ಪೂಜೆ ಮಾಡುವಾಗ ಅವುಳ ಮ್ಯಾಲೆ ಆಸೆಡ್ಡಾಕಿ ಬುಡ್ತು."

"ಅದಳಿ ಕತೆ ಅಲವೇನ್ಲ?"

"ಅಗೊ ನೋಡಾಗಲಿಂದ ಬಡವೇಗೌಡ ಮಂಕಾದ. ಅಮ್ಯಾಲವುರವ್ವ ಸತ್ತೋದ್ಲು. ಆಗ ದ್ಯಾವೇಗೌಡ ಪ್ರಧಾನಿಯಾಗಿದ್ದ. ಆಗ್ಲು ದ್ಯಾವೇಗೌಡ ಸಬಕ್ಕೆ ಬೆಂಕಿ ಕೊಡದಂಗೆ ಇದೇ ಬಸವೇಗೌಡ ಹಟ ಮಾಡಿದ್ದ ಕಣ ಮಾವ."

"ಅದ್ಯಾಕಲ ಮಾಡಿದ್ದಾ?"

"ಈ ದ್ಯಾವೇಗೌಡ ಅದ್ಯಾವನೊ ಪೊಲೀಸ್ ವರ್ಗ ಮಾಡಿದ್ನಂತೆ. ಅವುನ ಬಂದು 'ಬಸವೇಗೌಡ್ರೆ, ನಿಮ್ಮಣ್ಣ ನನಿಗಿಂ ಅನ್ಯಾಯ ಮಾಡ್ನವುನೆ. ಇದು ಸರಿಯೇ? ಅಂತ ಅತ್ತು ಬುಟ್ಟು ಹೋದನಂತೆ. (ಸುದ್ದಿ ಕೇಳಿದಾಗಿನಿಂದ ಬಸವೇಗೌಡನಿ ಒಂಥರಾ ಆಗಿತ್ತು. ನನ್ನ ಯೋಗ್ತಿಗೆ ನಾನೆ ವಬ್ಬ ಪೋಲಿಸ್ ಟ್ರಾನ್ಸ್‌ಫರ್ ತಡಯಕ ಗಲಿಲವಲ್ಲಾ ಅಂತ ಕ್ವರಗತಾಯಿದ್ದ. ಅದೆ ಟೇಮಿಗೆ ಅವರವ್ವ ತೀರಿಕಂಡ್ಳು. ದ್ಯಾವೇಗೌ ಬಂದ. ಈ ಬಸವೇಗೌಡ 'ವಗ ಮಾಡಿರೋ ಪೊಲೀಸ್ ತಿರಗ ಇಲ್ಲಿ ವರ್ಗ ಮಾಡು. ಆಮ್ಯಾಲೆ ನಮ್ಮವ್ವನ ಸಬ ಕೊಳ್ಳಿ ಯಿಡು' ಅಂದನಂತೆ. ಇದಕೆ ನೇಳ್ತೀ?"

"ನೋಡು ಮತ್ತೆ ಸರತ್ತು ಅಂದ್ರದಪ್ಪ' ಎಂದ ಸೀರ.

"ಅಲ್ಲಾಕಳ್ಳಾ, ಅವುನ್ಯಾವನೊ ಪೊಲೀಸ್ ಪ್ಯಾದೆ ಟ್ರಾನ್ಸ್‌ಫರ್ ಮಾಡಕ್ಕೆ ಇಂತ ತಕರಾರು ತಗದಿದ್ದಾ ಅಂದ್ರೆ, ಆ ಬಸವೇಗೌಡ ಇನ್ನಂಥೋನು ಅಂತ?" ಎಂದ ಕಾಳಮಾವ.

"ಪಾಪ ಎತ್ತಿನಂಥೋನು ಕಣಮಾವ. ಅಂಥೊನ್ನ ಆ ಪೋಲಿ ನನ್ನ ಮಗ ಕೈಗಾಯ್ಕಂಡು ಮಾಡಿದ್ದ ಕ್ಯಲಸ ನೋಡು."


"ಅಮ್ಯಾಲೆ ಪೊಲೀಸ್ ಟ್ರಾನ್ಸ್‌ಫರಾಯ್ತೇನ್ಲ?" ಎಂದಳು ಜುಮ್ಮಿ.

"ಎಲ್ಯಾದತೆ? ದ್ಯಾವೇಗೌಡನ ಕಣ್ಣಿಗೆ ಬದ್ದಾ ಅಂದ್ರೆ ಅವುನು ಶನಿ ಕಣ್ಣಿಗೆ ಬದ್ದಂಗಲವೆ. ಆಗ್ಲೆ ಗಡೀಪಾರಾಗಿರತನೆ."

"ಇರತರೆ ವಬ್ಬೊಬ್ರು ಅಂಥೋರು" ಎಂದ ಸೀರ.

"ಯಂಥೋರೋ?" ಎಂದ ಉಗ್ರಿ.

"ಅಧಿಕಾರದಲ್ಲಿದ್ದೋರ ಸಮಂಧಿಕರ ಕೈಗಾಯ್ಕಂಡು ಏನಾರ ಮಾಡಿಸಿಗಳನಾ ಅನ್ನೋರು ಕಂಢ್ರ."



"ಅಂಥೋರೆ ಈಗ ಜಾಸ್ತಿಯಾಗಿಬುಟ್ಟವುರೆ ಕಣೊ."

"ಯಾರಪ್ಪ ಈಗ ಜಾಸ್ತಿಯಾಗಿರೋರು?" ಎಂದುಕೊಂಡು ವಾಟಿಸ್ಸೆ ಹಾಜರಾದ.

"ನಿನ್ನಂಥೋರಂತೆ ಕಂಢ್ರ" ಎಂದಳು ಜುಮ್ಮಿ.

"ನನ್ನಂಥೋರು ಜಾಸ್ತಿಯಾದರೆ ದೇಸಕ್ಕೆ ಯಾವ ತೊಂದ್ರೆನೂ ಇಲ್ಲ ಕಣಕ್ಕ. ಆದ್ರೆ ರಾಜಕಾರಣಿಗಳು ಜಾಸ್ತಿಯಾಗಬಾರದು."

"ಅವುರೆಲ್ಲಿ ಜಾಸ್ತಿಯಾಗಿದ್ದರ್ಲ?"

"ಇದೇನಕ್ಕ ಹಿಂಕೇಳ್ತಿ? ಮದ್ಲು ಕಾಂಗ್ರೆಸ್ ಒಂದೇ ಒಂದು ಪಾರ್ಟಿಯಿತ್ತು, ಈಗ ಎಷ್ಟು ಅವೆ? ಅವುರ್ಕಲ್ಲ ಒಂದೊಂದು ಸಾರಿ ಅಧಿ ಬಂದಾಗ್ಲೂ ಆಸ್ತಿ ಮಾಡಿಕಂಡೋ, ದೇಶ ಉಳಿತದೆ ಪರೆಗ್‌ಜಾಂಪಲ್ ಮದ್ದೂರು ಕ್ಯಾಂಡೇಟ್ ತಮ್ಮ ನೂರುಕೋಟಿ ಇದ್ದತ್ತಂತೆ. ಎಲ್ಲಿಂದ ಬತ್ತು?"

"ಯಲ್ಲಾ ರಾಜಕಾರಣಿಗಳಿಗೆ ಎಲ್ಲಿಂದ ಬಂದ ಅವುನಿಗೂ ಅಲ್ಲಿಂದ್ಲೆ ಬ ಬಹುದು, ಬಿಡೊ" ಎಂದ

"ಅದ್ಯಂಗೆ ದುಡ್ಡು ಅಂತ?" ಎಂದ ಸೀರ.

"ಆದ ದ್ಯಾವೇಗೌಡ್ರು ಸಿಕ್ಕಿದಾಗ ಕೇಳು ಚಿಗಪ್ಪ, ಬೆಂಗಳೂರಲ್ಲಿ ಜೆಡಿಎಸ್ ಸೇರಿದಾಗ ಗೌಡ್ರು 'ಸನ್ನೆದ ಸೀರೆಯ ಮ್ಯಾಕೆತ್ತಿ ಸ್ವಂಟಕ್ಕೆ ಸಿಗಿಸಿಗಂಡು ಕಳೆಕೀಳತಿದ್ದು, ನಾಟಿ ಮಾಡತಿದ್ದು' ಅಂದ ಆ ಕಸುಬು ಬುಟ್ಟು ಬೆಂಗಳೂರಿಗೆ ಬಂದು ಸೇರಿಕಂಡ್ರಲ್ಲ ಯಂಗೆ ಅಂತ ಕೇಳು ಬೇಕಾದ್ರೆ. ನೀನು ಹೋಗಿ ಸೇರಿಕೊ."

"ನಾನು ಸತ್ರು ನಮ ಬುಟ್ಟು ಹೋಗಲ್ಲ ಕಂಢ್ರ" ಸೀರ.

"ಊರಲ್ಲೆ ಸ್ಥಾಯಂ ಒಂದು ಕ್ಯಲಸ ಮಾಡು ಚಿಗಪ್ಪ"

"ಅದೇನೇಳ್ಳ?"

"ಚುಂಚನಗಿರಿ ಮೆಡಿಕಲ್ ಕಾಲೇಜಿನೋರು ತಗತ್ತರಂತೆ. ಒಂದು ಶವಕ್ಕೆ ನಲವತ್ತು ಸವುರವಂತೆ. ಸತ್ತೇಟಗೆ ನಾನು ತಗಂಡೋಗಿ ಕೊಟ್ಟು ದುಡ್ಡೀಸ ನಾನೊಸಿ ಮಡಿಕಂಡು, ನಮ್ಮ ಚಿಗವ್ವನಿಗೊಸಿ ಕೊ ಗಾಡ ಪ್ರಾಮಿಸ್."

"ನೋದವುನಾಡೊ ಮಾತ. ಪಾಪಿ ಪರ

ಯಡ್ಡಿಗೆ 'ಹಿಂದೂತ್ವ' ಡಾಕ್ಟರೇಟು!

ಧಾರ್ಮಿಕ ಮುಖ್ಯಮಂತ್ರಿ ಅಂದರೆ ಯಡ್ಯೂರಪ್ಪ ತರಹ ಇರಬೇಕು. ಸತ್ಯಹರಿಶ್ಚಂದ್ರನ ಪ್ರತಿರೂಪವೋ ಎಂಬಂತೆ 'ಖಜಾನೆ ಖಾಲಿಯಾಗಿದೆ' ಎಂಬ ಸತ್ಯವನ್ನು ಬಹಿರಂಗಪಡಿಸುತ್ತಾರೆ. ನಂದು ಪಾಪರ್ ಸರ್ಕಾರ ಅಂತ ಮುಖ್ಯಮಂತ್ರೀನೆ ಒಪ್ಪಿಕೊಂಡಿದ್ದಾರೆ ಅಂತೇನಾದರೂ ಯಾರಾದರೂ ಜಾಡಿಸಬೇಕು ಎಂದು ಮನಸ್ಸು ಮಾಡಿದರೆ 'ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಇಲ್ಲ' ಅಂತಾರೆ.

ಅಮೆರಿಕದ ಮಿಚಿಗನ್ ರಾಜ್ಯದ ಸಗಿನಾವ್ರೋ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತ್ತಲ್ಲಾ. ಸಾಮಾನ್ಯವಾಗಿ ಅಧಿಕಾರದಲ್ಲಿರುವವರನ್ನ ಡಾಕ್ಟರೇಟ್ ದಾನ ಮಾಡಿ ವಶೀಕರಣಗೊಳಿಸಿಕೊಳ್ಳುವ ವಿದ್ಯೆ ಭಾರತೀಯರಿಗೆ ಕರಗತ ಆಗಿದೆ. ಇದು ಹಿಂದೇನೂ ನಡೆದಿವೆ ಮುಂದೇನೂ ನಡೆಯುತ್ತವೆ. ಅಂತಹ ಕಾಕಾಪುದಿ ವಿಶ್ವವಿದ್ಯಾಲಯಗಳ ದಿವ್ಯ ದೃಷ್ಟಿಗೆ ಅಧಿಕಾರಸ್ಥರ ಅಮೋಘ ಪ್ರತಿಭೆಯ ಯಾವುದಾದರೂ ಕ್ಷೇತ್ರ ಗೋಚರಿಸುವುದುಂಟು. ಮಿಚಿ ಗನ್ ರಾಜ್ಯದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರಿಗೂ ಇದೇ ಚಾಳಿ ಇರಬಹುದೇನೋ. ಸನ್ಮಾನ್ಯ ಯಡ್ಯೂರಪ್ಪ ನವರ ಯಾವುದೋ ಕ್ಷೇತ್ರದ ಅನನ್ಯ ಸೇವೆ 'ಹಿಂದೂತ್ವ' ದೃಷ್ಟಿಗೆ ಬಿದ್ದಿರಬಹುದೇನೋ. ಅಥವಾ ಕೆಲವು ವಿದೇಶಿ ವಿಶ್ವವಿದ್ಯಾಲಯಗಳು ಹಣ ಪಡೆದು ಪದವಿ ನೀಡುತ್ತವಂತೆ. ಇದು 'ಹಣದ ಡಾಕ್ಟರೇಟೋ' ಅಥವಾ 'ಹಿಂದೂತ್ವದ ಡಾಕ್ಟರೇಟೋ' ತಿಳಿದುಬಂದಿಲ್ಲ, ಮೊದಲನೆಯದಾದರೆ ಈ ಹಣವನ್ನು ಭರಿಸಿದವರು ಯಾರು ಎಂಬುದಕ್ಕೆ ಮಾಹಿತಿ ದೊರಕಿಲ್ಲವಾಗಿ ಇದು ಎರಡನೆ ಡಾಕ್ಟರೇಟ್ ಎಂಬುದಾಗಿ ತಾತ್ಕಾಲಿಕವಾಗಿ ಊಹಿಸಬಹುದಾಗಿದೆ.

ಮಾನ್ಯ ಮುಖ್ಯಮಂತ್ರಿಗಳಿಗೆ ಡಾಕ್ಟರೇಟ್ ಪ್ರದಾನ ಸಮಾರಂಭವೂ ಅಭಿವೃದ್ಧಿ ಕಾರ್ಯ ಎಂದು ಪರಿಗಣಿಸಬಹುದಾಗಿದೆ! ಯಾಕೆಂದರೆ ಇದನ್ನು ಸ್ವೀಕರಿಸಲು ಖುದ್ದು ಯಡ್ಯೂರಪ್ಪನವರೇ ಹಾಜರಾಗಲು ವಿದೇಶಕ್ಕೆ ತೆರಳಿದ್ದಾರೆ. ತಮ್ಮ ಅಪ್ರತಿಮ ಪ್ರತಿಭೆಯ ಪದವಿ ಪ್ರದಾನ ಸಮಾರಂಭವನ್ನು ವೀಕ್ಷಿಸಿ ಕಣ್ಮನ ತುಂಬಿಸಿಕೊಳ್ಳಲು ಮೂವರು ಸಚಿವರು ದಯಮಾಡಿಸಿದ್ದಾರೆ. ಅಲ್ಲದೆ ಹಲವು ಹಿರಿಯ ಅಧಿಕಾರಿಗಳೂ ಈ ಅಭೂತಪೂರ್ವ ಸಮಾರಂಭವನ್ನು ವೀಕ್ಷಿಸಲು ತೆರಳಿದ್ದಾರೆ. ಈ ದಂಡಿನ ಜೊತೆಗೆ ಶೋಭಾ ಕರಂದ್ಲಾಜೆ ಇದ್ದಿದ್ದರೆ ಸಮಾರಂಭಕ್ಕಲ್ಲದಿದ್ದರೂ ಸನ್ಮಾನ್ಯರಾದ ಯಡ್ಯೂರಪ್ಪನವರ ಹಾಗೂ ರಾಮಚಂದ್ರೇಗೌಡರ ಮುಖಾರವಿಂದ ಅರಳಿ ರಂಗೇರುತ್ತಿದ್ದವು ಎಂಬುದರಲ್ಲಿ ಸಂಶಯ ಇಲ್ಲ, ಕಳೆತರುವ ಕಾರ್ಯವನ್ನು ಅಲ್ಲಿಯವರೇ ಯಶಸ್ವಿಯಾಗಿ ನಿರ್ವಹಿಸುವ ಭರವಸೆ ನೀಡಿದ್ದರಿಂದಲೋ ಏನು ಕಾರಣವೋ ಶೋಭಾ ಅವರ ನೆರವು ಅವಶ್ಯಕವೆನ್ನಿಸದೆ ಇರಬಹುದು ಏನಾದರಾಗಲಿ ಆರ್ಥಿಕ ಕುಸಿತದ ಹಿನ್ನೆಲೆಯಿದ್ದರೂ ಇಂತಹ ಮೋಜಿನ ಅಭಿವೃದ್ಧಿ ಕಾರ್ಯದಲ್ಲಿ ಅವರು ಪಾಲುಗೊಳ್ಳದೆ ಅವಕಾಶ ವಂಚಿತರಾಗಿರುವುದು ದುರಂತವೇ ಸರಿ!



ಯಡ್ಯೂರಪ್ಪ 'ಅಭಿವೃದ್ಧಿ' ಇಷ್ಟಕ್ಕೇ ಸೀಮಿತಗೊಂಡಿಲ್ಲ, ಮಠ ಮಾನ್ಯಗಳಿಗೆ ಕೊಡುಗೈ ದೊರೆಯಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ. ಜನರ ಸಿಟ್ಟು, ಸಂಕಟ, ಆಕ್ರೋಶಭರಿತ ಮಾತು ಇವರನ್ನು ಎದೆ ಕುಂದಿಸಲಾರದು. ಯಾರೇ ಕೂಗಾಡಲಿ, ಯಾರೇ ಹೋರಾಡಲಿ, ಯಡ್ಯೂರಪ್ಪ ನಿಮಗೆ ಸಾಟಿ ಇಲ್ಲ!

ಇಂತಹ ಯಡ್ಡಿಗೆ ಹಿಂದೂತ್ವ ಡಾಕ್ಟರೇಟ್ ನೀಡಬೇಕಾದ್ದೆ!

* * * * * * * * *

ಅಣಕ

■ ಎಚ್.ಎಲ್. ಕೇಶವಮೂ

ಉಪಚುನಾವಣೆ ಬಂದಿದೆ.

ಅಭ್ಯರ್ಥಿಗಳು ಆಸ್ತಿ ಘೋಷಿಸಿದ್ದಾರೆ.

ಏನಾಶ್ಚರ್ಯ, ಎಲ್ಲರೂ ಕೋಟ್ಯಾಧೀಶರೆ!

ಅವರಲ್ಲಿ ಕಿರೀಟಪ್ರಾಯ ಡಿ.ಸಿ. ತಮ್ಮಣ್ಣ!

ಇನಿಷಿಯಲ್ಲೇ ಹುದ್ದೆಯ ಹೆಸರಾಗಿದ್ದರೂ ಈ ಪವಾಡ ಸಾಧ್ಯ ಇರಲಿಲ್ಲವೇನೋ!

ತಮ್ಮಣ್ಣ ಬಿ.ಇ. ಪದವೀಧರ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿದ್ದರು. ನಿವೃತ್ತಿ ನಂತರ ರಾಜಕಾರಣಿ ಆದರು; ಎರಡು ಸಲ ಶಾಸಕರಾಗಿದ್ದರು.

ಅವರು ಘೋಷಿಸಿಕೊಂಡಿರುವ ಆಸ್ತಿ ನೂರು ಕೋಟಿ!

ಈ ಶತಕೋಟಿ ಆಸ್ತಿ (ಅನಧಿಕೃತವಾಗಿ ಇನ್ನೆಷ್ಟಿದೆಯೋ!) ಮಾಡಿದ್ದು ಯಾವಾಗ?

ಅಧಿಕಾರದಲ್ಲಿದ್ದಾಗಲೋ? ಶಾಸಕರಾಗಿದ್ದಾಗಲೋ? ಅಥವಾ ಪಿತ್ರಾರ್ಜಿತ ಆಸ್ತಿಯೇ ಇದಕ್ಕೆ ಮೂಲವ

ವ್ಯವಸಾಯ ಅನ್ನುವುದು ನಷ್ಟದ ಉದ್ಯಮ. ಅದ ಇಷ್ಟು ಸಂಪಾದಿಸಲು ಸಾಧ್ಯವಿಲ್ಲ ಎನ್ನುವುದು ಅನ ಕಲಿಸಿದ ಪಾಠ. ಅಂದಮೇಲೆ ಬೇರೆಯ ಮೂಲ ಇರ ಅದು ಯಾವುದು?

ಒಂದು ಸಣ್ಣ ಪ್ರಶ್ನೆ:

ಕೆಲಸಕ್ಕೆ ಸೇರುವ ಮುನ್ನ ಇದ್ದ ಇವರ ಆಸ್ತಿ ಎ

ನಿವೃತ್ತಿ ಸಮಯದಲ್ಲಿ ಇದ್ದ ಆಸ್ತಿ ವಿವರವೇನ

ಶಾಸಕರಾದ ಮೇಲೆ ಇದ್ದ ಆಸ್ತಿ ಎಷ್ಟು?

ಚುನಾವಣಾ ಆಯೋಗ ಆಸ್ತಿಯ ವಿವರ ಕೇ ಮೂಲ ಹುಡುಕಲು ಹೋಗುವುದಿಲ್ಲ. ಇದು ಭ್ರ ಶೀರಕ್ಷೆ!

ಅಭ್ಯರ್ಥಿಗಳಲ್ಲಿ ಒಂದು ಮನವಿ:

ಕೋಟ್ಯಾಧೀಶರಾಗಿದ್ದರೂ ತಾವು ಬಡವರ ಸ ಕಂಕಣ ಕಟ್ಟಿದ್ದೀರಿ. ಸಂತೋಷ. ತಾವು ಕೋಟ್ಯಾಧೀಶರಾ ಹೇಗೆ ಎಂಬುದನ್ನು ವಿವರಿಸುವ ದೊಡ್ಡತನ ತೋರು

'ತೋರಿದ್ದಾರಲ್ರೀ ಚೆನ್ನಿಗಪ್ಪನೋರು' ಅಂತ ಯಾ ಕೂಗಿ ಹೇಳಿದಂತಾಯಿತು.

'ಎಲ್ಲಿ ಹೇಳಿದಾರ್ರಿ' ಅಂದೆ.

'ತಿಂಗಳಿಗೆ ಅದರಿಂದ ಹತ್ತು ಲಕ್ಷ ಆದಾಯ ಅಂತ ಹೇಳಿದ್ದಾರಲ್ಲ?'

'ಎಲ್ಲಿಂದ ಬರುತ್ತಂತೆ ಅದು?'

'ವ್ಯವಸಾಯದಿಂದ?'

...ವಂಗೆ ತೀರಮಾನದ ಸಬ ತಗಂಡೋಗಿ ಮಾರತನಂತೆ, ಥೂ ನಿನ್ನ ...ಉಗೆ ಮಣ್ಣಾಕ."

"ಯುಕ್ತವ್. ಪಾಪಿ ಪರದೇಶಿಯಣಾವ ಚುಂಚನಗಿರಿ ಮೆಡಿಕಲ್ ...ಜನೋರು ಯಾವತ್ತು ಮುಟ್ಟಲ್ಲ, ದಾನಕೊಟ್ರೆ ತಗತರೆ, ...ಲ್ಲ ...ತಗತರೆ ಗೊತ್ತಾ?"

"ಹ್ಯಣ ತಗಂಡು ಅವ್ರುರೇನು ಮಾಡ್ತರೂ?"

"ನನನಾರು ಸಂದುನ್ನೂ ಕೊದು ಟೆಸ್ಟು ಮಾಡ್ತರೆ. ಜೀವಸಯಿತ ಇರೋರು ...ಲ್ಲ ಬಿದ್ದಾಗ ಆಪರೇಶನ್ ಮಾಡಬೇಕಾದ್ರೆ ಸತ್ತ ಹ್ಯಣ ಕೊದು ಟ್ರೈನಿಂಗ್ ...ರ ಕಣಾಕ್ಕ. ಅದ್ಕೆ ಮೆಡಿಕಲ್ ಸ್ಟೂಡೆಂಟಗೆ ಅನುಕೂಲಾಗ್ಲಿ ಅಂತ ನಾನಂತು ...ಶವ ದಾನ ಮಾಡ್ತೀನಿ."

"ನಿನ್ನ ಶವ ನೀನೆ ದಾನ ಮಾಡಿಕಳಕ್ಕೆ ಬರದಿಲ್ಲ ಕಣೊ" ಎಂದ ಉಗ್ರಿ.

"ಹ್ಯರಗನಳ್ಳಿ ಶಾಂತಣ್ಣ ಆಗ್ಲೆ ದಾನ ಮಾಡಿದನಂತೆ."

"ಅಂಗಾದ್ರೆ ಹೋಗಿ ಮಾಡು, ನಿನ್ನಾರು ಹಿಡಕಂಡಿದ್ದರು?"

"ಮಾಡೇ ಮಾಡ್ತೀನಿ ಕಣೊ ಉಗ್ರಿ. ಮಶಾಣವೇ ಇಲ್ದೆಯಿರೊ ಈ ...ಮಕ್ಕೆ ನನ್ನ ಶವ ಬುಟ್ಟುಕೊಡದಿಲ್ಲ ನಾನು."

"ಅದ್ಯಾಕ್ಲ ಮಶಾಣಿಲ್ಲ?"

"ನೋಡಕ್ಕ ಸಾಬರು ಖಬರಸ್ತಾನ ಅಂತ ಮಾಡಿಕಂಡು ಎಷ್ಟು ಚೆನ್ನಾಗಿ ...ಣಾ ಮೇನ್‌ಟೇನ್ ಮಾಡ್ತವ್ರುರೆ ಗೊತ್ತೇ? ಅದೇ ಕ್ರಿಶ್ಚಿಯನ್ರು ವರಸ ...ಸುಣ್ಣ ಬಣ್ಣ ಹ್ವಡಕಂಡು ಮಶಾಣವೆ ಮನೆ ಮಡಿಗಿದಂಗೆ ಮಡಿಕಂಡವ್ರುರೆ. ...ಹಿಂದುಗಳಿಗೆ ಒಂದು ಮಶಾಣವೇಯಿಲ್ಲ!"

"ಅಂಗಂತಿಯಾ?"

"ಊ ಕಣಾಕ್ಕ. ವಸಿ ಜನ ಹಳೆ ಕ್ಯರೆತ ಹೂಣತರೆ. ವಸಿಜನ ವಸ ಕ್ಯರೆತ ...ತರೆ. ಹರಿಜನರಂತೂ ಅದೆಲ್ಲಿ ಸುಡುತರೊ, ಹೂಣತರೊ ಯಾರಿಗೂ ...ತ್ತಿಲ್ಲ. ಇಂತ ಧರಮದಲ್ಲಿ ಸತ್ತು ಬೇವರ್ಸಿ ಹ್ಯಣಾಗದಕ್ಕಿಂತ ನನ್ನ ಶವನ ...ಡಿಕಲ್ ಕಾಲೇಜಿಗೆ ಗಿಫ್ಟ್ ಕೊಡ್ತೀನಿ ಕಣಾಕ್ಕ."

"ವಳ್ಳೆ ತೀರಮಾನ ಕಣೊ ವಾಟಿಸ್ಸೆ. ನಿನ್ನ ಸರೀಳ ಟೆಸ್ಟು ಮಾಡಿದ್ರೆ ...ಬದೋರ ದೇಹ ಏನಾಯ್ತದೆ ಅಂತ್ನಾರು ಗೊತ್ತಾಯ್ತದೆ."

"ಆದಿರ್ಲಿ. ಪೇಜಾವರನಿಗೆ ನಂದೊಂದು ಸಜೇಶನ್ನು ಕಣೊ ಉಗ್ರಿ."

"ಏನೋ ಅದು?"

"ಹಿಂದೂ ಧರಮ ಒಂದಾಗಿರಬೇಕು, ವಗ್ಗಟ್ಟಾಗಿರಬೇಕು ಅಂತ ...ಗಳತಿಯಲ್ಲಾ? ಮದ್ಲು ಹಿಂದೂ ಧರಮಕ್ಕೊಂದು ಮಶಾಣ ಮಂಜೂರು ...ಡಿಸಿಕೊ ಎಡೂರಪ್ಪನಿಗೇಳಿ. ಆನಂತರ ಸತ್ತ ಯಲ್ಲಾ ಜಾತಿ ಜನ ಸತ್ತ ...ಲಾದ್ರು ಒಂದು ಜಾಗದಲ್ಲಿ ಮಲಗೊ ಯವಸ್ತೆ ಮಾಡು. ಕ್ರಾಂತಿ ...ಂದ್ಲೆ ಸುರುವಾಯ್ತದೆ ಅಂತವ."

"ಪಾಪ, ಅವ್ರುನೇನೊ ಸುಳ್ಳ ಪಳ್ಳ ಹೇಳಿಕಂಡು ಕಾಲ ಹಾಕ್ತ ಅವ್ರುನೆ. ...ನು ನಿನ್ನ ಮಾತ ಕೇಳ್ತನೇನೋ?"

"?!"

'ಅವರೇನು ಬೆಳೆ ಬೆಳೀತಾರೋ ದುಡ್ಡಿನ ಗಿಡ ಬೆಳೀತಾರೋ' ಅಂತ ...ದೆ.

ದನಿ ಮತ್ತೆ ಬರಲಿಲ್ಲ.

ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆ ಭ್ರಷ್ಟಾಚಾರದಲ್ಲಿ ಭಾರತಕ್ಕೆ ನಾಲ್ಕನೆ ...ನೀಡಿರುವುದು ಇಂತಹ ಮಹಾನುಭಾವರುಗಳಿಗೆ ಮಾಡಿರುವ ಅಪಮಾನ! ...ದಲ ಸ್ಥಾನಕ್ಕೆ ಸುಸಂಸ್ಕೃತ ಭಾರತ ಅತ್ಯಂತ ಯೋಗ್ಯವಾದದ್ದು!

* * * * * * * * *

'ಭಾರತೀಯ ಜನತಾಪಕ್ಷಕ್ಕೆ ಅಭ್ಯರ್ಥಿಗಳ ಕೊರತೆ ಇಲ್ಲ' ಹಲ್ಮುಖಿ ...ರ ಘನವಾದ ಅಭಿಪ್ರಾಯ.

ನಿಜ. ಹೇಗಿದ್ದರೂ ಅವರದು ವರ್ತಕರ ಪಕ್ಷ. ಕೊರತೆ ಬಿದ್ದಾಗ ...ಡುಕೊಂಡು ಭರ್ತಿ ಮಾಡ್ತಾರೆ.

...ಶಾಸಕರ ಕೊರತೆ ಬಿತ್ತು,

ಖರೀದಿಸಿದರು!

...ಸ್ಥಳೀಯ ಸಂಸ್ಥೆಗಳಲ್ಲಿ ಭಾಜಪ ಸುಳಿವಿರಲಿಲ್ಲ,

ಸದಸ್ಯರನ್ನು ಖರೀದಿಸಿದರು!

ಈಗ ಅಭ್ಯರ್ಥಿಗಳ ಕೊರತೆ ಇದೆ.

ಅದನ್ನು ತುಂಬಿಸಿದ್ದಾರೆ, ಖರೀದಿಸಿ!

ಭಾಜಪ ಖರೀದಿ ಪಕ್ಷ ಅನ್ನುವುದು ಅರಿತಿದ್ದರೆ ಒಳಿತು.

ಇದನ್ನು ಅರಿತುಕೊಳ್ಳಲಾರದ ಕೆಲವರು ಹೀಯಾಳಿಸುತ್ತಾರೆ. ಇಂತಹವರೆಲ್ಲ ...ಖಿ ಗೌಡರಿಗೆ ಭಯೋತ್ಪಾದಕರಂತೆ ಗೋಚರಿಸುತ್ತಾರೆ. ಮದ್ದೂರಿನ ...ಎಂ. ಕೃಷ್ಣ ಭಾರತೀಯ ಸಂಸ್ಕೃತಿಯ ಪ್ರತಿರೂಪವಾದ ಭಾಜಪ ಅಧ್ಯಕ್ಷರಿಗೆ ...ತ್ಪಾದಕ ಕೃಷ್ಣ ಆಗಿ ಕಾಣಿಸಿಕೊಂಡಿರುವುದು ಹೀಗೆ!

...ವರದ್ದು ಹಿಂಗಾಯಿತು. ಇನ್ನು ಭಾರತೀಯ ಸಂಸ್ಕೃತಿ ಗುತ್ತಿಗೆ ...ಕೊಂಡಿರುವ ಭಾಜಪ ವಕ್ತಾರರ ಕಡೆ ನೋಡಿದರೆ... ಅವರಿಗೆ ಯಾಕೋ ...ಸ್ತ್ರೀ ವ್ಯಾಮೋಹ ಬಡಿದುಕೊಂಡಿರುವಂತಿದೆ. ಸನ್ಯಾಸ್ಯರು ತಮಗೆ ...ದ್ದ ಕೇಂದ್ರ ಹಣಕಾಸು ಇಲಾಖೆಯ ಉಪಮಂತ್ರಿ ಸ್ಥಾನವನ್ನು ...ಕೊಂಡದ್ದು ಇದೇ ಕಾರಣಕ್ಕಂತೆ. ಮುಂಬಯಿಯಲ್ಲಿ ಯಾವುದೋ ...ಸಹವಾಸ ಮಾಡಲು ಹೋಗಿ ರಾದ್ಧಾಂತವಾಗಿ ಮಂತ್ರಿ ಪದವಿ ...ಇದ್ದದ್ದು 'ವಾಸ್' ಆಯಿತಂತೆ! ಇಂತಹ ಪುಣ್ಯಕತೆಯ ನಾಯಕಮಣಿ ...ಕುಮಾರಸ್ವಾಮಿಯೀಗ 'ದ್ರೌಪದಿ' ಅಂದಿದ್ದಾರೆ! ಇವಕ್ಕೆ ಭಾರತೀಯ ...ಹಾಗಿರಲಿ ಪುರಾಣವೂ ಸರಿಯಾಗಿ ತಿಳಿದಿಲ್ಲ, ಪಾಂಡವರನ್ನು ...ದ್ದು, ಹೋರಾಡುವ ಕಿಚ್ಚನ್ನು ಹಚ್ಚಿದ್ದು ದ್ರೌಪದಿಯೇ!

ನಮ್ಮ ಮಾಸ್ತರ್ ನಂಬಿಯಾರ್

ಮರೆಯುವ ಮುನ್ನ



■ ಪಿ. ಲಂಕೇಶ್ ಮಾರ್ಚ್ 17, 1991

ನನಗೆ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಪ್ರೊ. ಒ.ಕೆ. ನಂಬಿಯಾರ್, 'ನಿಮ್ಮನ್ನು ನೋಡಬೇಕು. ಈ ಕಡೆ ಬನ್ನಿ' ಎಂದು ಕಳೆದ ಅನೇಕ ತಿಂಗಳಿಂದ ಹೇಳುತ್ತಿದ್ದರು. ನಮ್ಮ ಬಗ್ಗೆ ನಿಜಕ್ಕೂ ಹೆಮ್ಮೆ ಪಡುವವರು ನಮ್ಮನ್ನು ಹೆತ್ತವರು ಮತ್ತು ನಮಗೆ ಪಾಠ ಹೇಳಿದವರು. ನಂಬಿಯಾರ್ ಫೋನ್‌ನಲ್ಲಿ ಸ್ಪಷ್ಟವಾಗಿ, ಐವತ್ತು ವರ್ಷಗಳ ಹಿಂದಿನಂತೆಯೇ ಮಾತಾಡಿದ್ದು ಕೇಳಿ ಅಚ್ಚರಿಯಾಗಿತ್ತು. ಅವರಿಗೀಗ ಎಂಭತ್ತೆರಡು ವರ್ಷ. ಮೊನ್ನೆ ಅವರಿಗೆ ಫೋನ್ ಮಾಡಿ ನೋಡಲು ಹೋದೆ; ಮೂವರು ಗೆಳೆಯರು ಜೊತೆಗಿದ್ದರು.

ನಂಬಿಯಾರ್ ಅವರ ಸಹೋದ್ಯೋಗಿಗಳಾಗಿದ್ದ ಪ್ರೊ. ಸಿ.ಡಿ. ನರಸಿಂಹಯ್ಯ, ಶೇಷಗಿರಿರಾವ್, ಬಿ. ಚಂದ್ರಶೇಖರ್ ಮುಂತಾದವರಿಗೆ ಪ್ರಶಸ್ತಿ ಮನ್ನಣೆ ದೊರೆತಿವೆ. ಆದರೆ ನಂಬಿಯಾರ್ ಅವರಿಗೆ ಏನೂ ದೊರೆತಿಲ್ಲ, ಈ ಬಗ್ಗೆ ಅವರಲ್ಲಿ ಕಹಿ ಕೂಡ ಇಲ್ಲ, ಎಲ್ಲರ ಬಗ್ಗೆ ಕೇಳಿ ತಿಳಿದುಕೊಂಡರು; ತಾವೀಗ ಬರೆಯುತ್ತಿರುವ ಪುಸ್ತಕದ ಬಗ್ಗೆ ಮಾತಾಡಿದರು. ಬ್ರಾಹ್ಮಣೇತರ ಪ್ರಜ್ಞೆಯಲ್ಲಿ ಅವರಿಗೆ ವಿಶೇಷ ಆಸಕ್ತಿ. ಅವರ ರಾಜ್ಯವಾದ ಕೇರಳದಲ್ಲಿ ನಡೆದ ಪುರೋಹಿತಶಾಹಿ ವಿರುದ್ಧದ ಚಳವಳಿ, ಕುಮಾರ್ ಆಸನ್ ಮುಂತಾದವರು ಪ್ರತಿಭಾವಂತರಾಗಿ ಬೆಳೆದದ್ದು-ಎಲ್ಲವನ್ನೂ ಕುರಿತು ಮಾತಾಡಿದರು.


ಎಲ್ಲಕ್ಕಿಂತ ಮುಖ್ಯವಾದದ್ದು ನಂಬಿಯಾರ್ ಐವತ್ತು ವರ್ಷದ ಹಿಂದೆ, ಅವರು ತರುಣ ಅಧ್ಯಾಪಕರಾಗಿದ್ದಾಗ ದಲಿತ ವಿದ್ಯಾರ್ಥಿಗಳ ಹಾಸ್ಟೆಲ್ ನೋಡಿಕೊಂಡದ್ದು. ಆಗ ತಾನೇ ಹಳ್ಳಿಗಳಿಂದ ಹರಿಜನರ ಹುಡುಗರು ಶಿಕ್ಷಣಕ್ಕಾಗಿ ಪೇಟೆಗೆ ಬರತೊಡಗಿದ್ದರು. ಅವರಿಗೆ ನಿಲ್ಲಲು ನೆಲೆ ಇರಲಿಲ್ಲ. ಸುಮಾರು ಮೂವತ್ತು ಜನ ಹುಡುಗರಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಿಸೋಜಾ ಅವರಿಂದ ಅನುಮತಿ ಪಡೆದು, ಮನೆಗಾಗಿ ಹುಡುಕಿದರು. ಆಗ ದೆವ್ವದ ಮನೆ ಎಂದು ಎಲ್ಲರಿಂದ ತಿರಸ್ಕೃತವಾಗಿದ್ದ ಮನೆಯೊಂದನ್ನು ಮುನ್ನೂರು ರೂಪಾಯಿ ಬಾಡಿಗೆಗೆ ಪಡೆದರು. ಹುಡುಗರಿಗೆ ಸ್ನಾನ ಮಾಡಿಸಿ, ಬಟ್ಟೆ ತೊಡಿಸಿದರು. ಅವರಿಗೆ ಯಾವುದೇ ತೊಂದರೆ ಇಲ್ಲದೆ ಶಿಕ್ಷಣ ದೊರೆಯುವಂತೆ ಮಾಡಿದರು. ನಂಬಿಯಾರ್ ಹೇಳಿದರು: "ಅದು ನನ್ನ ಸಂತೋಷದ ನೆನಪು.... ಆಗ ಓದಿದ ನೂರಾರು ಜನ ಗಣ್ಯವ್ಯಕ್ತಿಗಳಾದರು. ಈಗ ನನಗೆ ನೆನಪಾಗುವಂತೆ, ಮಂತ್ರಿಗಳಾಗಿದ್ದ ಮಲ್ಲಿಕಾರ್ಜುನಸ್ವಾಮಿ ಮತ್ತು ಎನ್. ರಾಚಯ್ಯ ನಮ್ಮ ಹಾಸ್ಟೆಲ್‌ನಲ್ಲಿ ಇದ್ದವರು...."

ಕಾಲ ಹೇಗೆ ಉರುಳಿ ಹೋಗಿ ನಮ್ಮ ಕೃತಿಗಳ ಸ್ವಾರಸ್ಯವನ್ನು ಮಾತ್ರ ಮನಸ್ಸಿನಲ್ಲಿ ಬಿಡುತ್ತದೆ!



ಹುಟ್ಟು-ಸಾವು

ಹುಟ್ಟುಹಬ್ಬದಂದು ಏನು ಹೇಳಬೇಕು? ಹುಟ್ಟುಹಬ್ಬವನ್ನು ನೆನೆಸಿಕೊಳ್ಳುವುದೇ, ಬೇರೆಯವರಿಗೆ ನೆನಪಿಸುವುದೇ ಮುಜುಗರದ ಕೆಲಸ. ನನ್ನ 'ಟೀಕೆ-ಟಿಪ್ಪಣಿ' ಪುಸ್ತಕ ಬೈಂಡಿಂಗ್ ಆಗುತ್ತಿದೆ- ಅದನ್ನು ಔಪಚಾರಿಕವಾಗಿ ಬಿಡುಗಡೆ ಮಾಡಲು ಕೂಡ ಸಂಕೋಚ. ಆದರೆ ವರ್ಷಕ್ಕೊಮ್ಮೆ ಬರುವ ಈ ಹುಟ್ಟುಹಬ್ಬಕ್ಕೆ ಪತ್ರಿಕೆಯ ಹತ್ತೊಂಬತ್ತೂವರೆ ವರ್ಷದ ಬಾಳ್ವೆಯನ್ನು ಸೇರಿಸಿ, ಟೀಕೆ-ಟಿಪ್ಪಣಿಯ 'ಹಂಚಿಕೆ'ಯನ್ನು ಸೇರಿಸಿದೆವು. ಗೆಳೆಯರು, ಪರಿಚಿತರು ಬಂದರು. ಕೆ. ರಾಮದಾಸ್, ಶ್ರೀರಾಮ್, ಲಕ್ಷ್ಮೀಶ ಮುಂತಾದವರು ದೂರದೂರುಗಳಿಂದ ಬಂದರು. ಕೆಲವರು ಪದ್ಯ ಓದಿದರು; ಕೆಲವರು ಹಾಡಿದರು. ರಾಮದಾಸ್ ಮಾತಾಡಿದರು.



ಇಂಥ ಎಲ್ಲದರ ಹಿಂದೆ ನೋವು, ನಲಿವು, ವಿಷಾದವಿರುತ್ತದೆ. ಒಮ್ಮೆ ಗೆಳೆಯರೊಬ್ಬರ ಹುಟ್ಟುಹಬ್ಬದಲ್ಲಿ ಹೇಳಿದ್ದೆ (ಅವರಿಗೆ ಅರವತ್ತೈದು ವರ್ಷ).... "ವಯಸ್ಸು ಮಧ್ಯಾಹ್ನ ಮೀರಿದೊಡನೆ ಪ್ರತಿಯೊಂದು ಹುಟ್ಟುಹಬ್ಬವೂ ಸಂತೋಷ ಮತ್ತು ಸಂತಾಪಸೂಚಕ ಕೂಟಗಳಾಗುತ್ತವೆ. ಇನ್ನೂ ಬದುಕಬೇಕೆಂಬ ಹುಂಬ ಆಸೆಯುಳ್ಳವನು ಬರಲಿರುವ ಹುಟ್ಟುಹಬ್ಬವನ್ನು ಆದಷ್ಟೂ ಮರೆಯಲು ಯತ್ನಿಸುತ್ತಾನೆ."

ಈಗ ಅದಕ್ಕೆ ಸೇರಿಸಿದೆ, "ಬದುಕೆನ್ನುವುದು, ಕ್ರಿಯಾಶಾಲಿ ಬದುಕೆನ್ನುವುದು ಕನಸನ್ನುಳ್ಳ ನಿದ್ರೆ; ಕನಸುಗಳಿಲ್ಲದ ನಿದ್ರೆಯೇ ಸಾವು. ಕನಸು ಮತ್ತು ನೆನಪುಗಳು ನಮ್ಮ ವ್ಯಕ್ತಿತ್ವವನ್ನು ಸಮತೂಕಕ್ಕೆ ತರುತ್ತವೆ-ಹಾಗೆಯೇ ನಾವು ಸಾಹಿತಿಗಳಾಗಿದ್ದರೆ ಕನಸು ಮತ್ತು ನೆನಪು ಸಾಹಿತ್ಯಕ್ಕೆ ತೇಜಸ್ಸು ಮತ್ತು ಅರ್ಥ ತರುತ್ತವೆ. ಇದನ್ನೇ ನಾವು ವಾಸ್ತವ ಮತ್ತು ಕಲ್ಪನೆ ಅನ್ನುವುದು."

ಇಲ್ಲಿ ನೆನಪಾಗುತ್ತಿದೆ. ಫ್ಲೊಬೆ ಬರೆದ 'ಮದಾಂ ಬಾವರಿ' ಕಾದಂಬರಿಯ ಬಗ್ಗೆ ನೀವು ಕೇಳಿರಬಹುದು. ಸಾರ್ತರ್ ಅದು ವರದಿಯಂತಿದೆ ಎಂದು ಟೀಕಿಸುತ್ತಿದ್ದ; ಆದರೆ ಅದರ ನಿಜವಾದ ಚೈತನ್ಯ ಸಾರ್ತರ್‌ಗೆ ಗೊತ್ತಾಗುತ್ತಾ ಹೋಯಿತು. ಅದೊಂದು ವಾಸ್ತವವನ್ನು ಅವಲಂಬಿಸಿದ ಕಲ್ಪನೆಯ ಅದ್ಭುತ ಯಶಸ್ಸು ಎಂಬುದು ತಿಳಿಯುತ್ತಲೇ ಆ ಕಾದಂಬರಿಯನ್ನು ಪ್ರಶಂಸಿಸಿ ನೂರಾರು ಪುಟ ಬರೆದ.

ಕಲ್ಪನೆ, ಕನಸು... ಈ ಬದುಕಿನ ಕ್ಲಿಷ್ಟ ವಾಸ್ತವತೆಯಿಂದ ಹೊರಟರೆ ಚೆನ್ನ. ಇದನ್ನೆಲ್ಲ ನೆನಪಿಸುವುದೇ ಹುಟ್ಟುಹಬ್ಬ-ಮೈಲಿಗಲ್ಲು ಊರಿನ ದೂರದ ಬಗ್ಗೆ ಸೂಚಿಸುವಂತೆ.

ಪ್ರಕೃತಿ ಪುರುಷ

ನನ್ನ ಚೆಲುವನ
ಮುಖ ಕೆಂಪಾಗಿಯೇ
ದಿನ ಶುರುವಾಗುತ್ತದೆ.

ತಂಗಾಳಿಯಾಗಿ
ಮಂಜುಹನಿಯಾಗಿ
ಸೋನೆ ಮಳೆಯಾಗಿ
ಶಾಂತಗೊಳಿಸುತ್ತೇನೆ

ಏರುತ್ತಾ ಹೋದಂತೆ
ಉರಿಯುತ್ತ ಸುಡುತ್ತಾನೆ
ರಣತಾಪ...

ತಣ್ಣೀರ ಚೆಲುವೆಯಾಗಿ
ಅರಳುವ ಹೂವಾಗಿ
ಎಳೆಯ ಚಿಗುರಾಗಿ
ಬಿಸಿಯ ತಣಿಸುತ್ತೇನೆ

ಮತ್ತಾವ ಸಿಟ್ಟಿಗೋ
ಧಡ್ಡನೆ ಕದವೆಳೆದು
ಕರಿಮುಸುಕೆಳೆದು
ಮಲಗಿಬಿಡುತ್ತಾನೆ...

ತಂಪಿನ ಇರುಳಾಗಿ
ಆವರಿಸುತ್ತೇನೆ

ಬಾಲಚಂದಿರನಾಗಿ
ಹೊಳೆಯುತ್ತಾನೆ
ಉನ್ಮತ್ತನಂತೆ
ಪ್ರೇಮಸುಧೆ ಹರಿಸಿ
ಮೂಲೆ ಮೂಲೆ ಮುಟ್ಟುತ್ತಾನೆ
ಸಾವಿರ ತಾರೆಗಳ
ಕಣ್ಣಲ್ಲಿ ಒಳಹೊಕ್ಕು
ಒಲವ ಕಾಪಿಡುತ್ತಾನೆ....


ಹೀಗೆ
ದಿನರಾತ್ರಿಗಳಲ್ಲಿ
ಏರುತ್ತಾ ಇಳಿಯುತ್ತ
ಉಕ್ಕುತ್ತ ಬರಿದಾಗುತ್ತ
ಬಿಸಿಯಾಗಿ ತಂಪಾಗುತ್ತ
ಕೊನರುತ್ತ ಕಮರುತ್ತ
ದಿನ-ಋತು-ವರ್ಷಗಳ
ಬದುಕೆಂಬ ಹೊಸಕಾವ್ಯ
ನಿತ್ಯ ಕಟ್ಟುತ್ತಲೇ ಇದ್ದೇವೆ


■ ಡಾ. ಅನುಪಮಾ ಎಚ್.ಎಸ್.



ಖುದ್ ಮರ್ನೆ ತಕ್ ಖುದಾ ನಹಿ ಮಿಲೇಗಾ!

ಆ ಮಾತು ಹೇಗೆ ಶುರುವಾಯಿತೋ ನೆನಪಿಲ್ಲ. ಕಳೆದ ಗುರುವಾರ ಗುಲ್ಬರ್ಗಾದಲ್ಲಿ ವಕೀಲ ಮಿತ್ರ ವಿಲಾಸ್ ಕುಮಾರ್ ಜೊತೆ ಮಾತಾಡುತ್ತಾ ಕುಳಿತಿದ್ದಾಗ ಮಾತಿನ ಜೋಶ್‌ನಲ್ಲಿ "ಖುದ್ ಮರ್ನೆ ತಕ್ ಖುದಾ ನಹಿ ಮಿಲೇಗಾ ಅಂದಹಾಗೆ" ಎಂದು ಯಾವುದೋ ವಿಚಾರ ಉಲ್ಲೇಖಿಸುತ್ತಾ ಹೇಳಿದರು. ಸ್ವತಃ ಸಾಯುವವರೆಗೂ ದೇವರು ಸಿಗಲ್ಲ ಅನ್ನೋ ಈ ಮಾತಿಗೆ






ಮಸೀದಿಯ ಒಳನೋಟ.... ಕೋಟೆಯಲ್ಲಿ ಕಂಡ ಫಿರಂಗಿ....

ತುಂಬಾನೇ ಅರ್ಥವಿದೆ. ಹಾಗಂತ ನಾವು ದೇವರನ್ನು ಹುಡುಕಿಕೊಂಡೇನು ಗುಲ್ಬರ್ಗಾ ತನಕ ಹೋಗಿರಲಿಲ್ಲ. ಖುದ್ದು ನ್ಯಾಯದೇವತೆಯೇ (ಕೋರ್ಟ್) ಪದೇಪದೇ ಬರಹೇಳಿದ್ದರಿಂದ ಮತ್ತು ಈ ಬಾರಿ ಹೋಗದಿದ್ದರೆ ಆ ನ್ಯಾಯ ದೇವತೆಯ ಬಂಟರೇ (ಪೊಲೀಸರು) ನಮ್ಮನ್ನು ಬೆಂಗಳೂರು ತನಕ ಬಂದು ಗುಲ್ಬರ್ಗಾಗೆ ಕರೆದೊಯ್ಯುವ ಛಾನ್ಸ್ ಇತ್ತಾದ್ದರಿಂದ ಈ ಗೊಡವೆ ಯಾಕೆಂದು ಲಂಕೇಶ್‌ನ ಪುಟ್ಟ ಟೀಂ ಮೊನ್ನೆ ಗುಲ್ಬರ್ಗಾಗೆ ಹೋಗಿದ್ದೆವು.

ಮಾನಹಾನಿ ಕೇಸೊಂದರ ವಿಚಾರ ಅದು. ಅದರಲ್ಲೇನೂ ಸ್ವಾರಸ್ಯವಿಲ್ಲ ಬಿಡಿ. ಆದರೆ ಈ ಬಾರಿಯ 48 ಗಂಟೆಗಳ ಗುಲ್ಬರ್ಗಾ ಪ್ರವಾಸದಲ್ಲಿ ಕೆಲವು ಅತ್ಯುತ್ತಮ ಸ್ನೇಹಿತರನ್ನು ನಾವು ಸಂಪಾದಿಸಿಕೊಂಡೆವು.



ಬಿಡಿ ಚಿತ್ರಗಳು

• ಈಶ

ಅವರು ವಿಲಾಸ್ ಕುಮಾರ್ ಹಾಗೂ ಶೌಕತ್... ಇವರಿಬ್ಬರೂ ಕಮ್ಯುನಿಸ್ಟರೆ. ಹಾಗೆ ನೋಡಿದರೆ ಕರ್ನಾಟಕದ ಬರಸೀಮೆಗಳಾದ ಬಳ್ಳಾರಿ, ರಾಯಚೂರು, ಬೀದರ್, ಗುಲ್ಬರ್ಗಾಗಳಿಂದ ಅನೇಕ ಕಮ್ಯುನಿಸ್ಟ್ ಮುಂದಾಳುಗಳು, **dedicated** ಕಾರ್ಯಕರ್ತರು ಬೆಳೆದು ಬಂದಿದ್ದಾರೆ. ಪಕ್ಕಾ ಕಮ್ಯುನಿಸ್ಟ್ ಅಲ್ಲದೇ ಹೋದರೂ ಎಸ್.ಕೆ. ಕಾಂತಾ ತರದ ಜನನಾಯಕರು ಸದಾ ಬಡಜನರ, ನೊಂದವರ ಪರ ಇರುತ್ತಾ ಕಾಯಂ ಶಾಸಕರಂತಿದ್ದಾರೆ. ವಿಲಾಸ್ ಹಾಗೂ ಶೌಕತ್ ಇದೇ ಬಳಗಕ್ಕೆ ಸೇರಿದವರು. ಕೋರ್ಟ್ ಕೆಲಸ ಮುಗಿಯುವವರೆಗೂ ನಮ್ಮೊಂದಿಗಿರುತ್ತಾ ಹಸಿವು ಅನ್ನೋದು ಅನುಭವಕ್ಕೇ ಬರದಂತೆ ಮನೆಗೇ ಕರೆದೊಯ್ದು ಊಟ ತಿಂಡಿ ಮಾಡಿಸಿ ವಿಶ್ವಾಸ ತೋರಿದ ವಿಲಾಸ್-ಮಂಜುಳಾ ದಂಪತಿಗಳ ನಗುಮುಖವನ್ನು ನಾವು ಬಹಳ ಕಾಲ ಮರೆಯುವ ಹಾಗಿಲ್ಲ.



ಶೌಕತ್ ಮತ್ತು ವಿಲಾಸ್‌ಕುಮಾರ್

ಇಂತದ್ದೇ ಒಂದು **chit chat** ನಲ್ಲಿ ದೇವರ ಸುದ್ದಿ ಬಂತು. ನಮ್ಮಂತವರಿಗೆ ಈಗ ಅಷ್ಟೇನು ಅಗತ್ಯವಿರದ ಈ 'ದೇವರು' ಎಂಬುವರು ನಮ್ಮದೇ ಮನೆಗಳಲ್ಲಿನ ಪುಟ್ಟ ಮಕ್ಕಳೆದಿರು ಆಗಾಗ್ಗೆ ಸುಳಿದಾಡುತ್ತಿರುವುದುಂಟು. ಎಂಥ ನಾಸ್ತಿಕರ ಎಳೆಮಕ್ಕಳು ಒಂದಲ್ಲಾ ಒಂದು ಬಾರಿ "ದೇವರು ಅಂದ್ರೆ ಏನು?" ಅಂತ ಕೇಳಿರುತ್ತಾರೆ. ಗಣಪನ ಮೂರ್ತಿಯೇ ಅವರ ಆಟದ ವಸ್ತುವಾಗಿಬಿಡುತ್ತದೆ. ಆಯುಧ ಪೂಜೆಯ ದಿನ ಅವರ ಮೂರು ಚಕ್ರದ ಪುಟ್ಟ ಸೈಕಲ್‌ಗೆ ಅಲಂಕಾರವಾಗಿರುತ್ತದೆ. ಆದರೆ ಬೆಳೆದು ದೊಡ್ಡವರಾದವರ ದೇವರೇ ಬೇರೆ ತಾನೆ. ಅಂತವರೂ ಸ್ವತ ದೇವರನ್ನು ಹುಡುಕುವುದು ವ್ಯರ್ಥ ಎನ್ನುತ್ತಾ ವಿಲಾಸ್ ಹೇಳಿದ್ದು "ಖುದ್ ಮರ್ನೆ ತಕ್ ಖುದಾ ನಹಿ ಮಿಲೇಗಾ" ಎಂದು!

ಬದುಕಿರುವವರೆಗೂ ದೇವರು ಕಾಣಸಿಗಲ್ಲ, ಸತ್ತಮೇಲೆ ಸಿಕ್ಕಿದನಾ.... ಅದು ಬದುಕುಳಿದವರಿಗೆ ಗೊತ್ತಾಗಲ್ಲ. ಅಕಸ್ಮಾತ್ ನಾವೇ ಸತ್ತ ಮೇಲೆ ನರಕಕ್ಕೆ ಹೋಗುವ ರಸ್ತೆಯಲ್ಲಿ ಒಂದು ವೇಳೆ ಸಿಕ್ಕರೂ ಇತ್ತ ಈ ಬೃಹತ್ ಭೂಮಂಡಲದ ಮೂಲೆಯ ಕರ್ನಾಟ ದೇಶಬಾಂಧವರಿಗೆ ಮೆಸೇಜು ಕೊಡಲೂ ಬರುವುದಿಲ್ಲ....!

ಇದೆಂಥ **mystery of god** ನೋಡಿ. ದೇವರು... ಇವರ ಬಗ್ಗೆ ನಾನು ಇದುವರೆಗೂ ಕೇಳಿರುವ, ಓದಿರುವ ಪೈಕಿ ವಿಲಾಸರ ಮಾತೇ **best.**

ಇನ್ನೊಂದೆಡೆ, 'ಖುದ್ ಹಾಜರ್ ಹೋನೆ ತಕ್ ಬೆಲ್ ನಹಿ ಮಿಲೇಗಾ' ಎಂಬ ಕಾರಣಕ್ಕೆ ನಾವು ನ್ಯಾಯ ದೇವತೆಯ ಮಂದಿರಕ್ಕೆ ಹೋದೆವು. ಅಲ್ಲಿನ ವಿಧಿವಿಧಾನಗಳು ಮುಗಿದ ಕೂಡಲೇ ನಾನು ಸಹೋದ್ಯೋಗಿ ಗೆಳೆಯ ವಿಶ್ವಾರಾಧ್ಯ ಸತ್ಯಂಪೇಟೆಯನ್ನು ಕರೆದುಕೊಂಡು ಆದಿಲ್‌ಶಾಹಿಗಳ ಗುಲ್ಬರ್ಗಾ ಕೋಟೆ ನೋಡಲು ಓಡಿಹೋದೆ.

ಅದೊಂದು ಬೆರಗಾಗಿಸುವ ಅನುಭವ. ಐದು ನೂರು ವರ್ಷಗಳಿಗೂ ಹಿಂದಿನ ಈ ಬೃಹತ್ ಕಲ್ಲಿನ ಕೋಟೆ ಈಗಲೂ ಗಟ್ಟಿಮುಟ್ಟಾಗಿದೆ. ಜನರ ಎಲ್ಲಾ ದೌರ್ಜನ್ಯ, ಸರ್ಕಾರಗಳ ನಿರ್ಲಕ್ಷ್ಯ ಸಹಿಸಿಕೊಂಡೇ ಗಾಯಗೊಂಡ ಯೋಧನಂತೆ ಧೀರೋದ್ದಾತ್ತವಾಗಿ ತಲೆ ಎತ್ತಿ ನಿಂತಿದೆ. ಈ ಕೋಟೆಯ ಒಳಗಡೆ ಇಪ್ಪತ್ತನಾಲ್ಕಡಿಯಷ್ಟು ಬೃಹತ್ ಗಾತ್ರದ ಯುದ್ಧ ಫಿರಂಗಿ **(canon)** ಒಂದಿದೆ. ಯಾವ ದಿಕ್ಕಿಗೆ ಬೇಕಾದರೂ ತಿರುಗಿಸಿ ಸಿಡಿಗುಂಡು ಹಾರಿಸುವ ಒಂದು ತಿರುಗಣೆ **(revolving)** ವ್ಯವಸ್ಥೆಯನ್ನು ಆ ಫಿರಂಗಿಗೆ ಅಳವಡಿಸಲಾಗಿತ್ತು. ಫಿರಂಗಿ ಎಂಬ ಒಂದು ಯುದ್ಧಾಸ್ತ್ರವನ್ನು ಭಾರತಕ್ಕೆ ಪರಿಚಯಿಸಿದವನೇ ಬಾಬರ್ ಎಂಬುದು ನಿಮಗೆ ನೆನಪಿರಬಹುದು. ಈ ಆದಿಲ್‌ಶಾಹಿಗಳು ಅದನ್ನು ಇನ್ನಷ್ಟು ಬೆಳೆಸಿದ್ದರು. ಅದೇ ಕೋಟೆಯೊಳಗಡೆ 14ನೇ ಶತಮಾನದಲ್ಲಿ ಕಟ್ಟಿರುವ ಬೃಹತ್ ಮಸೀದಿಯೊಂದಿದೆ. ಪ್ಯಾಲಿಸ್ತೀನ್, ಮದೀನಾದ ಕಾಬಾ ಹಾಗೂ ಸ್ಪೇನಿನ ಕೊರ್ಡೋಬ ಮಸೀದಿಗಳ ವಿನ್ಯಾಸಗಳನ್ನು ಬೆಸೆದು ಆದಿಲ್‌ಶಾಹಿ ದೊರೆ ಹಸನ್ ಗಂಗು ಕಟ್ಟಿಸಿರುವ ಈ ಮಸೀದಿಯೊಳಗಿನ ದೃಶ್ಯವೈಭವ ಅದ್ಭುತ. ಹೀಗೆ ಚರಿತ್ರೆಯ ಜಾಗ ಹುಡುಕಿ ಅಲೆದಾಡುವುದು, ಆಗಿಹೋಗಿರಬಹುದಾದ ಘಟನೆಗಳನ್ನು ಓದಿ, ಕೇಳಿ, ನೋಡಿ ಬರುವುದೇ ಒಂದು ರೋಮಾಂಚಕಾರಿ ಅನುಭವ.

ಅದೇ ದಿನ ನಾವು ಖರ್ಗೆ ಮತ್ತವರ ಬಳಗ ನಿರ್ಮಿಸುತ್ತಿರುವ ಬುದ್ಧ ಮಂದಿರ ನೋಡಲು ಹೋದೆವು. ಗುಲ್ಬರ್ಗಾ ಯೂನಿವರ್ಸಿಟಿ ಹತ್ತಿರವಿರುವ ಈ ಜಾಗದಲ್ಲಿ ಅಷ್ಟೇನೂ ಉತ್ತಮ ಅಭಿರುಚಿಯಿರದ ಬುದ್ಧ ಮಂದಿರ ಮತ್ತು ಅಚ್ಚುಕಟ್ಟಾದ ಉದ್ಯಾನವಿದೆ **Dalit pride** ಅನ್ನು ಬಿಂಬಿಸುವ ಅಂಬೇಡ್ಕರ್ ಮತ್ತಿತರರ ಬೌದ್ಧ ಅನುಯಾಯಿಗಳ ಶಿಲಾಪ್ರತಿಮೆಗಳಿವೆ.

ಸ್ವತಃ ಸಾಯುವವರೆಗೂ ದೇವರು ಎಂಬುವವರು ಸಿಗದಿದ್ದರೂ ಪರವಾಗಿಲ್ಲ. ಆದರೆ ದೇವರನ್ನು ಹುಡುಕುತ್ತಿರುವ ಮನುಷ್ಯ ಪ್ರಯತ್ನಗಳಂತೂ ಎಲ್ಲೆಡೆ ಕಾಣಸಿಗುತ್ತವೆ. ಬದುಕಿರುವಾಗಲೇ ಈ ತರದ ದೇವಮಂದಿರಗಳನ್ನು, ದೇವರನ್ನು ಕುರಿತು ಧ್ಯಾನಿಸುವ ಸ್ಥಳಗಳನ್ನು ನೋಡಿ ಬರುವುದರಲ್ಲೇ ಒಂಥರಾ ಆನಂದವಿದೆ. ಅಂತಲ್ಲಿ ನಮ್ಮಂತವರಿಗೆ ದೇವರು ಸಿಗದಿದ್ದರೂ ಕೂಡಾ....



ಅಂಬೇಡ್ಕರ್ ಮತ್ತಿತರರ ಬೌದ್ಧ ಅನುಯಾಯಿಗಳ ಪ್ರತಿಮೆಗಳು

ಭಯೋತ್ಪಾದನೆಯನ್ನು ಸೃಷ್ಟಿಸಿದ ಭ್ರಷ್ಟ ರಾಜಕೀಯ ವ್ಯವಸ್ಥೆಗೆ ಧಿಕ್ಕಾರವಿರಲಿ...


ಮುಂಬೈಯಲ್ಲಿ ನವೆಂಬರ್ 23ರಂದು ನಡೆದ ಭಯೋತ್ಪಾದಕರ ಹೇಯ ಕೃತ್ಯಕ್ಕೆ ಛತ್ರಪತಿ ಶಿವಾಜಿ ಟರ್ಮಿನಸ್‌ನಲ್ಲಿ ಬಲಿಯಾದವರ ಪೈಕಿ 14 ಶವಗಳನ್ನು ಇನ್ನೂ ಗುರುತಿಸಲಾಗಿಲ್ಲವೆಂಬುದು ಈ ದೇಶದ ಮತ್ತೊಂದು ದುರಂತ. ಇದನ್ನು 'ಲಂಕೇಶ್' ನೀಡಿದ 'ಅನಾಥದೇಶ' ಎಂಬ ತಲೆಬರಹ ಸೂಕ್ತವಾಗಿತ್ತು.



ಮುಂಬೈ ಮೇಲಿನ ದಾಳಿಯ ಸಂದರ್ಭದಲ್ಲಿ ಟಿವಿ ವಾಹಿನಿಗಳು ರೋಚಕ ಸುದ್ದಿ ಬಿತ್ತರಿಸುವ ತವಕದಲ್ಲಿ ನಡೆದುಕೊಂಡ ರೀತಿಯಂತೂ 'ಛೀ..' ಅನ್ನಿಸುವಂತಿತ್ತು. ಈ ವಾಹಿನಿಗಳಿಗೆ ಎಷ್ಟು ಜನ ಸತ್ತರು, ಸಾಯುತ್ತಿದ್ದಾರೆ; ಎಲ್ಲೆಲ್ಲಿ ದಾಳಿ ನಡೆಯುತ್ತಿದೆ ಎನ್ನುವುದಕ್ಕಿಂತಲೂ ಅವುಗಳ ಕಾತರ ಬೇರೆಯದೇ ಆಗಿತ್ತು ಅನ್ನಿಸುತ್ತದೆ. ಅಮೆರಿಕದ ಅವಳಿ ಗೋಪುರಗಳು (9/11) ನೆಲಕ್ಕುರುಳಿದಂತೆ ತಾಜ್ ಎಷ್ಟೊತ್ತಿಗೆ ಸ್ಫೋಟಗೊಂಡು ನೆಲಕ್ಕುರುಳಬಹುದು ಎಂದು ಆ ವಾಹಿನಿಗಳು ಕಾದಿದ್ದವೇನೋ! ಭಯೋತ್ಪಾದಕರು ಸತ್ತು ಕಮಾಂಡೋಗಳು ತಮ್ಮ ಕಾರ್ಯಾಚರಣೆ ಮುಗಿಸಿದಾಗ ಆ ಶ್ರೀಮಂತ ಹೋಟೆಲ್‌ಅನ್ನು ಭಯೋತ್ಪಾದಕರು ಸ್ಫೋಟಗೊಳಿಸದಿರುವುದಕ್ಕೆ ಟಿವಿ ಚಾನೆಲ್‌ಗಳಿಗೆ ನಿರಾಸೆಯಾಗಿರಬಹುದು. ಕನ್ನಡದ ವಾಹಿನಿಯೊಂದು ಈ ಸುಳಿವನ್ನೂ ನೀಡಿತ್ತು. ಕಾರ್ಯಾಚರಣೆ ಮುಗಿಯುತ್ತಿರುವಂತೆ ಕಡಿಮೆಯಾದ ಗುಂಡಿನ ಚಕಮಕಿಯನ್ನು ವಿಶ್ಲೇಷಿಸುತ್ತಾ ಅದರ ಪ್ರತಿನಿಧಿ "ಬಿರುಗಾಳಿ ಬೀಸುವುದಕ್ಕೆ ಮುಂಚಿನ ಶಾಂತತೆ ತಾಜ್‌ನಲ್ಲಿ ಆವರಿಸಿದೆ" ಎಂದೂ ಹೇಳಿದ್ದ. ಹೇಗಿದೆ ನೋಡಿ ಇವರ ಕಾತರ?

ಅಂತೂ ಇಡೀ ಘಟನೆ ಭೀಕರ ಅಂತ್ಯವನ್ನು ಕಂಡು ನೂರಾರು ಅಮಾಯಕ ಜನರು ಮಡಿದರು. ಆದರೂ ಟಿವಿ ವಾಹಿನಿಗಳ ಎಕ್ಸ್‌ಕ್ಲೂಸಿವ್ ನ್ಯೂಸ್ ಮಾತ್ರ ಶ್ರೀಮಂತ ತಾಜ್‌ನ ಇಂಟೀರಿಯರ್ ಡಿಸೈನ್ ಹಾಳಾಗಿರುವುದರ ಬಗ್ಗೆ, ಅದರ ದುರಸ್ತಿಗೆ ತಗಲುವ ವೆಚ್ಚದ ಬಗ್ಗೆ ಮಡಿದ ಶ್ರೀಮಂತರ ಬಗ್ಗೆಯೇ ನಡೆದಿತ್ತು.

ಈ ವಾಹಿನಿಗಳು ಆಮೇಲಾದರೂ ಎಚ್ಚೆತ್ತುಕೊಂಡು ಇದೇ ಭಯೋತ್ಪಾದಕ ದಾಳಿ (29/11)ಯಲ್ಲಿ ಮಡಿದ, ದುಡಿಮೆಗೆಂದು ತೆರಳಿ ಸಾವಿನ ದವಡೆಯನ್ನು ಸೇರಿದ ಬಡವರ ಶವಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದು ಬಿತ್ತರಿಸಿದ್ದರೆ, ಭಾರತದ ಮೂಲೆಮೂಲೆಯಲ್ಲೆಲ್ಲೋ ಆತಂಕದಿಂದ ಕಾಯುತ್ತಿದ್ದ ಜೀವಗಳು ಗುರುತಿಸುತ್ತಿದ್ದವೇನೋ? ಮೇಲುವರ್ಗದ ಪರವಿರುವ, ಬಂಡವಾಳಶಾಹಿಗಳ ಮತ್ತು ಮತಾಂಧರ ಹಿಡಿತದಲ್ಲಿರುವ ಈ ವಾಹಿನಿಗಳು ಸರಕಾರದ ವ್ಯವಸ್ಥೆಯೊಂದು ಸಕ್ರಿಯವಾಗುವ ಮೊದಲೇ ತನಿಖೆ(?)ಯನ್ನು ಕೈಗೊಂಡು ಇಲ್ಲಸಲ್ಲದ್ದನ್ನು ಹುಟ್ಟಿಸಿ ಜನರನ್ನು ದಿಕ್ಕುತಪ್ಪಿಸುತ್ತಾ ನಡೆದಿವೆ. ಇತ್ತ ಮುಂಬೈ ಆಸ್ಪತ್ರೆಯಲ್ಲಿ ಶವಗಳೂ ಕೊಳೆಯುತ್ತಿವೆ.



ಬಡವರ, ದುಡಿಯುವ ವರ್ಗದವರ ಬಗ್ಗೆ ನಿರ್ಲಕ್ಷ್ಯ ತಾಳುವ, ಸದಾಕಾಲ ತಳುಕಿನ ಲೋಕವನ್ನೇ ತೋರಿಸುತ್ತಾ, ಅಸಭ್ಯತನವನ್ನೂ ಮನರಂಜನೆಯೆಂದುಕೊಳ್ಳುವ, ಸದಾಕಾಲಕ್ಕೂ ಬ್ರೇಕಿಂಗ್ ನ್ಯೂಸ್‌ಗಾಗಿಯೇ ಹಪಹಪಿಸುವ, ಶ್ರೀಮಂತರ ಮನೆಯ ಕೌಟುಂಬಿಕ ಕಲಹಗಳನ್ನು ಧಾರಾವಾಹಿಗಳಾಗಿ ಬಿತ್ತರಿಸಿ ಬಡವರನ್ನು ಭ್ರಮೆಗೊಳಿಸುವ ಈ ಟಿವಿ ವಾಹಿನಿಗಳ ಕಾಳಜಿಗೆ ಧಿಕ್ಕಾರವಿರಲಿ. ಬದುಕನ್ನು ಅರಸಿ ಮುಂಬಯಿ ಮಹಾನಗರಿ ಸೇರಿ ಹಗಲಿರುಳು ದುಡಿಯುತ್ತಾ ಬಡಸಂಸಾರಗಳ ನೊಗವನ್ನು ಹೆಗಲಿಗೇರಿಸಿಕೊಂಡು ಸಾಗಿದವರನ್ನು ಸಾವಿನ ಮನೆಗೆ ನೂಕಿದ ಭಯೋತ್ಪಾದಕರಿಗೆ ಧಿಕ್ಕಾರವಿರಲಿ, ಭಯೋತ್ಪಾದನೆಗೆ ಧಿಕ್ಕಾರವಿರಲಿ, ಭಯೋತ್ಪಾದನೆಯನ್ನು ಸೃಷ್ಟಿಸಿದ ಈ ಭ್ರಷ್ಟ ರಾಜಕೀಯ ವ್ಯವಸ್ಥೆಗೆ ಧಿಕ್ಕಾರವಿರಲಿ...

-ಸಂತೋಷ್ ಗುದ್ದಿಯಂಗಡಿ, ಕುಂದಾಪುರ

ಡಿಸೆಂಬರ್ 10 ಗೌರಿ ಲಂಕೇಶ್'ಪತ್ರಿಕೆಯ 2ನೇ ಪುಟದಲ್ಲಿ ಪ್ರಕಟವಾದ ಮಾಧ್ಯಮಗಳ ಪಕ್ಷಪಾತ ಕುರಿತ ವರದಿ ಓದಿದಾಗ ನನ್ನಲ್ಲಿ ಮೂಡಿದ ಅಭಿಪ್ರಾಯ.

ಈ ದೇಶದ ಸಮಾನತೆ-ಸಮತಾವಾದದಲ್ಲಿ ಒಳಗೊಂಡ ಸರ್ವೇಸಾಮಾನ್ಯ ನೀತಿಯೇ ಇದು. ಇಲ್ಲಿ ಟಾಟಾ, ಬಿರ್ಲಾಗಳಿಗೂ ಒಂದೇ ಓಟು, ಕಲ್ಲು ಕೊರೆಯುವ ಮರಿಸ್ವಾಮಿಗೂ ಒಂದೇ ಓಟು. ಆದರೆ ಪ್ರತಿಬಾರಿ ಚುನಾವಣೆ ನಡೆದಾಗ ಗೆಲ್ಲುವುದು ಟಾಟಾ ಬಿರ್ಲಾಗಳೇ. ಮರಿಸ್ವಾಮಿ ಸದಾ ಸೋಲುತ್ತಾನೆ. ಯಾಕೆ ಹೇಳಿ?

ಮೊನ್ನೆ ಮುಂಬೈಯಲ್ಲೂ ಉಗ್ರರ ದಾಳಿ ನಡೆದಾಗ ಪತ್ರಿಕೆಗಳಿಂದಾಗಲೀ, ಟಿವಿ ಮಾಧ್ಯಮಗಳಿಂದಾಗಲೀ ಮುಂಬೈಯ ಜೀವನಾಡಿಯಾಗಿದ್ದ ಶಿವಾಜಿ ಟರ್ಮಿನಸ್‌ನಲ್ಲಾದ ಅನಾಹುತದ ಬಗ್ಗೆ ಯಾವ ಮಾಹಿತಿಯೂ ಲಭ್ಯವಿರಲಿಲ್ಲ. 'ಲಂಕೇಶ್' ಮಾತ್ರ ಇದನ್ನು ದಾಖಲಿಸಿ ಬರೆದಿದೆ. ಶಿವಾಜಿ ಟರ್ಮಿನಸ್‌ನಲ್ಲಾದ ಭೀಕರ ದುರಂತ ನಮಗೆಲ್ಲ ಗೊತ್ತಾದದ್ದೇ ಗೌರಿ ಲಂಕೇಶ್'ಮೂಲಕ. ಪತ್ರಿಕೆಗಳು ನೀಡಬೇಕಾದ ಮಾಹಿತಿ ಇದೇ. ಇದಕ್ಕಾಗಿ ನಿಮ್ಮ ಪತ್ರಿಕೆಗೆ ಮತ್ತು ಬಳಗಕ್ಕೆ ಅಭಿನಂದನೆ.

ಇಲ್ಲಿನ ನಿಜಾಂಶಗಳು ಮತ್ತು ಜೀವ ಹಾನಿಯಾಗುವಲ್ಲೂ ಬಡವಬಲ್ಲಿದ ಎನ್ನುವ ತಾರತಮ್ಯ ಎಲ್ಲ ದುರಂತಗಳ ಚಿತ್ರಣದಲ್ಲೂ ಇದ್ದೇ ಇದೆ. ಅಂದರೆ ಋಣಸಂದಾಯದ ಪತ್ರಕರ್ತರ ಮಾನಸಿಕ ಭೇದಭಾವವೇ ಇದಕ್ಕೆ ಕಾರಣ. ರಿಯಾಯತಿ ಕೋಟಾದಲ್ಲಿ ಸೈಟು ಪಡೆದವರು, ಮಂತ್ರಿಯೊಬ್ಬನ ಊಟದಲ್ಲಿರುವ ಖಾದ್ಯವನ್ನು ವೈಭವೀಕರಿಸಿ ಬರೆಯುತ್ತವೆ. ಬಡವನ ಒಂದು ಹೊತ್ತಿನ ಊಟದ ಸಮಸ್ಯೆ ಇವರ ಲೇಖನಿಗೆ ಜೀವ ತುಂಬುವುದೇ ಇಲ್ಲ.


ಅಂಬಾನಿ-ಟಾಟಾ ವಲಯದ ಶ್ರೀಮಂತರು ಬಾತ್‌ರೂಮ್‌ನಲ್ಲಿ ಕಾಲುಜಾರಿ ಬಿದ್ದರೂ ಆಗುವ ಘನಘೋರ ಸುದ್ದಿ - ಶಿವಾಜಿ ಟರ್ಮಿನಸ್‌ನ ಸಾಮಾನ್ಯರ ಸಾವು-ನೋವು ಹೇಗೆ ಸುದ್ದಿಯಾಗಲು ಸಾಧ್ಯ?

ಇಲ್ಲಿ ಶ್ರೀಸಾಮಾನ್ಯನ ಜೀವ ಮತ್ತು ಶ್ರೀಮಂತನ ಜೀವವನ್ನುಳಿಸಿಕೊಂಡಿರುವ ಉಸಿರು ಯಾವಾಗ ಪುರಸ್ಕಾರ-ತಿರಸ್ಕಾರವಾಗುವುದು ನಿಂತು ಸಮಾನವಾಗುತ್ತದೋ? ಅವಾಗಲೇ ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬುವುದು ಮತ್ತು ಆತಂಕಗಳು ಕೊನೆಯಾಗುವುದು.


-ಕೆ.ಜಿ.ಶೆಟ್ಟಿ, ಕದಂದಲೆ

ಸದ್ದಿಲ್ಲದೇ ನಡೆಯುತ್ತಿರುವ ಮುಹೂರ್ತಗಳು

ಸದ್ದಿಲ್ಲದೇ, ಸದಗರವಿಲ್ಲದೇ ಚಿತ್ರ ಆರಂಭಿಸುವುದು ಕೂಡಾ ಒಂದು ಫ್ಯಾಷನ್ ಆಗಿದೆ. ನಿನ್ನೆ ಕೆ. ಮಂಜು ನಿರ್ಮಾಣದ 'ನಾನೇ ಬೇರೆ ನನ್ನ ಸ್ಟೈಲೇ ಬೇರೆ' ಚಿತ್ರದ ಮುಹೂರ್ತ ಸದ್ದುಗದ್ದಲವಿಲ್ಲದೇ ನಡೆದುಹೋಯಿತು. ಸಿಹಿಕಹಿ ಚಂದ್ರು ಬದಲಿಗೆ ಈ ಚಿತ್ರವನ್ನೀಗ ದಿನೇಶ್ ಬಾಬು ನಿರ್ದೇಶಿಸುತ್ತಿರುವುದು ಮಾತ್ರ ಒಂದು ಬದಲಾವಣೆ.



ಇನ್ನೊಂದೆಡೆ ಪೂಜಾ ಗಾಂಧಿ ಮತ್ತು ಬಾಲಾಜಿ ಜೋಡಿಯ 'ಇನಿಯ' ಚಿತ್ರ ಕೂಡಾ ಸೈಲೆಂಟಾಗಿ ಸೆಟ್ಟೇರಿದೆ. ಈ ಚಿತ್ರದ ನಿರ್ಮಾಪಕರು ಶೈಲೇಂದ್ರ ಬಾಬು. ಅದ್ದೂರಿತನಕ್ಕೆ ಈ ಬಾಬು ಹೆಸರಾದರೂ ಯಾಕೋ ಮುಹೂರ್ತ ಮಾತ್ರ ಸಿಂಪಲ್ ಆಗಿ ಮಾಡಿದ್ದಾರೆ.



ಈ ಮಧ್ಯೆ ಯಾವಾಗಲೂ ಪತ್ರಕರ್ತರನ್ನು ಕರೆಸಿ ಅವರ ಸಮ್ಮುಖದಲ್ಲೇ ವಿಜೃಂಭಣೆಯಿಂದ ಮುಹೂರ್ತ ಮಾಡುವ ದರ್ಶನ್ ಕೂಡಾ ತನ್ನ 'ಅಭಯ್' ಚಿತ್ರದ ಮುಹೂರ್ತವನ್ನು ಅತ್ಯಂತ ಗುಪ್ತವಾಗಿ ನೆರವೇರಿಸಿದ್ದಾರೆ. ಮಹೇಶ್ ಬಾಬು ಎಂದಿನಂತೆ ಜನಾರ್ಧನ ಮಹರ್ಷಿಯ ಕಥೆಯನ್ನು ದರ್ಶನ್‌ಗಾಗಿ ಇಲ್ಲಿ ತಂದಿದ್ದಾರೆ.




'ಗರಗಸ' ಚಿತ್ರದಿಂದ ಹೀರೋ ಪಟ್ಟವನ್ನು ಗಳಿಸಿರುವ ಕೋಮಲ್ ನಾಯಕನಾಗಿ ನಟಿಸುತ್ತಿರುವ 'ಚೆಲುವರಾಯ ಸ್ವಾಮಿ ಸ್ಪೆಷಲ್ ಮಣ್ಣಿನ ಮಗ' ಚಿತ್ರದ ಮುಹೂರ್ತವೂ ಮೊನ್ನೆ ಬಹಳ ಸಿಂಪಲ್ ಆಗಿ ಮನೆಮುಂದಿಯ ಸಮ್ಮುಖದಲ್ಲಿ ನಡೆಯಿತು. ಈ ಚಿತ್ರವನ್ನು ಅವರ ಭಾವ ಶ್ರೀನಿವಾಸ್ ನಿರ್ಮಿಸುತ್ತಿದ್ದಾರೆ. ಹಿಂದೆ ಜಗ್ಗೇಶ್ ನಾಯಕನಾಗಿ ಚಿತ್ರರಂಗಕ್ಕೆ ಕಾಲಿಟ್ಟಾಗ ಇದೇ ರೀತಿ ಭಾವ ಶ್ರೀನಿವಾಸ್ ಚಿತ್ರ ಮಾಡಿ ಬೆಂಬಲಿಸಿದ್ದರು.

ಈ ರೀತಿ ಸೈಲೆಂಟಾಗಿ ಸದ್ದುಗದ್ದಲವಿಲ್ಲದೆ ಮುಹೂರ್ತ ಮಾಡುವ ಟ್ರೆಂಡ್‌ಅನ್ನು ಆರಂಭಿಸಿದ್ದು ಧೀರ ರಾಕ್‌ಲೈನ್ ವೆಂಕಟೇಶ್. ಅದಕ್ಕಿಂತ ಮೊದಲು ರಾಜ್‌ಕುಮಾರ್ ಸಂಸ್ಥೆಯವರು ಇದೇ ರೀತಿ ಬಹಳ ಸರಳವಾಗಿ ಮುಹೂರ್ತವನ್ನು ಮಾಡುತ್ತಿದ್ದರು.

ಈ ಮಧ್ಯೆ ಯಾವಾಗಲೂ ಶೋಮ್ಯಾನ್ ಥರ ಕಾಣಿಸುವ ನಿರ್ಮಾಪಕ ಎಸ್.ಎಂ. ಸುರೇಶ್ ತನ್ನ ಅತ್ಯಂತ ಅದ್ದೂರಿಯ 'ಚೆಲುವೆಯೇ ನಿನ್ನ ನೋಡಲು' ಚಿತ್ರದ ಮುಹೂರ್ತವನ್ನು ತನ್ನದೇ ಶೈಲಿಯಲ್ಲಿ ವಿಜೃಂಭಣೆಯಿಂದ ನಡೆಸಿದ್ದಾರೆ. ಈ ಚಿತ್ರವನ್ನು ಝೀ ಟಿವಿ ರಘು ನಿರ್ದೇಶಿಸುತ್ತಿದ್ದಾರೆ.

ಅತಿವೃಷ್ಟಿ ಮತ್ತು ಅನಾವೃಷ್ಟಿ ಹೇಗೆ ಆಗಾಗ ಕಾಣಸಿಗುತ್ತದೆಯೋ ಹಾಗೆಯೇ ಗಾಂಧಿನಗರದಲ್ಲಿ ಅದ್ದೂರಿ ಮುಹೂರ್ತವೂ, ಸದ್ದುಗದ್ದಲವಿಲ್ಲದ ಸರಳ ಮುಹೂರ್ತಗಳೂ ನಡೆಯುತ್ತಲೇ ಇರುತ್ತದೆ.





ಇತ್ತೀಚೆಗೆ ಯಾಕೋ ಕನ್ನಡ ಚಿತ್ರರಂಗದಲ್ಲಿ ಅನೇಕ ನಿರ್ದೇಶಕರು, ನಿರ್ಮಾಪಕರು ಅನಾರೋಗ್ಯಕ್ಕೆ ಒಳಗಾಗುತ್ತಿರುವ ಸುದ್ದಿಗಳು ಕೇಳಿಬರುತ್ತಿವೆ.

'ಮಂದಾಕಿನಿ' ಚಿತ್ರದ ನಿರ್ದೇಶಕ ರಮೇಶ್ ಸುರ್ವೆ ಜಯದೇವ ಆಸ್ಪತ್ರೆಯಲ್ಲಿ ಹೃದಯ ತಪಾಸಣೆ ಮಾಡಿಸಿಕೊಂಡುಬಂದಿದ್ದಾರೆ. ಈಗ ಅವರು ತಮ್ಮ ದ್ವಿತೀಯ ಚಿತ್ರದ ತಯಾರಿಯ ಜೊತೆಗೆ ಮೊದಲ ಚಿತ್ರವನ್ನು ಮತ್ತೊಮ್ಮೆ ಬಿಡುಗಡೆ ಮಾಡುವ ಹುಮ್ಮಸ್ಸಿನಲ್ಲಿ ಓಡಾಡುತ್ತಿದ್ದಾರೆ.


ಗಾಂಧಿನಗರದ ಮಹಾನ್ ನಿರ್ದೇಶಕ ಎನಿಸಿರುವ ರಾಜೇಂದ್ರ ಸಿಂಗ್ ಬಾಬು ಕೂಡಾ ನಿಮೋನಿಯಾಕ್ಕೆ ತುತ್ತಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬ ಸುದ್ದಿಯೂ ಕೇಳಿಬಂದಿದೆ. ಬಾಬು, ಮೋಹನ್ ಜೊತೆ ಪಾಲುದಾರಿಕೆಯಲ್ಲಿ ಮೂರ್ನಾಲ್ಕು ಚಿತ್ರಗಳನ್ನು ನಿರ್ಮಿಸುತ್ತಿರುವುದರ ಜೊತೆಗೆ ತಮ್ಮ ಮಗನಿಗಾಗಿ 'ರಕ್ಷಕ' ಚಿತ್ರದಲ್ಲಿ ಮಗ್ನರಾಗಿರುವುದರಿಂದ ಒತ್ತಡಕ್ಕೆ ಒಳಗಾಗಿದ್ದಾರೆ.



ಮತ್ತೊಂದೆಡೆ ಅದ್ದೂರಿ ಚಿತ್ರದ ನಿರ್ಮಾಪಕ ಸಂದೇಶ್ ನಾಗರಾಜ್ ಬಹಳ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರೂ ಈಗ ಚೇತರಿಸಿಕೊಳ್ಳುತ್ತಿರುವ ಸುದ್ದಿ ಬಂದಿದೆ.

ಈ ಮೂವರೂ ಆದಷ್ಟು ಬೇಗ ಗುಣಮುಖರಾಗಲಿ ಎಂಬುದೇ ನಮ್ಮ ಆಶಯ.

'ಬಿರುಗಾಳಿ'ಯಲ್ಲಿ ವೇಣು!



ಇಲ್ಲಿರುವ 'ಬಿರುಗಾಳಿ' ಚಿತ್ರದ ಪೋಸ್ಟರ್ ಅನ್ನು ಒಮ್ಮೆ ನೋಡಿ. ಛಾಯಾಗ್ರಾಹಕ ಹೆಚ್.ಸಿ. ವೇಣು ಅವರ ಹೆಸರು ಬದಲಾಗಿ ಹೆಚ್.ಸಿ. ಮಣಿ ಎಂದು ಅಚ್ಚಾಗಿದೆ. ಇದನ್ನು ನೋಡಿ 'ವೇಣು ಅವರೇ ನೀವು ನಿಮ್ಮ ಹೆಸರನ್ನು ಯಾವಾಗ ಬದಲಾಯಿಸಿಕೊಂಡಿರಿ?' ಎಂದು ಕೇಳಿದಾಗ ಗೊತ್ತಾಗಿದ್ದೆಂದರೆ, ಅದು ಪೋಸ್ಟರ್ ಡಿಸೈನರ್ ಸಾಯಿಕೃಷ್ಣ ಮಾಡಿರುವ ತಪ್ಪು ಎಂದು.



ಪೋಸ್ಟರ್‌ನಲ್ಲಾದ ಈ ತಪ್ಪನ್ನು ಗಮನಿಸದೆ ಹಾಗೇ ಬಿಟ್ಟಿರುವುದು ನಿರ್ದೇಶಕ ಹರ್ಷ ಮಾಡಿರುವ ಮತ್ತೊಂದು ತಪ್ಪು. ಒಟ್ಟಾರೆ ವೇಣು ಛಾಯಾಗ್ರಾಹಕನಾಗಿ ಗಳಿಸಿರುವ ಹೆಸರು ಪೋಸ್ಟರ್ ಮೂಲಕ ಕೆಟ್ಟುಹೋಗಿದೆ!


ಏಟು ಕೊಟ್ಟ ಜಂಗ್ಲಿ ಮಾವ!

'ದುನಿಯಾ' ನಿರ್ಮಾಪಕ ಟಿ.ಪಿ. ಸಿದ್ದರಾಜು ತನ್ನ ಖಾಸಾ ಭಾವಮೈದುನ ವಿಜಯ್ ಮೇಲೆ ಕೆಂಡಾಮಂಡಲರಾಗಿದ್ದಾರೆ. ತನ್ನ ಮಗ ಲೂಸ್ ಮಾದ ಅಲಿಯಾಸ್ ಯೋಗೇಶನ ಕಪಾಳ ಊದಿಕೊಳ್ಳುವಂತೆ ವಿಜಯ್ ಬಾರಿಸಿದ್ದೇ ಸಿದ್ದರಾಜು ಕೋಪಕ್ಕೆ ಕಾರಣವಾಗಿದೆ.

ಕಳೆದೊಂದು ವಾರದಿಂದ ಈ ಪ್ರಕರಣ ಕುರಿತು ಗಾಂಧಿನಗರದಲ್ಲಿ ಹಲವಾರು ಗಾಸಿಪ್‌ಗಳು ಹರಡಿದ್ದವು. ಆಗ ಸ್ವತಃ ಸಿದ್ಧರಾಜು ಅವರೇ ಈ ವಿಚಾರವಾಗಿ 'ಲಂಕೇಶ್'ನೊಂದಿಗೆ ಮಾತನಾಡಿ ಸುದ್ದಿಯ ಸತ್ಯಾಸತ್ಯತೆಯನ್ನು ಹೊರಗೆಡಹಿದರು. ಅಷ್ಟೇ ಅಲ್ಲ "ವಿಜಯ್ ನಡವಳಿಕೆಯ ವಿರುದ್ಧ ಛೇಂಬರ್‌ಗೆ ದೂರು ಕೊಡುತ್ತೇನೆ. ನನ್ನ ಮಗನಿಗೆ ಜೀವ ಬೆದರಿಕೆ ಒಡ್ಡಿರುವುದರ ವಿರುದ್ಧವೂ ಪೊಲೀಸ್ ಆಯುಕ್ತರಿಗೆ ದೂರು ನೀಡಿ ಪ್ರಾಣರಕ್ಷಣೆ ಕೋರುತ್ತೇನೆ" ಎಂದು ಗುಡುಗಿದರು.


ಆದರೆ ನಿಜವಾಗಲೂ ನಡೆದದ್ದು ಏನು?

ಎರಡು ವಾರಗಳ ಹಿಂದೆ ರಾಕ್‌ಲೈನ್ ಸ್ಟುಡಿಯೋದಲ್ಲಿ ಸೂರಿ ನಿರ್ದೇಶನದಲ್ಲಿ ವಿಜಯ್ ನಟಿಸುತ್ತಿರುವ 'ಜಂಗ್ಲಿ' ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು. ಲೂಸ್‌ಮಾದ ನಟಿಸಿರುವ 'ಯೋಗಿ' ಹಾಗೂ ವಿಜಯ್‌ನ 'ಜಂಗ್ಲಿ' ಎರಡೂ ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿರುವುದು ಡ್ಯಾನ್ಸ್ ಮಾಸ್ಟರ್ ಇಮ್ರಾನ್. ಹೀಗಾಗಿ 'ಯೋಗಿ' ಹಾಡಿನ ರಶಸ್ ನೋಡಲು ಇಮ್ರಾನ್ ಲೂಸ್ ಮಾದನನ್ನು ರಾಕ್‌ಲೈನ್ ಸ್ಟುಡಿಯೋಗೆ ಆಹ್ವಾನಿಸಿದ್ದರಂತೆ. ಲೂಸ್ ಮಾದ ಮತ್ತಾತನ ಸ್ನೇಹಿತರು ಕಾರಿನಲ್ಲಿ ಬಂದಿಳಿದಿದ್ದಾರೆ. ತಕ್ಷಣ ಮಾದನ ಕಾರ್ ಡ್ರೈವರ್ ವಿಜಿಗೆ ಮೊದಲೇ ಪರಿಚಯವಿದ್ದುದರಿಂದ 'ನಮಸ್ಕಾರ' ಎಂದಿದ್ದಾನೆ. ಊಟ ಮಾಡುತ್ತಾ ಕುಳಿತಿದ್ದ ವಿಜಿ ಏಕಾಏಕಿ "…. ಮಗನೇ ನನಗೇ ನಮಸ್ಕಾರ ಅಂತಿಯಾ" ಎಂದು ಎಂಜಲು ಕೈಯಲ್ಲೇ ರಪ್ಪನೆ ಕಪಾಳಕ್ಕೆ ಹೊಡೆದಿದ್ದಾನೆ. ಅಷ್ಟೇ ಅಲ್ಲ, ಆತನ ಹಿಂದೆಯೇ ಬಂದ ಲೂಸ್‌ಗೆ ಅವಾಚ್ಯವಾಗಿ ಬೈಯುತ್ತಾ "ನನ್ನ ಸೆಟ್‌ಗೆ ಬರೊಕ್ಕೆ ಎಷ್ಟೋ ಧೈರ್ಯ….. ಮಗನೇ" ಎಂದು ಹೇಳಿ ಆತನ ಕೆನ್ನೆಗೂ ಒಂದೇಟು ಹಾಕಿದ್ದಾನೆ. ಇನ್ನೊಂದು ಏಟು ಬೀಳುವುದರೊಳಗಾಗಿ ಲೂಸು ವಿಜಿಯ ಕೈಯನ್ನು ಹಿಡಿದು ತಡೆದಿದ್ದಾನೆ.


ಟಿ.ಪಿ. ಸಿದ್ದರಾಜು

ಇದಿಷ್ಟು ವಿಜಿಯ ಬಗ್ಗೆ ಸಿದ್ದರಾಜು ಹೇಳುತ್ತಿರುವ ಕಂಪ್ಲೇಂಟು.

ಆದರೆ ವಿಜಿ ಹೇಳುತ್ತಿರುವುದು ಇದಕ್ಕೆ ವ್ಯತಿರಿಕ್ತವಾಗಿದೆ. "ಯೋಗೇಶ ಮತ್ತವನ ಸ್ನೇಹಿತರು ನನ್ನನ್ನು ಕೆಕ್ಕರಿಸಿ ನೋಡುತ್ತಾ ವಿಚಿತ್ರವಾಗಿ ಗುರಾಯಿಸಿದರು. ಅದಕ್ಕೇ ಎರಡು ಬಿಟ್ಟೆ" ಎಂಬುದು ವಿಜಿಯ ಆರೋಪ.



ಲೂಸ್ ಮಾದನದ್ದೂ ಒಂದು ವರ್ಷನ್ ಇದೆ. ನನ್ನ ಮಾವನ ಮುಂದೆ ನಾನು ಎಷ್ಟೇ ಚಿಕ್ಕವನಿರಬಹುದು. ಆದರೆ ಅಷ್ಟೊಂದು ಜನರ ಮುಂದೆ ಹಾಗೆ ಕೆನ್ನೆಗೆ ಹೊಡೆದು ಅವಮಾನ ಮಾಡೋದು ಸರೀನಾ? ಒಂದು ವೇಳೆ ನಾನು ಕೂಡ ಅವರ ಮೇಲೆ ತಿರುಗಿ ಕೈ ಮಾಡಿದ್ದರೆ ಆತನ ಮರ್ಯಾದೆ ಉಳೀತಿತ್ತಾ? ಅದಕ್ಕೆ ನಮ್ಮ ಮಾವ ಹೊಡೆದು ಅವಮಾನ ಮಾಡಿದರೂ ಏನೂ ಮಾತಾಡ್ದೆ ಸುಮ್ನೆ ಬಂದುಬಿಟ್ಟೆ. ಇದು ಲೂಜು ಆಡುತ್ತಿರುವ ಮಾತು.

ಅವ್ನಿಗೆ ಉರಿ, ಅಸೂಯೆ ಜಾಸ್ತಿ!


"ನಾನು ಇವನನ್ನು ನಂಬಿ 'ದುನಿಯಾ' ಸಿನಿಮಾಗೆ ದುಡ್ಡು ಹಾಕ್ಲಿಲ್ಲ ಅಂದ್ರೆ ಇವ್ನನ್ನ ಯಾರೂ ಮೂಸುತ್ತಿರಲಿಲ್ಲ. ಈಗ ನೋಡಿದರೆ ನನ್ನ ಮಗನ ಮೇಲೇ ಕೈಮಾಡುವಷ್ಟು, ನನ್ನನ್ನೇ ಬಾಯಿಗೆ ಬಂದಹಾಗೆ ಬೈಯ್ಯುವಷ್ಟು ಬೆಳೆದುಬಿಟ್ಟಿದ್ದಾನೆ. ಅಷ್ಟೇ ಅಲ್ಲ, ನನ್ನ ಮಗ ಯೋಗೇಶ ಅವನಿಗಿಂತ ಹೆಚ್ಚು ಬೆಳೆಯುತ್ತಿರುವುದು ಅವನಿಗೆ ಸಹಿಸಲು ಆಗುತ್ತಿಲ್ಲ. ನನ್ನ ಮಗ ಅವನಿಗಿಂತ ಹೆಚ್ಚು ಸಿನಿಮಾಗಳಲ್ಲಿ ನಟಿಸುತ್ತಿದ್ದಾನೆ. ತಮಿಳಿನಿಂದ ರಿಮೇಕ್ ಆಗುತ್ತಿರುವ ಕಾದಲ್ ಕೊಂಡೇನ್, ಪೊಲ್ಲಾದವನ್, ಕೆ.ಸಿ.ಎನ್. ಸಂಸ್ಥೆಯವರ ಸಿನಿಮಾ….. ಹೀಗೆ ಎಲ್ಲ ಸೇರಿ ಏಳೆಂಟು ಚಿತ್ರಗಳಿಗೆ ಯೋಗೇಶ ಬುಕ್ ಆಗಿರುವುದೇ ಅವನ ಉರಿಗೆ ಕಾರಣ. ತನ್ನ ಮುಂದೆ ಬೆಳೆದ ಹುಡುಗ ತನಗೇ ವೈರಿಯಂತೆ ನಿಂತಿದ್ದಾನೆ ಅಂತ ಅವನಿಗೆ ಉರಿ….." ಎಂದು ವಿಜಿ ವಿರುದ್ಧ ಸಿದ್ದರಾಜು ಅಸಹನೆ ವ್ಯಕ್ತಪಡಿಸುತ್ತಾರೆ.

ಅಸಲಿಗೆ ವಿಜಯ್ ಆಗಲಿ, ಲೂಸ್ ಮಾದ ಮತ್ತು ಸಿದ್ದರಾಜು ಆಗಲಿ ಪರಕೀಯರೇನಲ್ಲ. ಹೇಳಿಕೇಳಿ ವಿಜಿಯ ಅಕ್ಕನ ಮಗನೇ ಲೂಸ್ ಮಾದ. ತಾನು ಎತ್ತಿ ಆಡಿಸಿದ ಹುಡುಗ ಎಂಬ ಕಾರಣಕ್ಕೆ ವಿಜಿ ಸಲುಗೆಯಿಂದಲೇ ಆತನಿಗೆ ಹೊಡೆದಿರಬಹುದು. ಆದರೆ ವಿಜಿಯ ಈ ಮುಂದಾಲೋಚನೆಯಿಲ್ಲದ ಒರಟು ಸ್ವಭಾವದಿಂದ ಅಚಾತುರ್ಯವೇನಾದರೂ ನಡೆದಿದ್ದರೆ ಯಾರು ಹೊಣೆ?

ಕೊನೆಗೆ ನಿರ್ದೇಶಕ ಸೂರಿ, ಯೋಗರಾಜ್ ಭಟ್, ರಾಕ್‌ಲೈನ್ ವೆಂಕಟೇಶ್ ಮತ್ತವರ ಸಹೋದರ ಭ್ರಮ್ಮಿ ಎಲ್ಲರೂ ವಿಜಿಯನ್ನು ಕರೆದು "ನೀನು ಮಾಡಿದ್ದು ತಪ್ಪು, ಇನ್ನು ಮುಂದೆ ಹಾಗೆಲ್ಲಾ ಮಾಡಬೇಡ" ಎಂದು ಬುದ್ಧಿವಾದ ಹೇಳಿದ್ದಾರೆ. ಬಹುಶಃ ವಿಜಿಗೂ ತನ್ನ ತಪ್ಪಿನ ಅರಿವಾಗಿರಬಹುದು.

ಸಿದ್ದರಾಜು ಸಹ ತಾವೇ ಬೆಳೆಸಿದ ಹುಡುಗ ವಿಜಯ್ ಮಾಡಿದ ತಪ್ಪನ್ನು ಮನ್ನಿಸಿ, ಛೇಂಬರು, ಪೊಲೀಸು, ಕೇಸು ಎಂದು ಹೋಗದೆ ತಮ್ಮ ಮನೆಯ ಈ ಜಗಳವನ್ನು ರಾಡಿ ಮಾಡಿಕೊಳ್ಳದೇ ಪರಿಹರಿಸಿಕೊಂಡರೆ ಚೆಂದ. ವಿಜಯ್ ಕೂಡಾ ಬೇಡದ ವಿವಾದಗಳನ್ನು ಮೈಮೇಲೆಳೆದುಕೊಳ್ಳುವ ಹುಂಬತನವನ್ನು ಬಿಟ್ಟರೆ ಇನ್ನೂ ಒಳ್ಳೆಯದು.

■ ಅರುಣ್ ಕುಮಾರ್.ಜಿ


'ಜಂಗ್ಲಿ' ಮಾದ ವಿಜಯ್



ವಿಜಯಣ್ಣ 50

ಕನ್ನಡದ ಮುನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಪತ್ರಿಕಾ ಸಂಪರ್ಕಾಧಿಕಾರಿಯಾಗಿ ದುಡಿದಿರುವ ಪಿಆರ್‌ಓ ವಿಜಯ್ ಕುಮಾರ್ ಐವತ್ತರ ವಸಂತಕ್ಕೆ ಕಾಲಿಟ್ಟಿದ್ದಾರೆ. ಪತ್ರಕರ್ತರ ಹಾಗೂ ಸಿನಿಮಾದವರ ಮಧ್ಯೆ ಸದಾ ನಗುನಗುತ್ತಲೇ ಕೊಂಡಿಯಾಗಿ ಕೆಲಸ ಮಾಡುವುದು ವಿಜಯ್‌ಕುಮಾರ್ ಸ್ವಭಾವ. ಕಳೆದ ಮೂರು ದಶಕಗಳಿಂದ ಚಿತ್ರರಂಗದ ಆಗುಹೋಗುಗಳನ್ನು ತಮ್ಮ ತಲೆಯೆಂಬ ಹಾರ್ಡ್‌ಡಿಸ್ಕ್‌ನಲ್ಲಿ ತುಂಬಿಕೊಂಡಿರುವ ವಿಜಯ್ ಕುಮಾರ್ ಕನ್ನಡ ಚಿತ್ರರಂಗದ ಮಟ್ಟಿಗೆ ಎನ್‌ಸೈಕ್ಲೋಪಿಡಿಯಾ ಇದ್ದಹಾಗೆ.

ಈ ಕಾರಣಕ್ಕೆ ಚಿತ್ರರಂಗದ ಯಾವೊಬ್ಬರ ವಿವರ ಬೇಕಾದರೂ ಪತ್ರಕರ್ತರೆಲ್ಲರೂ ವಿಜಯಣ್ಣನ ಮೊರೆ ಹೋಗುವುದು. ಇಂಥ ವಿಜಯ್‌ಕುಮಾರ್ ಈಗ ತಮ್ಮ ಜೀವನದ 'ಫಸ್ಟ್ half' ಪೂರೈಸಿದ್ದಾರೆ. ಈ ಹೊತ್ತಿನಲ್ಲಿ ಅವರಿಗೊಂದು ಚೆಂದನೆಯ ಶುಭಾಶಯ ಹೇಳೋಣ.

ಎಬ್ಬಿಸುವ ಗು(ರು)ರಿ!



"ನವೀನ್ ಕೃಷ್ಣ ಮತ್ತು ವಿಜಯ್ ರಾಘವೇಂದ್ರ ಇಬ್ಬರನ್ನೂ ಎದ್ದು ನಿಲ್ಲಿಸುವುದೇ ನನ್ನ ಮುಂದಿರುವ ಗುರಿ" ಎನ್ನುತ್ತಿದ್ದಾರೆ 'ಮಠ' ಖ್ಯಾತಿಯ ನಿರ್ದೇಶಕ ಗುರುಪ್ರಸಾದ್. ಈಗ ತಾನೆ ಮಲಗಿದ್ದ ಜಗ್ಗೇಶ್‌ಗೆ 'ಎದ್ದೇಳು ಮಂಜುನಾಥಾ' ಎಂದಿರುವ ಗುರು ಇದ್ದಕ್ಕಿದ್ದಂತೆ ಎರಡು ಹೊಸ ಚಿತ್ರಗಳನ್ನು ಅನೌನ್ಸ್ ಮಾಡಿದ್ದಾರೆ.

ಮಾರ್ಚ್ ಒಳಗಾಗಿ ಗುರುಪ್ರಸಾದ್ ಏಕಕಾಲದಲ್ಲಿ ಆರಂಭಿಸುತ್ತಿರುವ ಈ ಚಿತ್ರಗಳಲ್ಲಿ ಒಂದರಲ್ಲಿ ನವೀನ್ ಕೃಷ್ಣ ನಾಯಕನಾದರೆ ಮತ್ತೊಂದರಲ್ಲಿ ವಿಜಯರಾಘವೇಂದ್ರ ಹೀರೋ ಅಂತೆ. "ಈ ಬಾರಿ ಏನಾದರೂ ಮಾಡಿ ಈ ಇಬ್ಬರೂ ಪ್ರತಿಭಾವಂತರನ್ನು ಸೋಲಿನ ಸರಪಳಿಯಿಂದ ಹೊರತಂದು ಗೆಲ್ಲಿಸಿಯೇ ತೀರುತ್ತೇನೆ" ಎಂದು ಪಣ ತೊಟ್ಟಿರುವ ಗುರುಪ್ರಸಾದ್ ಸದ್ಯಕ್ಕೆ ಎರಡೂ ಚಿತ್ರಕ್ಕೆ ಸ್ಕ್ರಿಪ್ಟ್ ಬರೆಯುವಲ್ಲಿ ಮಗ್ನರಾಗಿದ್ದಾರೆ.

ಒಂದೊಂದು ಸಿನಿಮಾಗೆ ಎರಡೆರಡು ವರ್ಷ ಸಮಯ ತೆಗೆದುಕೊಳ್ಳುವ ಗುರು ಈ ಎರಡು ಚಿತ್ರಗಳಿಗೆ ಅದೆಷ್ಟು ವರ್ಷ ತೆಗೆದುಕೊಳ್ಳಬಹುದು? ಎಂದು ಗಾಂಧಿನಗರದ ಚಿತ್ರಬ್ರಹ್ಮರು ಗುಣಿಸಿ, ಭಾಗಿಸಿ ಲೆಕ್ಕ ಹಾಕುತ್ತಿದ್ದಾರೆ!

ಚಿತ್ರರಂಗ 75 ಮತ್ತು 'ಕನ್ನಡಪ್ರಭ'




ಚಿತ್ರರಂಗಕ್ಕೆ 75 ವರ್ಷ ತುಂಬುತ್ತಿರುವ ಸಂತಸದ ಈ ಸಂದರ್ಭದಲ್ಲಿ ಏನಾದರೂ ದೊಡ್ಡ ಸಮಾರಂಭ ಮಾಡಬೇಕು ಎಂದು ಒಂದೆಡೆ ಸರ್ಕಾರ, ಇನ್ನೊಂದೆಡೆ ಛೇಂಬರ್‌ನವರು ಮೀಟಿಂಗ್ ಮೇಲೆ ಮೀಟಿಂಗ್ ಮಾಡುತ್ತಿರುವಾಗಲೇ ಅವರೆಲ್ಲರೂ ಬೆಚ್ಚಿಬೀಳುವಂತೆ 'ಕನ್ನಡ ಪ್ರಭ' ಪತ್ರಿಕೆ ಕನ್ನಡ ಚಿತ್ರರಂಗ 75 ಎಂಬ ಸಮಾರಂಭವನ್ನು ಮಾಡಿ ಎಲ್ಲರನ್ನೂ ಬೆಚ್ಚಿಬೀಳಿಸಿದೆ.

ಅರಮನೆ ಮೈದಾನದ ಗಾಯತ್ರಿ ಸಭಾಂಗಣದಲ್ಲಿ ಮೊನ್ನೆ ಶನಿವಾರ ನಡೆದ ಅದ್ದೂರಿ ಸಮಾರಂಭದಲ್ಲಿ ಕನ್ನಡ ಚಿತ್ರರಂಗಕ್ಕೆ ಅನುಪಮ ಸೇವೆ ಸಲ್ಲಿಸಿದ ಪ್ರತಿಮಾದೇವಿ, ಹರಿಣಿ, ಮೈನಾವತಿ, ಪಾರ್ವತಮ್ಮ ರಾಜ್‌ಕುಮಾರ್, ಸಿದ್ದಲಿಂಗಯ್ಯ, ದ್ವಾರಕೀಶ್, ಲಕ್ಷ್ಮಣ್ ಮತ್ತು ಕೆ.ಸಿ.ಎನ್. ಗೌಡರನ್ನು ಸನ್ಮಾನಿಸಿದೆ.

ಈ ಎಂಟು ಜನರ ಮುಖಾಂತರ ಸೂಕ್ಷ್ಮವಾಗಿ 75 ವರ್ಷದ ಇತಿಹಾಸವನ್ನು ಪತ್ರಿಕೆ ಅನಾವರಣ ಮಾಡಿದಂತಾಗಿದೆ. ಇದನ್ನೇ ಛೇಂಬರ್‌ನವರು ಅಥವಾ ಸರ್ಕಾರದವರು ಮಾಡುವುದಾದರೆ ಕನಿಷ್ಠ ನೂರೈವತ್ತು ಜನರಿಗಾದರೂ ಸನ್ಮಾನ ಮಾಡಿ ಅದ್ವಾನ ಮಾಡುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ.

ಅದೇನೇ ಇರಲಿ, ಸಿನಿಮಾದವರಿಗೆ ಒಂದು ಕಾಲದಲ್ಲಿ ತಮ್ಮ ಸುದ್ದಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದರೆ ಮಾತ್ರ ಸಮಾಧಾನವಾಗುತ್ತಿತ್ತು. ಸಿನಿಮಾ ಸಾಪ್ತಾಹಿಕ ಆರಂಭಿಸಿದ ಮೊದಲ ಪತ್ರಿಕೆಯೆಂದರೆ, ಕನ್ನಡಪ್ರಭ. 1973ರಲ್ಲಿ ಅದು 'ಚಿತ್ರ ಪ್ರಭ' ಸಾಪ್ತಾಹಿಕದ ಮೂಲಕ ರಂಗಿನ ಲೋಕದ ಜನರ ನಡುವೆ ಸಂಪರ್ಕ ಬೆಳೆಸಿತು. ಈ ನಿಟ್ಟಿನಲ್ಲಿ ಈ ಸಮಾರಂಭ ಹೆಚ್ಚು ಅರ್ಥಪೂರ್ಣವಾಗಿದೆ. ಹಾಡುಗಳ ಮುಖಾಂತರ ಬಿ.ಆರ್. ಛಾಯಾ ತಂಡ 75 ವರ್ಷಗಳ ಇತಿಹಾಸವನ್ನು ಸುಮಧುರವಾಗಿ ತಿಳಿಸಿದ್ದೇ ಇನ್ನೊಂದು ವಿಶೇಷ. ಈ ಸುಂದರ ಸಮಾರಂಭದ ಜವಾಬ್ದಾರಿಯನ್ನು ಹೊತ್ತಿದ್ದ 'ಕನ್ನಡಪ್ರಭ'ದ ಸಿನಿಮಾ ಪತ್ರಕರ್ತರಾದ ಉದಯ ಮರಕಿಣಿ, ಜೋಗಿ, ಚೇತನ್ ನಾಡಿಗೇರ್ ಮತ್ತು ಡಾ. ವೆಂಕಟೇಶ್ ಅಚ್ಚುಕಟ್ಟಾಗಿ ನಿಭಾಯಿಸಿದರು.

ತಮಿಳಿನಲ್ಲಿ ಕನ್ನಡದ ತೇಜಸ್!



ಮಾಜಿ ಪತ್ರಕರ್ತ ಪ್ರವೀಣ್ ನಾಯಕ್ ಈ ಹಿಂದೆ ನಿರ್ದೇಶಿಸಿದ್ದ 'ಮೀಸೆ ಚಿಗುರಿದಾಗ' ಚಿತ್ರದ ನಾಯಕ ತೇಜಸ್ ಈಗ ತಮಿಳಿನ ದೊಡ್ಡ ಬ್ಯಾನರ್‌ನ ಚಿತ್ರವೊಂದರಲ್ಲಿ ನಟಿಸುತ್ತಿದ್ದಾನೆ. ನಾಲ್ಕೈದು ವರ್ಷಗಳ ಹಿಂದೆ ಈತ 'ಮೀಸೆ ಚಿಗುರಿದಾಗ' ಚಿತ್ರದಲ್ಲಿ ನಟಿಸಿದಾಗ ನಿಜಕ್ಕೂ ಆತನಿಗೆ ಆಗಿನ್ನೂ ಮೀಸೆ ಚಿಗುರಿರಲಿಲ್ಲ; ಚಿತ್ರವೂ ಗೆಲ್ಲಲಿಲ್ಲ. ನಂತರ ನಟನೆಗೆ ಅಲ್ಪವಿರಾಮ ಹಾಕಿ ತನ್ನ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಮುಂದುವರೆಸಿ, ಆಮೇಲೆ ಇನ್‌ಫೋಸಿಸ್ ಉದ್ಯೋಗಿಯಾಗಿದ್ದ ತೇಜಸ್ ಈಗ ತಮಿಳಿನ 'ಕಾದಲುಕ್ಕು ಮರಣಂ ಇಲ್ಲೈ' ಚಿತ್ರದಲ್ಲಿ ನಾಯಕನಟನಾಗಿ ಅಭಿನಯಿಸುತ್ತಿದ್ದಾನೆ.

'ಕಾದಲನ್', 'ಜಂಟಲ್‌ಮನ್'ನಂಥ ದೊಡ್ಡ ದೊಡ್ಡ ಹಿಟ್ ಚಿತ್ರಗಳನ್ನು ನಿರ್ಮಿಸಿದ್ದ ಕೆ.ಟಿ. ಕುಂಜುಮನ್ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಖ್ಯಾತ ನಿರ್ದೇಶಕ ಶಂಕರ್ ಬಳಿ ಸಹಾಯಕರಾಗಿದ್ದ ಬಾಲಾಜಿ ಈ ಸಿನಿಮಾವನ್ನು ನಿರ್ದೇಶಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಕುಂಜುಮನ್ ಬ್ಯಾನರಿನ ಮತ್ತೊಂದು ಚಿತ್ರಕ್ಕೂ ಈಗಾಗಲೇ ಈತ ಸಹಿ ಹಾಕಿದ್ದಾನೆ. ಪಟಪಟನೆ ಕನ್ನಡ ಮಾತಾಡುವ ನಮ್ಮ ನೆಲದ ಹುಡುಗ ತೇಜಸ್ ಈಗ ತಮಿಳು ಚಿತ್ರರಂಗವೆಂಬ ದೊಡ್ಡ ಸಮುದ್ರಕ್ಕೆ ಹಾರಿದ್ದಾನೆ. ಮುಂದೆ ಈತ ಕನ್ನಡಕ್ಕೂ ದಕ್ಕುವಂತಾಗಲಿ.



ಪರಿಚಯ
ರೇಖಾ

ಬಣ್ಣವಿಲ್ಲದಾ ಲೋಕ

ಮೊನ್ನೆ ತಾನೆ ಆರಂಭವಾದ 'ಬಣ್ಣ ಬಣ್ಣದ ಲೋಕ' ... ಚಿತ್ರ ಆರಂಭದಲ್ಲೇ ಆಭಾಸಗಳಿಗೆ ಸಿಲುಕಿ ತನ್ನ ಬಣ್ಣ ಕಳೆದುಕೊಳ್... ಚಿತ್ರ ಆರಂಭವಾದ ದಿನವೇ ಅದರ ನಿರ್ದೇಶಕ ಮತ್ತು ನಿರ್ಮಾ... ಮೂರ್ನಾಲ್ಕು ಬಾರಿ ಮಾಧ್ಯಮದವರ ಕ್ಷಮೆ ಕೋರಿ ದಾ... ನಿರ್ಮಿಸಿದರು.



ರಾಮ್‌ಪ್ರಸಾದ್, ಶ್ರಾವಣಿ, ಶಶಿಕಲಾ

ಚಿತ್ರದ ಮುಹೂರ್ತವನ್ನು ಚಿತ್ರೀಕರಿಸಲು ಹೋದ ಖ... ವಾಹಿನಿಯ ವರದಿಗಾರನ ಮೇಲೆರಗಿ ಬಂದ ಚಿತ್ರದ ನಿರ್ದೇಶ... ನಾಯಕ ನಟ ರಾಮ್ ಪ್ರಸಾದ್ ನಂತರ ಮಾಡಿದ ತಪ್ಪಿಗಾಗಿ ... ಯಾಚಿಸಿದ. ಮೊದಲ ದಿನವೇ ಸೆಟ್‌ನಲ್ಲಿ ನಾಯಕಿಯ ... ಎಗರಾಡಿ ಅಲ್ಲಿ ನೆರೆದಿದ್ದವರಿಂದಲೂ ಈ ರಾಂ ಪ್ರಸ... ಮುಕ್ಕುಗಿಸಿಕೊಂಡ.

ಇನ್ನು ಸಂಜೆ ಪತ್ರಿಕಾಗೋಷ್ಠಿ ನಂತರ ನಾಯಕಿ ಶ್ರಾವಣಿ... ಸಂದರ್ಶಿಸಲು ಹೋದ ಪತ್ರಕರ್ತನಿಗೆ ಚಿತ್ರದ ನಿರ್ಮಾಪಕಿ ಶಶಿ... "ಈಗ ಆಕೆಯನ್ನು ಮಾತನಾಡಿಸಬೇಡಿ. ಎದ್ದು ಹೋಗ್ರಿ ನಾಳೆ ಬ... ಎಂದು ರಫ್ ಅಂಡ್ ಟಫ್ ಆಗಿ ಹೇಳಿದರು. ಪತ್ರಿಕಾಗೋ... ಕರೆದು "ನಾಳೆ ಬನ್ನಿ" ಎಂದು ಅವಮಾನಿಸಿದರೆ ಪತ್ರಕರ್ತರಾ... ಸುಮ್ಮನೇ ಬಿಡ್ತಾರಾ?

ಪರಿಸ್ಥಿತಿ ಕೈಮೀರುತ್ತಿರುವುದನ್ನರಿತ ಆಕೆ ಕೊನೆಗೆ ಕುಡಿಯ... ಗ್ಲಾಸನ್ನು ಪಕ್ಕಕ್ಕಿಟ್ಟು 'ಐ ಯಾಮ್ ವೆರಿ ಸಾರಿ' ಎಂದು ಹೇಳಿ ... ಕೋರಿದರು.

ಈ ಚಿತ್ರದ ಕಥೆ, ಚಿತ್ರಕಥೆ, ನಿರ್ದೇಶನ ಜೊತೆಗೆ ನಾಯ... ಆಗಿರುವ ರಾಮ್ ಪ್ರಸಾದ್‌ನನ್ನು "ಎಲ್ಲಾ ಜವಾಬ್ದಾರಿಯನ್ನು ... ಹೊತ್ತಿದ್ದೀರಲ್ಲಾ, ನಿಮಗೆ ಸಿನಿಮಾದ ಅನುಭವವಿದೆಯಾ?" ... ಕೇಳಿದರೆ "ನಾನು ಹದಿನೈದು ವರ್ಷಗಳಿಂದ ಪೋಸ್ಟರ್ ಅಂಟಿಸೋ... ಹೇಗೆ ಎಂದು ನೋಡುತ್ತಿದ್ದೇನೆ. ಬೇರೆ ಡಿಪಾರ್ಟ್‌ಮೆಂಟುಗಳ ಬಗ್ಗೆ... ಅಲ್ಪ ಸ್ವಲ್ಪ ತಿಳಿದಿದ್ದೇನೆ. ಈ ಚಿತ್ರದಲ್ಲಿ ನಿರ್ಮಾಪಕರಿಗೆ ಲ... ಗ್ಯಾರೆಂಟಿಯಿಲ್ಲ, ನಷ್ಟ ಆಗಲ್ಲ" ಎಂದು ಪೆಕರುಪೆಕರಾಗಿ ಉತ್ತರಿಸು...

ಚಿತ್ರರಂಗದ ಓನಾಮ ತಿಳಿಯದ ಇಂತಹ ಮಂದಿ ಬೆಳ್ಳಿತೆ... ಮೇಲೆ ಇನ್ನು ಅದೆಂತಹ 'ಬಣ್ಣ ಬಣ್ಣ' ಬಡಿಸುತ್ತಾರೆ ... ಯಾರೂ ಗ್ಯಾರಂಟಿಯಾಗಿ ಕಾಯುವುದಿಲ್ಲ.



ಮಸ್ತ್ ಮಜಾ ನೋಡಿ

'ಮಸ್ತ್ ಮಜಾ ಮಾಡಿ' ಎಂಬ ಬಹುನಿರೀ... ಚಿತ್ರ ತೆರೆಕಂಡಿದೆ. ಚಿತ್ರದ ಹೆಸರೇ ಸೂಚಿಸುವಂತೆ ಇ... ಕಥೆಗಿಂತ ಮಜಾಕ್ಕೇ ಹೆಚ್ಚು ಒತ್ತು ನೀಡಲಾಗಿದೆ. ಹೀಗಾಗಿ ಕಥೆ, ಲಾ... ಸಿದ್ಧಾಂತ ಇವೆಲ್ಲವನ್ನೂ ಮರೆತು ನೀವು ಚಿತ್ರ ನೋಡಿದರೆ ನಿ... ನಿರ್ದೇಶಕ ಅನಂತ ರಾಜು ಎರಡೂವರೆ ಗಂಟೆಗಳ ಕಾಲ ಹೊಟ್ಟೆಹುಣ್ಣಾಗು... ನಕ್ಕುನಲಿಸುತ್ತಾರೆ.

ಒಂದೇ ಒಂದು ಬೇಸರದ ವಿಷಯವೆಂದರೆ, ಇದು ಹಿಂದಿಯ 'ಧಮ... ಚಿತ್ರದ ರಿಮೇಕ್. ಅದರ ಜೊತೆಗೆ ಸ್ವಲ್ಪ 'ಗೋಲ್‌ಮಾಲ್' ಚಿತ್ರದ ದೃಶ್ಯಗ... ಬೆರೆಸಿದ್ದಾರೆ. ಏನೇ ಇರಲಿ, ಲಾಂಗು ಮಚ್ಚು ಹೊಡೆದಾಟದ ಬದಲು, ... ಕೊಟ್ಟ ಪ್ರೇಕ್ಷಕರು ಒಂದಿಷ್ಟು ನಗುವಂಥಾ ಕಥೆಯನ್ನು ಆಯ್ಕೆ ಮಾಡಿದ್ದ... ನಿರ್ದೇಶಕ ಅನಂತರಾಜು ಅವರನ್ನು ಒಪ್ಪಬಹುದು.

ಇನ್ನೊಂದು ವಿಶೇಷವೆಂದರೆ, ಇದೊಂದು ರೀತಿಯಲ್ಲಿ ಅದ್ದೂರಿ ತಾರಾಗ... ಚಿತ್ರವಾಗಿದೆ. ಸುದೀಪ್ ಮುಖ್ಯಪಾತ್ರದಲ್ಲಿ ಕಾಣಿಸಿದರೂ ಸ್ಕೋರ್ ಮಾಡುವ... ಯುವ ನಟರುಗಳಾದ ವಿಜಯ್ ರಾಘವೇಂದ್ರ, ನಾಗಕಿರಣ್, ಕೋವ... ಮತ್ತು ದಿಗಂತ್. ಚಿತ್ರದ ಕೊನೆಯಲ್ಲಿ ಉಪೇಂದ್ರ ಒಂದು ಹಾಡಲ್ಲಿ ಕುಣಿದು ಕುಪ್ಪಳಿಸುವ... ಉಪ್ಪಿ ಜೊತೆಗೆ ಚಿತ್ರರಂಗದ ಹನ್ನೆರಡು ಜನ ನಾಯಕಿಯರು ಸುತ್ತಾಡುವುದು ಪ್ರೇ... ಪಾಲಿಗೆ ಬೋನಸ್. ಚೆಲ್ಲುಚೆಲ್ಲು ಹುಡುಗಿ ಜೆನ್ನಿಫರ್‌ಗೆ ಕೆಲಸವೇ ಕಡಿಮೆ. ... ಹಾಸ್ಯನಟರಾದ ಸಾಧುಕೋಕಿಲ, ರಂಗಾಯಣ ರಘು, ಟೆನ್ನಿಸ್ ಕೃಷ್ಣ, ಸಿಹಿಕಹಿ ಚ... ಮೊದಲಾದವರು ಕೂಡಾ ಕಿಲಕಿಲ ನಗಿಸುತ್ತಾರೆ. ರಾಂನಾರಾಯಣ್ ಬರೆದ ಸಂಭಾ... ಕಚಗುಳಿಯಿಡುತ್ತದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore